(JANAB J. MOHAMED IMAM)
motions. We were under the impression . . . .

Mr. SPEAKER.—They used to do so on former occasions.

Janab J. MOHAMED IMAM.—Following the example set up in the Parliament, we were under the impression that they may not send cut motions at all, as sending any cut motions by them would be superfluous. Secondly according to the distribution of demands we find in the last 3 or 4 days there is rush. For example on 11th July there are 8 demands; on 10th July 6 demands and in some cases 5 demands. We are anxious to cover up all these departments. I feel that there is need to extend the period by at least two days. This is a point for consideration.

Sri A. BHEEMAPPA NAIK (Molakalmuru).—May I make one correction to his statement? It is not the Members of the Treasury Bench that have given notice of cut motions.

Janab J. MOHAMED IMAM.—All right, the members of the Congress Party. . . .

Mr. SPEAKER.—He meant that.

Janab J. MOHAMED IMAM.—Another thing I would submit is: you have been pleased to fix this period in consultation with the Leader of the House. It would have been better if the other leaders also had been consulted. Anyhow that is a matter left to you.

Mr. SPEAKER.—As regards the programme, the Leader of the Opposition party was consulted.

Janab J. MOHAMED IMAM.—Now the feeling of Members is that, if it is possible, the period may be extended by a couple of days. Especially on the last day there are as many as 8 demands and very important cut motions under them have to be tabled. I think not more than 3 demands can be taken up each day.

Sri A. G. RAMACHANDRA RAO (Minister for Law and Education).—The Government will consider it.

Mr. SPEAKER.—Besides, this is the first time when 10 days have been allotted. So far, only 4 days were used to be allotted. However, we will see how we can adjust as we progress.

These are the agreed cut motions that are proposed to be taken up for discussion to-day—1, 2, 4, 7, 10, 12, 14, 16, 20, 22, 24, 26, 29, 30, 34 and 35.

Sri M. SHANKAR LINGE GOWDA (Nagamangala).—What about cut motion No. 33?

Mr. SPEAKER.—Subject to correction, this is the list that is given to me by Hon'ble Members. The Hon'ble Member wants No. 33 also to be included?

Sri M. SHANKAR LINGE GOWDA.—Yes.

Janab J. MOHAMED IMAM.—Instead No. 16, we can have No. 17.

Mr. SPEAKER.—I will repeat the numbers. 1, 2, 4, 7, 10, 12, 14, 17, 20, 22, 24, 26, 29, 30, 33, 34 and 35.

BUDGET FOR 1952-53—DEMAND FOR GRANTS.

Second Stage.

Demand No. 1—Land Revenue

7. Land Revenue.

Mr. SPEAKER.—Motion moved:

"That a sum not exceeding Rs. 10,80,000 be granted to Government to complete the sum necessary to defray the charges which will come in course of payment during the year ending 31st day of March 1953, in respect of 'Land Revenue'."

Cut motions will now be taken up. Shall we prescribe a time-limit of five minutes for each cut motion?

Sri M. LINGANNA (Nanjangud).—The mover may be given a little more time.

Mr. SPEAKER.—Some of them will not take even three minutes.

Sri L. SIDDAPPA (Channagiri).—The Hon'ble Minister in charge has got to move the demands.

Mr. SPEAKER.—That was the old practice. In fact, we followed it in the last session.

Sri M. LINGANNA.—The mover of the cut motion may be given 7 minutes and the subsequent speakers 5 minutes each. That will be equitable.

Mr. SPEAKER.—The mover may take 10 minutes and others 5 minutes.

ಶ್ರೀ ಎಚ್. ಕೆ. ಸಿದ್ದಯ್ಯನವರು (ಬೇಲೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನದೊಂದು ಪಾಯಿಂಟ್ ಆಫ್ ಆರ್ಡರು ಇದೆ. ಇಂದು ಇಲ್ಲಿ ನಡೆಯತಕ್ಕ ನಡವಳಿಕೆಗಳೆಲ್ಲಾ ಇಂಗ್ಲೀಷಿನಲ್ಲೇ ನಡೆಯುತ್ತಿವೆ. ಹಿಂದೆ ನಾವು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಕನ್ನಡದಲ್ಲೇ ಮುದ್ರಿಸಿ ಹಂಚುತ್ತಿದ್ದರು. ಕನ್ನಡಕ್ಕೇ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಹೇಳುತ್ತಿರುವ ಕಾಲದಲ್ಲೂ ಪ್ರತಿಯೊಂದೂ ಇಂಗ್ಲೀಷಿನಲ್ಲೇ ನಡೆಯುತ್ತಿದೆ. ಆದ್ದರಿಂದ ಈಗ ಮಾತನಾಡತಕ್ಕ ಮಾನ್ಯ ಸದಸ್ಯರು ಕನ್ನಡದಲ್ಲೇ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ಈ ಬೇಡಿಕೆಗೆ ಸಾಕಷ್ಟು ಮನಸ್ಸು ಕೊಟ್ಟಿಲ್ಲವೆಂದು ನಾನು ಭಾವಿಸುತ್ತೇನೆ. ಇನ್ನು ಮುಂದಕ್ಕಾದರೂ ಈ ಸಭೆಯ ಕಾರ್ಯಕಲಾಪಗಳನ್ನೆಲ್ಲಾ ಕನ್ನಡದಲ್ಲೇ ನಡೆಸುವಂತೆ ಮಾಡಬೇಕೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು (ದಾವಣಗೆರೆ)-ಈ ಸೂಚನೆಗೆ ನಾನು ಬೆಂಬಲ ನೀಡುತ್ತೇನೆ.

Discriminating policy of Government in regard to land revenue remission in distress areas.

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—ಸ್ವಾಮಿ, ನನ್ನ ಕತ್ತರಿ ನಿರ್ಣಯವು ಈ ರೀತಿಯಾಗಿದೆ—

> "The demand under the head '7. Land Revenue' for Rs. 10,80,000 be reduced by Rs. 100 (to raise a debate on the discriminating policy of the Government in regard to the remission of land revenue in distress areas)"

ಅದನ್ನು ನಾನು ಮಂಡಿಸುತ್ತೇನೆ.

ಸ್ವಾಮಿ, ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುವ ಉದ್ದೇಶವಾದರೂ ಇಷ್ಟೆ—ಈ ಸಭೆಯ ಮಾನ್ಯ ಸದಸ್ಯರನೇಕರು ಈಗಾಗಲೇ ತಿಳಿಸಿರುವ ಹಾಗೆ ಮೈಸೂರು ಸಂಸ್ಥಾನದ ಅನೇಕ ಭಾಗಗಳಲ್ಲಿ ಅಭಾವ ಪರಿಸ್ಥಿತಿ ಬಂದಿದೆ. ಈ ಅಭಾವ ಪರಿಸ್ಥಿತಿಯು ಸ್ವಲ್ಪ ಹೆಚ್ಚು ಕಡಮೆ ಸಂಸ್ಥಾನಾದ್ಯಂತವೂ ಹರಡಿಕೊಂಡಿದೆ; ಎಂದರೆ—ತಮಗೆಲ್ಲರಿಗೂ ತಿಳಿದಿರುವಂತೆ.—ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ, ಚಿತ್ರದುರ್ಗ, ಬೆಂಗಳೂರು ಜಿಲ್ಲೆಯ ಕೆಲವು ಭಾಗ ಮತ್ತು ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಅಭಾವ ಪರಿಸ್ಥಿತಿಯು ಕಂಡುಬರುತ್ತಿದೆ. ಕೆಲವು ಮಾನ್ಯ ಸದಸ್ಯರು ಕಳುಹಿಸಿದ್ದ ಪ್ರಶ್ನೆಗಳಿಗೆ ಉತ್ತರ ಕೊಡುವುದರಲ್ಲಿ ಈ ಸಂಬಂಧವಾದ ಪ್ರಶ್ನೆಗಳು ಚರ್ಚೆಗೆ ಬಂದಾಗ, ಸರ್ಕಾರದವರು ಅವುಗಳಿಗೆ ಉತ್ತರವನ್ನೊದಗಿಸುತ್ತಾ ಹೇಗೆ ಸಂಸ್ಥಾನದಲ್ಲಿ ಅಭಾವ ಪರಿಸ್ಥಿತಿಯಿರುತ್ತದೆಯೆಂಬುದನ್ನು ಒಪ್ಪಿಕೊಂಡಿದ್ದಾರೆ. ಅಂದರೆ ಈ ಒಂದು ಸಮಸ್ಯೆಯನ್ನು ಪರಿಹರಿಸುವ ಸಮಯದಲ್ಲಿ, ಮಾನ್ಯ ಸರ್ಕಾರದವರು ಏನು ಮಾಡಿದ್ದಾರೆಂದರೆ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅವರ ಸರ್ವಶಕ್ತಿ ಉಪಯೋಗಿಸಿ ಜನರಿಗೆ ಪರಿಹಾರ ನೀಡಿದ್ದಾರೆ. ಈ ಮೂರು ಜಿಲ್ಲೆಗಳಿಗೆ ಪರಿಹಾರ ಕೊಟ್ಟಿದ್ದಾರೆ, ಬೇರೆ ಜಿಲ್ಲೆಗಳಿಗೆ ಕೊಟ್ಟಿಲ್ಲ ಎಂದು ಹೇಳುತ್ತಿಲ್ಲ. ಕೋಲಾರ ಜಿಲ್ಲೆಯಲ್ಲಿರುವ ಹಾಗೆ ತುಮಕೂರು ಜಿಲ್ಲೆಯಲ್ಲಿರುವಹಾಗೆ, ಚಿತ್ರದುರ್ಗ ಜಿಲ್ಲೆಯಲ್ಲಿರುವಹಾಗೆ, ಮೈಸೂರು ಜಿಲ್ಲೆಯಲ್ಲೂ ಅಭಾವ ಪರಿಸ್ಥಿತಿಯಿದೆ; ಈ ವಿಷಯವನ್ನು ಸಭೆಯ ಗಮನಕ್ಕೆ ತರಬೇಕೆಂಬುದೇ ಈ ಖೋತಾ ನಿರ್ಣಯದ ಉದ್ದೇಶ. ಕೋಲಾರ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿಯನ್ನು ನೀಗುವುದಕ್ಕೆ 6 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರದವರು ಮೀಸಲಾಗಿಟ್ಟಿದ್ದಾರೆ. ಬಡ್ಜೆಟ್ಟಿನಲ್ಲೂ ಕೂಡ ಹಿಂದಿನ ಸರ್ಕಾರದವರು ಹತ್ತು ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದರು. ಅದರ ಜೊತೆಗೆ ಈಗಿನ ಸರ್ಕಾರ ಕೂಡ ಸುಮಾರು ಹತ್ತು ಲಕ್ಷ ರೂಪಾಯಿಗಳ ಹೆಚ್ಚು ಸಹಾಯಮಾಡಿದ್ದಾರೆ. ಈ ಅಭಾವ ಪರಿಸ್ಥಿತಿಗೆ ನಿಜವಾದ ಕಾರಣವೇನು, ಇಡೀ ಸಂಸ್ಥಾನದ ಪ್ರಜೆಗಳನ್ನು ಜವಾಬ್ದಾರಿ ಸರ್ಕಾರ ಯಾವ ದೃಷ್ಟಿಯಿಂದ ನೋಡಬೇಕು, ಎಂಬುದನ್ನು ರೆವಿನ್ಯೂ ಮಂತ್ರಿಗಳಿಗೆ ಹೇಳಬೇಕೆಂಬ ಆಸೆ ನನಗಿದೆ. ಇಡೀ ಸಂಸ್ಥಾನದಲ್ಲಿ 90 ಲಕ್ಷ ಪ್ರಜೆಗಳಲ್ಲಿ ಯಾರಿಗೆ ಕಷ್ಟ ಬಂದರೂ ಸಹ ಅದನ್ನು ಪರಿಹಾರ ಮಾಡುವ ಜವಾಬ್ದಾರಿ ಪ್ರಜಾಸರ್ಕಾರದ ಮೇಲಿದೆ. ಅದು ಅವರ ಆದ್ಯ ಕರ್ತವ್ಯ ಎಂಬುದು ನನ್ನ ಭಾವನೆ. ನಮ್ಮ ಮೈಸೂರು ಸಂಸ್ಥಾನದ ಕೋಲಾರ ಜಿಲ್ಲೆಯ ಪ್ರಜೆ ಕಷ್ಟಪಡುತ್ತಿದ್ದಾರೆ. ಅವರಿಗೆ ಅನ್ನವಿಲ್ಲದೆ, ದನಗಳಿಗೆ ಹುಲ್ಲಿಲ್ಲದೆ ಹಾಹಾಕಾರವಾಗಿ ದನಗಳು ಸಾಯುವುದಕ್ಕೂ ಅವಕಾಶವಾಯಿತು. ಸರ್ಕಾರ ಅವರ ಕೈಲಾದ ಸಹಾಯ ನೀಡಿದರು. ಅದಕ್ಕಾಗಿ ನಿಜವಾಗಿಯೂ ಅವರು ಅಭಿನಂದನೀಯರು. ಹಾಗೆ ಸಹಾಯ ನೀಡುವಾಗ ಸರ್ಕಾರದವರು ಬೇರೆ ಜಿಲ್ಲೆಗಳಲ್ಲಿರುವ ಪರಿಸ್ಥಿತಿಯನ್ನು ಮರೆಯಬಾರದು. ಮಾನ್ಯ ಮಾಜಿ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಆಯವ್ಯಯ ಪಟ್ಟಿಯ ವಿಷಯದಲ್ಲಿ ಮಾತನಾಡುತ್ತಾ ಯಳಂದೂರು ತಾಲ್ಲೂಕಿನಲ್ಲಿ ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡಿ ಕೆರೆ ರಿಪೇರಿ ಮಾಡಿದೆಯೆಂದು ಹೇಳಿದರು. ಅದನ್ನು ಆಬಾದುಮಾಡುವುದಕ್ಕೆ ಸುಮಾರು ಎರಡು ವರ್ಷಗಳ ಹಿಂದೆ, ಯಳಂದೂರು ತಾಲ್ಲೂಕು, ಗುಂಡಲುಪೇಟೆ ತಾಲ್ಲೂಕು, ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಮಳೆಯಿಲ್ಲದೆ ಕೋಲಾರ ಜಿಲ್ಲೆಯ ಪರಿಸ್ಥಿತಿ ಅಲ್ಲಿಯೂ ಒದಗಿ ಹುಲ್ಲಿನ ಅಭಾವ, ಆಹಾರದ ಅಭಾವ ಉಂಟಾಯಿತು. ಅಲ್ಲಿ ಅನೇಕರು ಗೆಡ್ಡೆ ಗೆಣಸುಗಳನ್ನು ಮತ್ತು ಈಚಲ ಗಿಣ್ಣನ್ನು ತಿಂದು ಜೀವಿಸಬೇಕಾಯಿತು. ಆ ಸಮಯದಲ್ಲಿ ಶ್ರೀ ಮರಿಯಪ್ಪನವರು ಅಲ್ಲಿನ ಕರೆದುರಸ್ತುಮಾಡಿಸಿ ಅಭಾವನೀಗಲು ಸಹಾಯ ನೀಡಿದ್ದಾರೆ. ಈಗಲೂ ಕೂಡ ಆ ಪ್ರಾಂತದಲ್ಲಿ ಅಭಾವ ಇದ್ದೇ ಇದೆ. ಆದ್ದರಿಂದ ಅಲ್ಲಿನ ಪರಿಸ್ಥಿತಿ ಉಲ್ಬಣಾವಸ್ಥೆಗೆ ಬರದಂತೆ ನೋಡಿಕೊಳ್ಳಬೇಕು. ಆ ಸಮಯದಲ್ಲಿ ಜನರಿಗೆ ಹತ್ತು ಸೇರು ದವಸವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದಕ್ಕೆ ಅವಕಾಶ ಕೊಡುವಂತೆ ಆಹಾರ ನಿಯಂತ್ರಣವನ್ನು ಸಡಿಲಮಾಡಿದಾಗ ಹುಣಸೂರು, ಹೆಗ್ಗಡದೇವನಕೋಟೆ, ತಾಲ್ಲೂಕುಗಳಲ್ಲಿ ರಾಗಿ ತಂದು ಹೊಟ್ಟೆತುಂಬ ತಿಂದು ಅಭಾವವನ್ನು ನೀಗಿಕೊಂಡರು. ಹಿಂದೆ ಎರಡುವರ್ಷಗಳ ಕೆಳಗಿದ್ದಂಥ ಪರಿಸ್ಥಿತಿ ಈಗಲೂ ಇದೆ. ಈ ವಿಷಯವನ್ನು ಆಹಾರದ ಅಭಾವ ಪರಿಸ್ಥಿತಿ ಹೇಗಿದೆಯೆಂಬುದನ್ನು ಮಂತ್ರಿಗಳಿಗೆ ತಿಳಿಸಲು ಹೇಳುತ್ತಿದ್ದೇನೆ. ಮೈಸೂರು ಜಿಲ್ಲೆಯನ್ನೂ ಕ್ಷಾಮಪೀಡಿತ ಜಿಲ್ಲೆಗಳ ಜೊತೆಗೆ ಸೇರಿಸಿಕೊಳ್ಳಬೇಕು. ಈಗಾಗಲೇ ನಂಜನಗೂಡು, ಗುಂಡಲುಪೇಟೆ, ಟೀ. ನರಸೀಪುರ, ಯಳಂದೂರು

(ಶ್ರೀ ಎಂ. ಲಿಂಗಣ್ಣನವರು.)

ತಾಲ್ಲೂಕುಗಳಲ್ಲಿ ಮಳೆಯಿಲ್ಲವೆಂದು ಅನೇಕ ಮಿತ್ರರು ನನಗೆ ಕಾಗದ ಬರೆಯುತ್ತಿದ್ದಾರೆ. ನಾನೂ ಸಹ ಕಣ್ಣಾರೆ ನೋಡಿರುವ ಹಾಗೆ, ನಂಜನಗೂಡು ತಾಲ್ಲೂಕಿನಲ್ಲಿ 2½ ಅಡಿಗಳವರೆಗೆ ಬೆಳೆದಿದ್ದ ಜೋಳದ ಫಸಲು ಒಣಗಿಹೋಗಿದೆ. ನಿಜವಾಗಿಯೂ ರೈತನಿಗೆ ಜೋಳದ ಫಸಲಾಗುತ್ತದೆಯೆಂದು ಇದ್ದ ನಂಬಿಕೆ ಹೋಗಿದೆ. ಆಗಲೇ ರೆವೆನ್ಯೂ ಮಂತ್ರಿಗಳು ಬಾಯಿದ್ದವನು ಬರದಲ್ಲಿ ಬದುಕುತ್ತಾನೆಂದು ಹೇಳಿದರು. ಕೋಲಾರಜಿಲ್ಲೆ ವಿಷಯ ಹೇಳುವಾಗ ಇದನ್ನು ಹೇಳಿದರು. ನಮಗೂ ಹಾಗೆ ಬಾಯಿ ಗಲಾಟೆಮಾಡಿ ಬದುಕಬೇಕೆಂಬ ಆಸೆ. ಈ ವಿಚಾರದಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ರೆಮಿಷನ್ ವಿಷಯದಲ್ಲಿ ಒಂದು ಮಾತು. ಚಿತ್ರದುರ್ಗ ಜಿಲ್ಲೆಗೆ 35 ಸಾವಿರ, ಕೋಲಾರ ಜಿಲ್ಲೆಗೆ 6 ಲಕ್ಷ ತುಮಕೂರು ಜಿಲ್ಲೆಗೆ ಎರಡು ಲಕ್ಷ ಚಿಲ್ಲರೆ ರೆಮಿಷನ್ ಕೊಡಲಾಗಿದೆ. ಅದೇ ಮೈಸೂರು ಜಿಲ್ಲೆಗೆ ಯಾವ ರೆಮಿಷನ್ ಸಹ ಕೊಟ್ಟಿಲ್ಲ. ನಂಜನಗೂಡು ತಾಲ್ಲೂಕಿನಲ್ಲಿ ನರಸಾಂಬುಧಿ ಕೆರೆಯಿದೆ. ಅದು ಶ್ರೀ ಮಾದಯ್ಯನವರಿಗೂ ಗೊತ್ತು, ಅದರಕೆಳಗೆ ಸುಮಾರು 18 ಸಾವಿರ ಎಕರೆ ಅಚ್ಚುಕಟ್ಟಿದೆ, ಎರಡುವರ್ಷಗಳ ಹಿಂದೆ ಅಭಾವ ಪರಿಸ್ಥಿತಿ ಇದ್ದಾಗ ರೆಮಿಷನ್ ಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದರು. ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಚೆಂಗಲರಾಯರೆಡ್ಡಿಯವರೂ ಹಾಗೆ ಮಾಡುವುದಾಗಿ ತಿಳಿಸಿದ್ದರು. ಆದರೆ ಆ ಭರವಸೆ ಈಡೇರಲಿಲ್ಲ. ನಂಜನಗೂಡು ತಾಲ್ಲೂಕಿನಲ್ಲಿ ಅನೇಕಕಡೆ ರೆಮಿಷನ್ ಕೊಡುತ್ತೇವೆಂದು ಹೇಳಿ ಕೊಡದಿರುವ ಸಂದರ್ಭಗಳು ಅನೇಕ ಇವೆ. ಇದೇ ಅಲ್ಲದೆ ಚಾಮರಾಜನಗರ ತಾಲ್ಲೂಕಿನಲ್ಲಿ ಮಳೆಯಿಲ್ಲದೇಹೋದಾಗ ರೆಮಿಷನ್ ಕೊಡುತ್ತೇವೆಂದು ಹೇಳಿದ್ದರೂ ರೆವೆನ್ಯೂ ಆಫೀಸರು ಕಂದಾಯ ವಸೂಲುಮಾಡಿರುವ ಸಂದರ್ಭಗಳಿವೆ. ಹೀಗೆ ಹೆಗ್ಗಡದೇವನಕೋಟೆ, ಯಳಂದೂರು ಮತ್ತು ಟಿ.-ನರಸೀಪುರ ತಾಲ್ಲೂಕುಗಳಲ್ಲೂ ಕೂಡ ರೆಮಿಷನ್ ಕೊಡುತ್ತೇವೆಂದು ಹೇಳಿ ಕೊಡದೆ ಕಂದಾಯ ವಸೂಲು ಮಾಡಿರುವ ಸಂದರ್ಭಗಳಿವೆ. ನಿಜವಾಗಿ ಆ ತಪ್ಪನ್ನು ತಿದ್ದಿಕೊಳ್ಳಬೇಕು. ಆ ರೈತರಿಗೆ ಸರಿಯಾದ ಪರಿಹಾರ ಕೊಡಬೇಕು. ಆದರೆ ಈ ರೆಮಿಷನ್ ಕೊಟ್ಟ ಹಣದಿಂದ ಮೈಸೂರು ಜಿಲ್ಲೆಯಲ್ಲಿರುವ ಅಭಾವ ಉಲ್ಬಣಸ್ಥಿತಿಗೆ ಬಂದಿರುವುದು ಖಂಡಿತ ಹೋಗುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಈಗಾಗಲೇ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಂಪೂರ್ಣವಾಗಿ ಬೆಳೆ ಹೋಗಿದೆಯೆಂದು ಕಾಗದ ಬಂದಿದೆ. ಶ್ರೀ ದೇವರಾಜ ಅರಸ್‌ರವರು ಮೈಸೂರು ಜಿಲ್ಲೆಗೆ ಪರಿಹಾರನಿಧಿ ಕಡಮೆಯಾಗಿದೆಯೆಂದು ಹೇಳಿದ್ದಾರೆ. ಅದೇ ರೀತಿ ಶ್ರೀ ಮಾದಯ್ಯನವರ ವಾದವೂ ಇದೆ. ಒಂದು ಕಡೆ ಜಾಸ್ತಿ ನಿಗಾಕೊಟ್ಟು ಇನ್ನೊಂದುಕಡೆ ಕಡಮೆ ಮಾಡಬಾರದು. ಒಂದು ಕಣ್ಣಿಗೆ ಸುಣ್ಣಹಾಕಿ, ಇನ್ನೊಂದು ಕಣ್ಣಿಗೆ ಬೆಣ್ಣೆ ಹಾಕುವ ನೀತಿ ಕೂಡದು. ಕೋಲಾರ ಜಿಲ್ಲೆಗೆ ಸುಮಾರು 29,500 ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದಾರೆ. ತುಮಕೂರು ಜಿಲ್ಲೆಗೆ 5,500 ಚಿಲ್ಲರೆ, ಚಿತ್ರದುರ್ಗ ಜಿಲ್ಲೆಗೆ 40,000, ಮಂಡ್ಯ ಜಿಲ್ಲೆಗೆ 10 ಸಾವಿರ, ಮೈಸೂರು ಜಿಲ್ಲೆಗೆ 25 ಸಾವಿರ, ಬೆಂಗಳೂರು ಜಿಲ್ಲೆಗೆ 10 ಸಾವಿರ ಖರ್ಚು ಮಾಡಿದ್ದಾರೆ. ಇದರ ಮೇಲೆ 7 ಸಾವಿರ ರೂಪಾಯಿಗಳನ್ನು ದನಕರುಗಳಿಗೆ ಹುಲ್ಲಿಗಾಗಿ ಖರ್ಚು ಮಾಡಿದೆಯೆಂದು ಹೇಳಿದ್ದಾರೆ. ನನ್ನವಾದ 25 ಸಾವಿರ ರೂಪಾಯಿಗಳು ಮೈಸೂರು ಜಿಲ್ಲೆಗೆ ಯಾವ ಮೂಲೆಗೂ ಸಾಲದು ಎಂದು. ಮೈಸೂರು ಜಿಲ್ಲೆ ಇಡೀ ಸಂಸ್ಥಾನದಲ್ಲೇ ದೊಡ್ಡ ಜಿಲ್ಲೆ. ಮೈಸೂರು ಜಿಲ್ಲೆಯಲ್ಲಿರುವ ಜನಸಂಖ್ಯೆ ಯಾವ ಜಿಲ್ಲೆಗೂ ಕಡಮೆ ಇಲ್ಲ. ಈ ಜಿಲ್ಲೆಯನ್ನು ದೂರಮಾಡಬಾರದು. ಈ ವಿಷಯದಲ್ಲಿ ನಿಜಾಂಶವನ್ನು ತಿಳಿದುಕೊಳ್ಳಲು ಆಹಾರ ಮಂತ್ರಿಗಳು ಸ್ಥಳಕ್ಕೆ ದಯಮಾಡಬೇಕು. ವಿಷಯವನ್ನು ಗ್ರಹಿಸಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಅದಕ್ಕಾಗಿ ಈ ಸಭೆ ಮುಗಿದಕೂಡಲೆ ಮಂತ್ರಿಗಳು ಅಕಡೆ ಸಂಚಾರ ಮಾಡಬೇಕಾದುದು ಅವಶ್ಯಕ. ಇಲ್ಲಿರುವ ಮೈಸೂರು ಜಿಲ್ಲೆಯ ಮಾನ್ಯ ಸದಸ್ಯರೂ ಸಹ ಪಕ್ಷಮನೋಭಾವನೆಯನ್ನು ತ್ಯಜಿಸಿ ಯಾವ ಮೂಲೆಯಲ್ಲಿ ಏನು ಕಷ್ಟವಿದೆ, ಎಲ್ಲಿ ಏನು ಪರಿಸ್ಥಿತಿಯಿದೆ ಎಂಬ ವಿಚಾರದಲ್ಲಿ ನಿಜವಾದ ಒಂದು ಚಿತ್ರವನ್ನು ಕಣ್ಣು ಮುಂದಿಡುವುದಕ್ಕೆ ಸಹಕಾರಿಯಾಗುತ್ತಾರೆಂದು ನಂಬುತ್ತೇನೆ. ಈ ವಿಚಾರದಲ್ಲಿ ಒಂದು ಆಶ್ವಾಸನ ಕೊಡುವುದಾದರೆ ಬಹಳ ಸಂತೋಷ. ಮೈಸೂರು ಜಿಲ್ಲೆಯಲ್ಲಿ ಆಹಾರದ ಅಭಾವ ಮುಂದೆ ಬರದಂತೆ ಏರ್ಪಡಿಸಿ, ಹಿಂದೆ ಕೊಡದೆ ನಿಂತಿರುವ ರೆಮಿಷನ್ ಮೊಬಲಗನ್ನು ಮೊಟ್ಟಮೊದಲು ವಿಚಾರ ಮಾಡಿ ಕೊಟ್ಟು, ಅದರ ಜೊತೆಗೆ ರಿಲೀಫ್ ವಿಷಯದಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳಬೇಕೆಂದು ಅರಿಕೆ ಮಾಡುತ್ತೇನೆ.

1-30 P.M.

ಕೋಲಾರ ಜಿಲ್ಲೆಯಲ್ಲಿ ಹೆಚ್ಚಾಗಿ ಕೊಟ್ಟಿದ್ದೀರಿ. ಇನ್ನೂ ಹೆಚ್ಚು ಕೊಡಿ. ಅಲ್ಲಿನ ಆಹಾರ ಪರಿಸ್ಥಿತಿ ಹೇಗಿದೆ ಎಂಬುದನ್ನು ಮಾನ್ಯ ಮಿತ್ರರು ಹೇಳಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲೂ ಅದೇರೀತಿ ಇದೆ. ಪ್ರಾಸಂಗಿಕವಾಗಿ ಒಂದು ಮಾತು ಹೇಳಬೇಕೆಂದು ಆಶೆ ಇದೆ. ಮೈಸೂರು ಸಂಸ್ಥಾನದಲ್ಲಿ ಕ್ಷಾಮಪರಿಸ್ಥಿತಿ ಬರಬಾರದ ರೀತಿಯಲ್ಲಿ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಕೋಲಾರ ಜಿಲ್ಲೆಯಲ್ಲಿ ಮಾನ್ಯ ಮಿತ್ರರಾದ ಪಟ್ಟಾಭಿರಾಮರ್‌ರವರು ಹೇಳಿದರು: ಭೂಗರ್ಭದಲ್ಲಿ ಝರಿಗಳು ಇವೆ, ಪಂಪಿನ ಮುಖೇನ ಅವುಗಳಿಂದ ನೀರನ್ನು ಎತ್ತಿ ವ್ಯವಸಾಯೋತ್ಪನ್ನವನ್ನು ಜಾಸ್ತಿ ಮಾಡಬೇಕು ಎಂಬುದಾಗಿ. ಬ್ರಿಟಿಷರ ಕಾಲದಲ್ಲಿ ಫ್ಯಾಮಿನ್ ರಿಲೀಫ್ ಕಮಿಷನ್ ಎಂಬುದಾಗಿ ಏರ್ಪಾಡುಮಾಡಿ ಅವರು ದೊಡ್ಡ ವರದಿಯನ್ನು ಸರ್ಕಾರದವರಿಗೆ ಕೊಟ್ಟಿದ್ದಾರೆ. ನಮ್ಮ ಸಂಸ್ಥಾನದಲ್ಲೂ 90 ಲಕ್ಷ ಪ್ರಜೆಗಳ ಹಿತದೃಷ್ಟಿ ಇದರಲ್ಲಿ ಇರುವುದರಿಂದ, ತಜ್ಞರ ಸಮಿತಿಯನ್ನು ಮಾಡಬೇಕು ಎಂಬ ಅಂಶವನ್ನು ರಾಜಪ್ರಮುಖರು ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಪ್ರವಾಸ ಕಾಲದಲ್ಲಿ ಪ್ರಾಸಂಗಿಕವಾಗಿ ಹೇಳಿದ್ದಾರೆ. ಇಂದಿನ ಪರಿಹಾರ ತಾತ್ಕಾಲಿಕವಾಗಿಯಾದರೂ ಕೂಡ, ನಾನಾ ಕಡೆಗಳಲ್ಲಿ ಹರಡಿರತಕ್ಕ ಈ ಅಂಟುಜಾಡ್ಯವನ್ನು ಕಡಮೆಮಾಡುವ ಒಂದು ನೀತಿಯನ್ನು ಅನುಸರಿಸಬೇಕು. ಇದಕ್ಕೆ ಒಂದು ವಿಶೇಷವಾದ ಮಾರ್ಗವನ್ನು ಕಂಡುಹಿಡಿಯಬೇಕು. ಆ ಮಾರ್ಗವನ್ನು ಕಂಡುಹಿಡಿಯಬೇಕಾದರೆ ನಿಜವಾಗಿಯೂ ನನ್ನ ಅಭಿಪ್ರಾಯದಲ್ಲಿ ಇಂಥ ಒಂದು ತಜ್ಞರ ಸಮಿತಿಯನ್ನು ರಚನೆಮಾಡಬೇಕು. ರಚನೆಮಾಡಿ ಅವರ ಅಭಿಪ್ರಾಯವನ್ನು ಕ್ರೋಡೀಕರಿಸಿ, ಮೈಸೂರು ದೇಶದಲ್ಲಿರತಕ್ಕ ಕಷ್ಟ ಪರಿಸ್ಥಿತಿಗೆ ಶಾಶ್ವತ ಪರಿಹಾರ ಕೊಡಬೇಕು. ಆಗಲೇ ಹೇಳಿದಹಾಗೆ ಮೈಸೂರು ಜಿಲ್ಲೆಯಲ್ಲಿ ಜಾಗ್ರತೆ ತಮ್ಮ ಪ್ರವಾಸ ಕಾರ್ಯಕ್ರಮ ಇಟ್ಟುಕೊಂಡು ತಾವೇ ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಪರಿಹಾರ ಕೆಲಸ ನಡೆಸಬೇಕೆಂದು ಒತ್ತಾಯವಾಗಿ ಹೇಳುತ್ತೇನೆ. ಮಂತ್ರಿಗಳು ದಯವಿಟ್ಟು ನಿಧಾನ ಮಾಡಬಾರದು. ಎಂಥ ಸಂದರ್ಭವಿದ್ದರೂ ಕೂಡ ಪ್ರಜೆಗಳ ಹಿತದೃಷ್ಟಿಯಿಂದ

ಪ್ರವಾಸಮಾಡಿ. ಮೈಸೂರು ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇದೆ ಎಂಬುದನ್ನು ಹೇಳುತ್ತಾ ಇದ್ದೇನೆ. ಆದ್ದರಿಂದ ಮೈಸೂರು ಜಿಲ್ಲೆಯಲ್ಲಿ ಪ್ರವಾಸಮಾಡಿ ಅಲ್ಲಿನ ಪರಿಸ್ಥಿತಿಯನ್ನು ತಾವೇ ಕಣ್ಣಾರ ನೋಡಿ, ಮನಗಂಡು ಮೈಸೂರು ಜಿಲ್ಲೆಯವರಿಗೆ ಸಾಕಾದಷ್ಟು ಪರಿಹಾರ ನೀಡಬೇಕೆಂದು ಹೇಳಿ ಈ ನಿರ್ಣಯವನ್ನು ಮಂಡಿಸುತ್ತಿದ್ದೇನೆ. ಈ ಸಭೆಯ ಅವಗಾಹನೆಗೆ ತಂದಿದ್ದೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ–ಹೆಗ್ಗಡದೇವನಕೋಟೆ).—ಸ್ವಾಮಿ, ಮೈಸೂರು ಜಿಲ್ಲೆಯ ಒಂದು ಡಿಸ್ಟ್ರೆಸ್ ಪರಿಸ್ಥಿತಿಯನ್ನು ಮಾನ್ಯ ಮಿತ್ರರಾದ ಲಿಂಗಣ್ಣನವರು ಸಭೆಯ ಮುಂದೆ ಇಟ್ಟು ವಾಸ್ತವಾಂಶವನ್ನು ಯಾವ ಉತ್ಪ್ರೇಕ್ಷೆಯೂ ಇಲ್ಲದಂತೆ ಹೇಳಿದ್ದಾರೆ. ಅದಕ್ಕೆ ನನ್ನ ಧನ್ಯವಾದಗಳನ್ನು ಅವರಿಗೆ ಸಮರ್ಪಿಸುತ್ತೇನೆ. ಈ ಸಂದರ್ಭದಲ್ಲಿ ನಮ್ಮ ತಾಲ್ಲೂಕಿನ ಎಂದರೆ ಗುಂಡ್ಲುಪೇಟೆಯ ವಿದ್ಯಮಾನಗಳನ್ನು ಮಾನ್ಯ ಮಂತ್ರಿಗಳ ಅವಗಾಹನೆಗೆ ತರಲಿಚ್ಛಿಸುತ್ತೇನೆ. ನಮ್ಮ ತಾಲ್ಲೂಕು ಯಾವ ಒಂದು ನೀರಾವರಿ ಆಶ್ರಯವೂ ಇಲ್ಲದಂತೆ ಮಳೆಯ ನೀರಿನ ಆಶ್ರಯದಲ್ಲಿರತಕ್ಕ ತಾಲ್ಲೂಕು. ರೂಪಾಯಿನಲ್ಲಿ 0—15—9 ಕಾಸು ಬರಿ ಮಳೆಯಿಂದ ವ್ಯವಸಾಯ ಆಗಬೇಕೇ ಹೊರತು, ನೀರಾವರಿ ಸೌಕರ್ಯ ಏನೇನೂ ಇಲ್ಲ. ಈಸಾರಿ ನಾನು ಇಲ್ಲಿಗೆ ಬರುವುದಕ್ಕೆ ಮುಂಚೆ ಸಾಮಾನ್ಯವಾಗಿ ಮಳೆಯಾಗಿತ್ತು. ಪ್ರತಿಸಾರಿಯೂ ಈ ವೇಳೆಗೆ 8—10 ಇಂಚು ಮಳೆಯಾಗುತ್ತಾ ಇದ್ದದ್ದು ಈಗ, ಇದುವರೆಗೆ 5 ಇಂಚು ಸಹಾ ಆಗಿಲ್ಲವೆಂದು ಹೇಳಬಯಸುತ್ತೇನೆ. ಈಗ ಅಲ್ಲಿ ಜೋಳದ ಫಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಜೋಳವನ್ನು ಬೆಳೆದು ಹೊರಗೆ ಕಳುಹಿಸುತ್ತಿದ್ದ ನಮ್ಮ ತಾಲ್ಲೂಕಿನಲ್ಲಿ ಈಗ ಜೋಳವೇ ಇಲ್ಲ ಎಂದು ಹೇಳಿದರೆ ಅಲ್ಲಿನ ಜನಗಳ ಸ್ಥಿತಿ ಎಷ್ಟುಮಟ್ಟಿಗಿದೆ, ಅವರ ಪರಿಸ್ಥಿತಿ ಏನಾಗಬಹುದು ಎಂಬುದನ್ನು ತಾವೇ ಯೋಚಿಸಮಾಡಬೇಕು. ಮಳೆಯಿಲ್ಲದೇ ಇರುವುದರಿಂದ ಮೇವೂ ಸಹ ದೊರಕುವ ಸ್ಥಿತಿ ಇವೊ ಅಲ್ಲಿ ಇಲ್ಲ. ಈರೀತಿಯಿರುವಾಗ ಮಾನ್ಯ ಮಂತ್ರಿಗಳು, ಶ್ರೀಮಾನ್ ಲಿಂಗಣ್ಣನವರು ಹೇಳಿದಹಾಗೆ, ಯಾವ ವರದಿಯ ಆಧಾರವನ್ನೂ ತೆಗೆದುಕೊಳ್ಳದೆ ಖುದ್ದಾಗಿ ಪರಿಶೀಲಿಸಿದರೆ ನ್ಯಾಯ ದೊರಕುತ್ತದೆ ಎಂಬ ಒಂದು ಆಶೆ ನಮಗೆ ಇದೆ. ಆರೀತಿ ಪರಿಶೀಲಿಸಿ, ಸೂಕ್ತ ಕಾರ್ಯಕ್ರಮ ತೆಗೆದುಕೊಂಡು, ಈಗ ಒದಗಿಸಿರತಕ್ಕ ಡಿಸ್ಟ್ರೆಸ್ ರಿಲೀಫ್ ಫಂಡ್‌ನ್ನು ಹೆಚ್ಚಿಸಿ ಸಾಕಾದಷ್ಟು ಪರಿಹಾರ ಆ ತಾಲ್ಲೂಕಿಗೆ ಕೊಡಬೇಕು ಮತ್ತು ನೀರಾವರಿ ಯೋಜನೆಗಳನ್ನು ಈ ತಾಲ್ಲೂಕಿನಲ್ಲಿ ಏರ್ಪಡಿಸಬೇಕು ಎಂದು ಅಪೇಕ್ಷೆಪಡುತ್ತೇನೆ. ಸ್ವಾಮಿ, ನೀರಾವರಿ ಯೋಜನೆಗಳಿಗೆ ಅಲ್ಲಿ ಕೆಲವು ಸೌಕರ್ಯಗಳಿವೆ. ಆದೇಕೆ ಸರ್ಕಾರದವರು ಅವನ್ನು ಕಾರ್ಯಗತ ಮಾಡಿಲ್ಲವೋ ತಿಳಿಯದು. ಇವೊತ್ತು ಹೆಗ್ಗಡದೇವನಕೋಟೆಯಲ್ಲಿ ನುಗು ಜಲಾಶಯವಿದೆ. ಅದರಿಂದ ಬಹಳ ಅನುಕೂಲವಾಗುತ್ತದೆ. ಇನ್ನೊಂದು ಅಣೆಕಟ್ಟು ಸ್ಥಾಪನೆಮಾಡುವ ಉದ್ದೇಶ ಸರ್ಕಾರದವರಿಗಿದೆ ಎಂದು ಕೇಳಿದ್ದೇನೆ; ಅದು ಕಪಿಲಾನದಿಗೆ, ಬಿದರಹಳ್ಳಿ ಬಳಿ ಎಂದು ಹೇಳುತ್ತಾರೆ. ಬಿದರಹಳ್ಳಿಯಲ್ಲಿ ಆ ಅಣೆಕಟ್ಟನ್ನು ನಿರ್ಮಿಸುವಾಗ ಗುಂಡ್ಲುಪೇಟೆ ತಾಲ್ಲೂಕಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಡಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ. ಒಂದುವೇಳೆ ಬಿದರಹಳ್ಳಿಯಲ್ಲಿ ಲೆವಲ್ ಸರಿಹೋಗದೆ ನೀರು ಒದಗಿಸಲು ಸಾಧ್ಯವಾಗದೆ ಹೋದ ಪಕ್ಷದಲ್ಲಿ, ನಮ್ಮ ತಾಲ್ಲೂಕಿಗೆ ನೀರು ಒದಗಿಸಲು ಸಾಧ್ಯವಾಗುವಂಥ ಬೇರೆ ಯಾವುದಾದರೂ ಲೆವಲ್ ಆರಿಸಿಕೊಂಡು ಆ ಸ್ಥಳದಲ್ಲಿ ಅಣೆ ಕಟ್ಟಿದರೆ ಅದರಿಂದ ನೀರಿನ ಸೌಕರ್ಯ ಒದಗುತ್ತದೆ. ಅಲ್ಲಿ ಇನ್ನೊಂದು ಮಾಯೂರುಹೊಳೆ ಎಂಬುದಾಗಿ ಇದೆ. ಹಿಂದೆ ಒಂದು ಸಲ ಅದಕ್ಕೆ ಅಣೆ ಕಟ್ಟಬೇಕೆಂದು ಸರ್ವೇ ಆಯಿತು. ಅದೇಕೆ ನಿಂತುಹೋಯಿತೋ ಗೊತ್ತಿಲ್ಲ. ಅದನ್ನು ಪುನರ್ ವಿಮರ್ಶೆಮಾಡಿ ಆ ಮೂಲಕ ನಮ್ಮ ತಾಲ್ಲೂಕಿಗೆ ನೀರು ಒದಗಿಸಿಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ಮಾನ್ಯ ಮಂತ್ರಿಗಳು ಇದನ್ನು ಗಮನಿಸಿ ನಡೆಸಿಕೊಟ್ಟರೆ ಅಲ್ಲಿನ ಸರ್ವ ಪ್ರಜೆಗಳೂ ಆಭಾರಿಯಾಗುತ್ತಾರೆಂದು ಹೇಳುತ್ತೇನೆ.

ಶ್ರೀ ಎಸ್. ಶ್ರೀನಿವಾಸಅಯ್ಯಂಗಾರ್ಯರು (ಟೀ.-ನರಸೀಪುರ).—ಈ ಕತ್ತರಿ ನಿರ್ಣಯದ ವಿಚಾರವಾಗಿ ಮಾತನಾಡುತ್ತಾ ಒಂದೆರಡು ವಿಷಯಗಳನ್ನು ರೆವಿನ್ಯೂ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೈಸೂರು ಜಿಲ್ಲೆಯಲ್ಲಿ 'ಡಿಸ್ಟ್ರೆಸ್ ಏರಿಯಾ' ಎಂಬುದಾಗಿ ಡಿಕ್ಲೇರ್ ಮಾಡದೇ ಇರುವುದು ಬಹಳ ಶೋಚನೀಯವಾದ ವಿಷಯ. ಏಕೆಂದರೆ ಈಗಾಗಲೇ ಹಿಂದಿನ ಭಾಷಣಕಾರರು ನಂಜನಗೂಡು, ಚಾಮರಾಜನಗರ ತಾಲ್ಲೂಕುಗಳ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿಮರ್ಶಿಸಿದರು. 'ಡಿಸ್ಟ್ರೆಸ್ ಏರಿಯಾ' ಎಂಬ ಡೆಫನಿಷನ್ನಲ್ಲಿ ನರಸೀಪುರ ತಾಲ್ಲೂಕು ಒಳಪಟ್ಟಿದೆಯೇ ಇಲ್ಲವೇ ಎಂಬುದನ್ನು ಹೇಳುವುದಕ್ಕೆ ನಾನು ನಿಂತಿದ್ದೇನೆ. ರೆಮಿಷನ್ ಕೊಡತಕ್ಕ ವಿಚಾರದಲ್ಲಿ 8—10 ವರ್ಷದಿಂದ ಕೆರೆ ಒಡೆದಿದ್ದರೂ ತರಿ ಕಂದಾಯ ಕೊಡುತ್ತಿದ್ದಾರೆ. ಈರೀತಿ ಇರತಕ್ಕ ಸಂದರ್ಭದಲ್ಲಿ ಅದು ಡಿಸ್ಟ್ರೆಸ್ ಏರಿಯಾ ಅಲ್ಲವೇ? ಕೆರೆ ರಿಪೇರಿ ಆಗಿಲ್ಲ, ಕಂದಾಯ ಮಾತ್ರ ತರಿ ಕಂದಾಯ. ಇಂಥಾ ಉದಾಹರಣೆಗಳು ಅನೇಕವಿವೆ. ಆಲಗೂಡು ಕೆರೆ ಬತ್ತಿಹೋಗಿದೆ; ಹಲವರವ ಕೆರೆಗಳು ಆ ರೀತಿ ಒಡೆದುಹೋಗಿವೆ. ಹಲವರದ ಕೆರೆ ಒಡೆದುಹೋಗಿ 10 ವರ್ಷ ಆದರೂ ರಿಪೇರಿ ಆಗಿಲ್ಲ, ಫಸಲು ತೆಗೆದುಕೊಳ್ಳುವುದಕ್ಕಾಗುವುದಿಲ್ಲ; ತರಿ ಕಂದಾಯ ಕೊಡುತ್ತೇವೆ. ಆಲಗೂಡು ಕೆರೆಯಲ್ಲಿ ಯಾವತ್ತೂ ನೀರು ತುಂಬುವುದಿಲ್ಲ, ಫಸಲು ಬರುವುದಿಲ್ಲ. ಲಿಫ್ಟ್ ಇರಿಗೇಷನ್ ಸ್ಕೀಂ ನಾಲ್ಕು ವರ್ಷದಿಂದ ಇದೆ. ಈ ವಿಷಯವನ್ನು ಈ ಸಂದರ್ಭದಲ್ಲಿ ಏಕೆ ಹೇಳಬೇಕಾಯಿತು ಎಂದರೆ ಆ 'ಡಿಸ್ಟ್ರೆಸ್' ಎನ್ನುವ ಪದ ಅನ್ವಯವಾಗಲು ಇದಕ್ಕೆ ಬೇಕಾದಷ್ಟು ಅರ್ಹತೆ ಇದೆ. ಈಗ ಅಲ್ಲಿ ಹೇಗಿದೆ ಎಂದು ಹೇಳುವುದಾದರೆ ಈವರ್ಷ ಮಳೆ ಅಭಾವದಿಂದ ಪ್ರತಿಯೊಂದು ಗ್ರಾಮದಲ್ಲೂ ಮುಕ್ಕಾಲು ಪಾಲು ಕೆರೆ, ಬಾವಿಗಳಲ್ಲಿ ನೀರು ಇಲ್ಲದೆ ಜನರು 5—6 ಮೈಲಿಗಳಿಂದ ದೊಡ್ಡದೊಡ್ಡ ಹಂಡೆಗಳನ್ನು ಗಾಡಿಯಲ್ಲಿಟ್ಟುಕೊಂಡು ಬೆಳಗಿನ ಜಾವ 5 ಘಂಟೆಗೆ ಬಂದು ನರಸೀಪುರ ಹೊಳೆಯಿಂದ ನೀರು ಸಾಗಿಸಿಕೊಂಡು ಹೋಗುತ್ತಾ ಇದ್ದಾರೆ. ಅದು 'ಡಿಸ್ಟ್ರೆಸ್' ಅಲ್ಲವೇ? ಅಂಥಾ ಡಿಸ್ಟ್ರೆಸ್ ಪರಿಸ್ಥಿತಿಯನ್ನು ಪರಿಹಾರಮಾಡುವುದಕ್ಕೆ ಕೆಲಸಕಾರ್ಯಗಳನ್ನು ಮಾಡಬೇಕೆಂದು ಅಂದಾಜಾಗಿ ಎಷ್ಟೋ ದಿವಸಗಳಾಯಿತು. ಅದಕ್ಕೆ ಹಣ ಒದಗಿಸಿರಲಿಲ್ಲ. ಈಗ ಸರ್ಕಾರದವರು ಗ್ರಾಂಟ್ ಮಾಡಿರಬಹುದು; ಆದರೆ ಅದರ ಫಲ ಅವರಿಗೆ ತಲಪುವ ಹೊತ್ತಿಗೆ ಒಂದೆರಡು ತಿಂಗಳು ಆಗಬಹುದು. ಮತ್ತೊಂದು ವಿಷಯ ಹೇಳಬೇಕಾಗಿದೆ. ಸರ್ಕಾರದವರು ಜೋಳದ ಬಿತ್ತನೆಗೆ ಬೀಜ ಒದಗಿಸಿಕೊಟ್ಟರು. ಅದನ್ನೇ ಬಿತ್ತನೆ ಮಾಡಿದೆವು. ಸುಮಾರು 16 ಸಾವಿರ ಎಕರೆ ಖುಷ್ಕಿ

(ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್ಯರು.)

ಜಮೀನು ನರಸೀಪುರ ತಾಲ್ಲೂಕಿನಲ್ಲಿ ಹೋದವರ್ಷ ಸರ್ಕಾರದವರು ಕೊಟ್ಟ ಜೋಳದ ಬಿತ್ತನೆಯಿಂದ ಬಿತ್ತನೆ ಆಯಿತು. ಆ ಬಿತ್ತನೆಯಿಂದ ನಾಲ್ಕು ತಿಂಗಳ ಗಿಡದ ಫಸಲು ನಮ್ಮ ಬಿತ್ತನೆ ಫಸಲಿಗಿಂತ ದೊಡ್ಡದಾಗಿ ಕಬ್ಬಿನ ಜಲ್ಲೆಯ ತರಹ ಉದ್ದಕ್ಕೂ ಬರುತ್ತಾ ಇತ್ತು. ಏನೋ ಜೋಳ ಕೊನೆಗಾದರೂ ಕಾಣುತ್ತದೆಂದು ಬಹಳ ಕಾದು ನೋಡಿದೆವು. ನಾಲ್ಕು ತಿಂಗಳು ಕಾದರೂ ಜೋಳದ ತೆನೆಯೇ ಕಾಣಲಿಲ್ಲ. ಬರೀ ಕಡ್ಡಿ ಕಾಣುತ್ತಿತ್ತು. ಹೀಗೆ 15 ಸಾವಿರ ಎಕರೆ ಫಲವತ್ತಾದ ಜಮೀನಿನಲ್ಲಿ ಕಷ್ಟಪಟ್ಟು ಜೋಳ ಹಾಕಿ ಸಾಗುವಳಿ ಮಾಡಿ ಜೋಳ ಬಂದೀತೇ ಎಂದು ಕಾಯುವ ಕಾಲದಲ್ಲಿ ಕೇವಲ ಕಡ್ಡಿ ಮಾತ್ರ ಬಂದಿತೆಂದರೆ—ಆ ಪ್ರದೇಶ Distress ಪ್ರದೇಶವಲ್ಲವೇ ! ಆ ಪ್ರದೇಶದ ಜನಗಳು ಪರಿಹಾರಕ್ಕೆ ಅರ್ಹರಲ್ಲವೇ ? ಆ ರೀತಿಯಾದ ಯಾವ ಪರಿಹಾರವನ್ನಾದರೂ ಯೋಚನೆಮಾಡಿ ಸರ್ಕಾರದವರು ಕೊಟ್ಟಿದ್ದಾರೆಯೇ? ಮುಂದಿನ ಫಸಲು ಬರುವತನಕ ಅವರೇನು ಮಾಡಬೇಕು? ಯಾವುದಾದರೂ ಸಹಾಯ ಮಾಡಬೇಕೆಂಬ ತತ್ವ ಇದರಲ್ಲಿ ಅಡಕವಾಗಿಲ್ಲ. ಆದ್ದರಿಂದ ಮೈಸೂರು ಜಿಲ್ಲೆಯನ್ನು Distress Area ಎಂದು ಭಾವಿಸುವುದು ಧರ್ಮ ಎಂದು ಹೇಳುತ್ತೇನೆ.

ಶ್ರೀಮಾನ್ ಎಚ್. ಕೆ. ಶಿವರುದ್ರಪ್ಪನವರು.—ತಮ್ಮ ತಾಲ್ಲೂಕುಗಳ ವಿಷಯವನ್ನು ಹೇಳಿದ್ದಾರೆ. ನಾನು ನಮ್ಮ ತಾಲ್ಲೂಕಿನಲ್ಲಿ ಸ್ವಂತವಾಗಿ ಜೋಳ ಬೆಳೆದವನು. ಬೇಕಾದಷ್ಟು ಬಿತ್ತನೆಮಾಡಿದೆವು. ನಾನು ಮೊದಲೇ ಹೇಳಿದಂತೆ ಈ ವರ್ಷವಂತೂ ಫಸಲಾಗಲಿಲ್ಲ. ಕಳೆದ ಮೂರು ವರ್ಷಗಳಿಂದಲೂ ಹೀಗೆಯೇ ಮಳೆಯಿಲ್ಲದೆ ಹೋಗಿ ಫಸಲಾಗಲಿಲ್ಲ. ಆದುದರಿಂದ ಕೂಡಲೆ ಸರ್ಕಾರದವರು ಇತರ ಜಿಲ್ಲೆಗಳಲ್ಲಿ ಕೊಡುವಂತೆ ನಮ್ಮ ಜಿಲ್ಲೆಗೂ ಅದರಲ್ಲೂ ನಮ್ಮ ಟಿ..ನರಸೀಪುರ ತಾಲ್ಲೂಕಿಗೆ ಅವಶ್ಯವಾಗಿ ಸಹಾಯ ನೀಡಬೇಕು. ತಮಗೆ ಅಲ್ಲಿನ ಕಷ್ಟನಷ್ಟಗಳ ಬಗ್ಗೆ ರುಜುವಾತು ಬೇಕಾದ ಅಗತ್ಯವಿದ್ದರೆ ಅದನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಮಾನ್ಯ ಮಂತ್ರಿಗಳು ದಯವಿಟ್ಟು ಈ ಸಹಾಯವನ್ನು ನೀಡುವುದಕ್ಕೆ ಸೂಕ್ತ ಏರ್ಪಾಡುಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಸ್ವಾಮಿ, ಇಂಡಿಯಾದೇಶದಲ್ಲಿ ಥಾರ್ ಮರುಭೂಮಿಯನ್ನು ಬಿಟ್ಟರೆ ನಮ್ಮ ಮೈಸೂರು ದೇಶದ ನಾಗಮಂಗಲವೇ ಎರಡನೆಯ ಮರುಭೂಮಿ ಎನ್ನಬೇಕು ! ಇದಕ್ಕೆ ಒಂದು ನಿರ್ಣಯವೂ ಕೂಡ ಆಗಿಬಿಟ್ಟಿದೆ. ಇಂಥ ಮರುಭೂಮಿಗೆ.................

Mr. SPEAKER.—Who passed that Resolution ?

ಶ್ರೀ ಎಂ. ಶಂಕರಲಿಂಗೇಗೌಡರು.—ಹಳೇ ಅಸೆಂಬ್ಲಿಯವರು, ಬೇಕಾದರೆ ತೋರಿಸಿಕೊಡುತ್ತೇನೆ.

ಹಿಂದೆ 1948ನೆಯ ಇಸವಿಯಲ್ಲಿ ಈ ಮರುಭೂಮಿಗೆ ಸಂಬಂಧಪಟ್ಟಹಾಗೆ, ನಾನು ಮಳೆಯ ಲೆಕ್ಕವನ್ನು ಕೊಟ್ಟು, ಬಿತ್ತನೆಯಾಗಿ 35 ದಿವಸ ಮಳೆ ಬಾರದೆ ಹೋಗಿ ಹಾಕಿದ್ದ ರಾಗಿಯೆಲ್ಲಾ ಇರುವೆ ತಿಂದುಹಾಕಿತೆಂದು ಹೇಳಿ ಮಂತ್ರಿಗಳಿಗೆ ಒಂದು ಅರ್ಜಿಯನ್ನು ಕೊಟ್ಟರೆ, ಇವೊತ್ತಿನವರೆಗೂ ಅದೇನಾಯಿತೋ ಸರ್ಕಾರದಿಂದ ಉತ್ತರವೇ ಬರಲಿಲ್ಲ. ಆ ಕಾಲದ ಅರ್ಜಿ ಈಗಿರತಕ್ಕ ರೆವಿನ್ಯೂ ಮಂತ್ರಿಗಳ ಕೈಗಾದರೂ ಬಂದಿರಬಹುದು, ಇಲ್ಲದಿದ್ದರೂ ಸುಲಭವಾಗಿ ಹುಡುಕಿಸಬಹುದು—ಪ್ರಿಂಟ್ ಮಾಡಿದಂಥ ಅರ್ಜಿ ಅದು—ಅದನ್ನು ಇವರಾದರೂ ಗಮನಕ್ಕೆ ತೆಗೆದುಕೊಂಡು, ಆ ವರ್ಷದ ಅಲ್ಲಿನ ಮಳೆಯ ಲೆಕ್ಕವನ್ನೂ ನೋಡಿ ಬೆಳೆಯಾಯಿತೇ ಇಲ್ಲವೇ ಎಂಬುದನ್ನು ದಯವಿಟ್ಟು ತಿಳಿಸಲಿ. ನಾನು ಆ ಅರ್ಜಿಯಲ್ಲಿ ಶಾಸ್ತ್ರೋಕ್ತವಾಗಿ ಲೆಕ್ಕಹಾಕಿ ತೋರಿಸಿದ್ದೇನೆ. ಇಲ್ಲಿಯವರೆಗೂ ಅದಕ್ಕೆ ಉತ್ತರವೇ ಬಾರದಿರುವುದನ್ನು ನೋಡಿದರೆ ಅದನ್ನೆಲ್ಲ ಯಾವ ಮೂಲೆಗೆ ಎಸೆದರೋ ಎಂದು ಕಾಣುತ್ತದೆ. ಇದು ಕಾಂಗ್ರೆಸ್ ಸರ್ಕಾರಕ್ಕೆ ಕೊಟ್ಟ ನನ್ನ ಒಂದು ಅರ್ಜಿಯ ಪರಿಣಾಮ! ಹಿಂದೆ ಇದೇ ರೀತಿ 1915ರಲ್ಲಿ ಶ್ರೀಮಾನ್ ಪುಲ್ಲಾರೆಡ್ಡಿಯವರಿಗೆ ಒಂದು ಅರ್ಜಿಯನ್ನು ಕೊಟ್ಟಾಗ್ಗೆ, ಬೇಕಾದಷ್ಟು ಆಫೀಸರುಗಳು ಬಂದು inspection ನಡೆಸಿ ಕೂಡಲೆ ಅರ್ಧ ರೆಮಿಷನ್ ಕೊಟ್ಟರು.

Mr. SPEAKER.—The Hon'ble Member can speak only for five minutes.

ಶ್ರೀ ಎಂ. ಶಂಕರಲಿಂಗೇಗೌಡರು.—ನಾನು ಹೇಳುವುದೇನೆಂದರೆ, ಖುಷ್ಕಿ ಜಮೀನಿಗೆ ರೆಮಿಷನ್ ಕೊಡಬೇಕೆಂದು ಒಂದು ತತ್ವವನ್ನು ಮೊದಲು ಪ್ರತಿಪಾದಿಸಿದವರೇ ಕಾಂಗ್ರೆಸ್ಸಿನವರು. ಅಂಥಾದ್ದರಲ್ಲಿ ಅವರೇ ಸರ್ಕಾರದಲ್ಲಿದ್ದು ಇಷ್ಟು ರಿಕಾರ್ಡ್‌ಗಳನ್ನೂ ಇಟ್ಟುಕೊಳ್ಳದೆ ತಮಗೆ ಬರುವ ವರಮಾನ ಕಡಮೆಯಾಗುತ್ತದೆಂದು ಹೀಗೆ ರಿಮಿಷನ್ ಕೊಡಕೂಡದೆಂದು ಹೇಳಿದ್ದಾರಲ್ಲಾ ಅವರ ನೀತಿಗೆ ನಾನೇನು ಹೇಳಲಿ ? ಇನ್ನೂ ಹೆಚ್ಚಿಗೆ ಉದಾರ ನೀತಿಯನ್ನು ಅವರು ಅನುಸರಿಸಬೇಕು. ಅದರಲ್ಲೂ ನಮ್ಮ ನಾಗಮಂಗಲ ತಾಲ್ಲೂಕಿಗೆ ಮುಖ್ಯವಾಗಿ ಗಮನಕೊಡಬೇಕು. ಈಗಲಾದರೂ ಈ ರಿಕಾರ್ಡನ್ನು ತೆಗೆಯಿಸಿ ಮಾನ್ಯ ಮಂತ್ರಿವರ್ಯರು ನನಗೊಂದು Endorsement ದಯಪಾಲಿಸಬೇಕು.

ಆ ಮೇಲೆ, ರಿಮಿಷನ್ ಕೊಡುವ ವಿಚಾರದಲ್ಲಿ ತಾವು ಇನ್ನೊಂದು ಅಂಶವನ್ನು ನೋಡುತ್ತೀರಿ. ಫಸಲು 4 ಅಣೆಗೆ ಕಡಮೆಯಾಗಿದ್ದರೆ ರೆಮಿಷನ್ ಕೊಡಬೇಕೆಂದಿದೆ. ಆದರೆ ಶ್ಯಾನುಭೋಗರೇನಾದರೂ 4 ಅಣೆಗೆ ಕಡಮೆಯೆಂದು ಲೆಕ್ಕ ತೋರಿಸಿದರೆ ಅವರಿಂದ ಮಾರನೆಯ ದಿವಸವೇ ದಫ್ತರ ಕಿತ್ತುಕೊಳ್ಳುತ್ತಾರೆ. ಆದ್ದರಿಂದ ಅವರು ಜಾಸ್ತಿಯಾಗಿಯೇ ಬರೆದು ಯಾರಾದರೂ ನಾಲ್ಕು ಜನರ ಹತ್ತಿರ ರುಜುಹಾಕಿಸಿಬಿಡುತ್ತಾರೆ. ಆದ್ದರಿಂದ ಇನ್ನುಮೇಲಾದರೂ ಬೆಳೆ ಆಯಿತೇ ಇಲ್ಲವೇ ಎಂಬುದಕ್ಕೆ ಆಯಾ ತಾಲ್ಲೂಕಿನ ಮೆಂಬರುಗಳ ರುಜು ಆಗಬೇಕೆಂದು ತಾವು ಗೊತ್ತುಮಾಡಬೇಕು. ಇಲ್ಲದಿದ್ದ ಪಕ್ಷದಲ್ಲಿ ಏನೇ ಆದರೂ ರೂಲ್ಸ್ ಪ್ರಕಾರ ರೆಮಿಷನ್ ಸಿಕ್ಕುವುದಿಲ್ಲ. ಇಷ್ಟು ಹೇಳಿ ಕಾಂಗ್ರೆಸ್ಸಿನ ಮಾಜಿ ಸದಸ್ಯರಾದ ಶ್ರೀಮಾನ್ ಲಿಂಗಣ್ಣನವರು ತಂದಿರತಕ್ಕ ಈ ಖೋತಾ ಸೂಚನೆಯನ್ನು ನಾನು ಸಮರ್ಥಿಸುತ್ತೇನೆ.

(Sri RACHIAH rose)

Mr. SPEAKER.—Does not the Hon'ble Member think that the subject-matter of this cut-motion has been sufficiently discussed? We have to cover a number of cut-motions for the day.

Sri B. RACHIAH.—Only five minutes.

Mr. SPEAKER.—The Member may proceed.

* Asterisk indicates that the speech has not been revised by the Member concerned.

ಶ್ರೀ ಬಿ. ರಾಚಯ್ಯನವರು (ಯಳಂದೂರು–ಅನುಸೂಚಿತ ಜಾತಿಗಳು).—ಯಳಂದೂರು ಮತ್ತು ಚಾಮರಾಜನಗರ ತಾಲ್ಲೂಕಿನಲ್ಲಿ ಕೆಲವು ಕಡೆ ಮಾತ್ರ ಈಗ ಮೂರು ವರ್ಷಗಳಿಂದ ಅಲ್ಪಸ್ವಲ್ಪ ಬೆಳಸಾಗಿದೆ. ಎಲ್ಲಿ ಹೊನ್ನು ಹೊಳೆ ಹರಿಯುತ್ತದೆಯೋ ಆ ಪ್ರದೇಶದಲ್ಲಿ ಮಾತ್ರ ನೀರಿನ ವಸತಿ ಸ್ವಲ್ಪಮಟ್ಟಿಗಿದೆ. ಇದು ವಾಸ್ತವವಾದ ಅಂಶ. ಅದನ್ನು ಬಿಟ್ಟು ಬೇರೆ ಕಡೆಗಳಲ್ಲಿ ಖುಷ್ಕಿ ಬೆಳೆಯಿಲ್ಲವೆ ಈ ಕಳೆದ ಮೂರು ವರ್ಷಗಳಿಂದ ಮಳೆ ಹೋಗಿ ಅನೇಕ ಹೋಬಳಿಗಳಲ್ಲಿ ಜನರು ಪರಿತಪಿಸುತ್ತಿದ್ದಾರೆ. ಅನ್ನ ಆಹಾರಗಳಿಗಾಗಿ ಸಾಮಾನ್ಯ ಜನರು ಗೆಡ್ಡೆ ಗೆಣಸು ಮತ್ತು ಹುರುಳಿ ತಿನ್ನುತ್ತಾ ಇದ್ದಾರೆ. ಇಂಥಾದ್ದರಲ್ಲಿ ಅಲ್ಲಿಗೆ ಯಾವ ರೆಮಿಷನ್ನನ್ನೂ ಕೊಟ್ಟಿಲ್ಲ. ಪರಿಹಾರ ಮೊದಲೇ ಇಲ್ಲ.

ಈಗ ಕೋಲಾರ ಡಿಸ್ಟ್ರಿಕ್ಟು ಮತ್ತು ಇತರ ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮಪರಿಹಾರಕ್ಕಾಗಿ ಅನೇಕ ಕಾಮಗಾರಿಗಳನ್ನು ಕೈಕೊಂಡಿದ್ದೇವೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಪ್ರಶ್ನೋತ್ತರಗಳ ಕಾಲದಲ್ಲಿ ತಿಳಿಸಿದರು. ಇದೇ ರೀತಿ ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ಷಾಮ ಪರಿಹಾರವನ್ನು ಹಣದ ರೂಪದಲ್ಲಾಗಲಿ, ದವಸದ ರೂಪದಲ್ಲಾಗಲಿ ಹುಲ್ಲನ್ನು ಒದಗಿಸುವ ರೂಪದಲ್ಲಾಗಲಿ ಕೊಡುವುದು ಬಹಳ ಕಷ್ಟಸಾಧ್ಯ. ಅದಕ್ಕೆ ನಾನು ಹೇಳುವುದೇನೆಂದರೆ, ಕಾಮಗಾರಿಗಳು ಎಲ್ಲೆಲ್ಲಿ ನಡೆಯಬೇಕಾಗಿರುವುವೋ, ಎಲ್ಲಿ ಆಗುತ್ತಿವೆಯೋ ಅಂಥ ಪ್ರದೇಶಗಳಲ್ಲಿ ಅವುಗಳನ್ನು ಜರೂರಾಗಿ ಕೈಕೊಳ್ಳುವುದರ ಕಡೆಗೆ ಹೆಚ್ಚಿಗೆ ಗಮನ ಕೊಟ್ಟರೆ, ಇಂಥ ಪ್ರದೇಶಗಳಲ್ಲಿ ಕೆಲಸವಿಲ್ಲದಿರುವವರಿಗೆ ಕೆಲಸವನ್ನೂ ಒದಗಿಸಿದ ಹಾಗಾಗುತ್ತದೆ. ನಿಮ್ಮ ಕಾಮಗಾರಿಗಳೂ ಚೆನ್ನಾಗಿ ನಡೆದು ಮುಂದಿನ ಸಾಲಿನಲ್ಲಿ ಸರಿಯಾಗಿ ಫಸಲಾಗುವುದಕ್ಕೆ ಸಹಾಯಮಾಡಿದಂತೆಯೂ ಆಗುತ್ತದೆ. ಈಗ ನಮ್ಮ ಕಡೆ ಯಳಂದೂರು, ಯಲಿಯೂರು, ಕೆಸ್ತೂರುಗಳ ಜನರು ಸುವರ್ಣಾವತಿ ನದಿಗೆ, ಹೊಮ್ಮದ ಊರಿನ ಹತ್ತಿರ ಯಳಂದೂರ ಫೀಡರ್ ಚಾನಲ್ಲಿನ ನೀರನ್ನೊದಗಿಸಲು ಒಂದು ಅಣೆಕಟ್ಟನ್ನು ಮಾಡಿಸಬೇಕೆಂದು ಪದೇಪದೇ ಮನವಿ ಮಾಡಿಕೊಂಡಿದ್ದಾರೆ. ಇಷ್ಟು ದಿವಸಗಳಾದರೂ ಅದನ್ನು ಮಂಜೂರುಮಾಡಿಲ್ಲ. ಈ ಸಾರಿಯಾದರೂ ದಯವಿಟ್ಟು ಕೈಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ನಾನು ಕೇಳಿಕೊಳ್ಳುತ್ತೇನೆ. ಹಾಗೆಯೇ ದೊಡ್ಡ ರಾಯಪೇಟೆ ಕೆರೆ, ಕೋಡಿ ಮೋಳೆಕೆರೆ, ಹೊಮ್ಮದಕೆರೆ, ಕನ್ನೇಗಾಲದಕೆರೆಗಳಲ್ಲಿ ಹೂಳು ತುಂಬಿಕೊಂಡು ಭೂಮಿ ಮಟ್ಟಕ್ಕೇ ಹೂಳು ಬಂದುಬಿಟ್ಟಿದೆ. ಇದನ್ನೂ ಮಾಡಿಸಿಕೊಡಬೇಕು. ಜನರಿಗೂ ಪರಿಹಾರ ಒದಗಿಸಿದಹಾಗಾಗುತ್ತದೆ ; ಜಮೀನಸ್ತರುಗಳಿಗೂ ಕೂಲಿ ಸಿಕ್ಕಿ ಈ ಕಷ್ಟಕಾಲದಲ್ಲಿ ಹೊಟ್ಟೆ ಹೊರೆದುಕೊಳ್ಳಲು ಅನುಕೂಲವಾಗುತ್ತದೆ; ಆದ್ದರಿಂದ ಆದಷ್ಟು ಇದಕ್ಕೆ ಹೆಚ್ಚಿಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಾ ನನ್ನ ಪುಟ್ಟ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ಅಧ್ಯಕ್ಷರೆ, ನಮ್ಮ ಮೈಸೂರು ಜಿಲ್ಲೆಯಲ್ಲಿ ಸುಮಾರು ಹತ್ತು ವರ್ಷಗಳಿಂದಲೂ ಮಳೆ ಬೆಳೆ ಸಮರ್ಪಕವಾಗಿ ಆಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಈ ದಿವಸ ಸರ್ಕಾರದ ಗಣನೆಯಲ್ಲಿ ತುಮಕೂರು, ಚಿತ್ರದುರ್ಗ, ಕೋಲಾರ ಈ ಜಿಲ್ಲೆಗಳು ಮಾತ್ರ ದುರ್ಭಿಕ್ಷಕ್ಕೊಳಗಾದ ಪ್ರದೇಶಗಳೆಂದಿದೆ. ಮೈಸೂರು ಜಿಲ್ಲೆ ಯಾವ ರೀತಿ ಕೈಬಿಟ್ಟುಹೋಯಿತೋ ಪರಮಾತ್ಮನೇ ಬಲ್ಲ. ಇದನ್ನು ತಮ್ಮ ಗಮನಕ್ಕೆ ತರಬೇಕೆಂದು ನನ್ನ ಉದ್ದೇಶ. ಹಿಂದೆ ಮಹಾರಾಜರ ಭಾಷಣಕ್ಕೆ ವಂದನಾಸಮರ್ಪಣೆಮಾಡಲು ತಂದಿದ್ದ ನಿರ್ಣಯಕ್ಕೆ ನಾನು ತಿದ್ದುಪಡಿಯನ್ನು ತಂದುದು ಅವರಿಗೆ ಅಗೌರವ ಸೂಚಿಸಬೇಕೆಂಬ ಉದ್ದೇಶದಿಂದಲ್ಲ. ಮೈಸೂರು ಜಿಲ್ಲೆಯ ಕ್ಷಾಮಪರಿಸ್ಥಿತಿಯನ್ನು ಗಮನಕ್ಕೆ ತರುವುದೇ ನನ್ನ ತಿದ್ದುಪಡಿಯ ಉದ್ದೇಶ. ಆದರೆ ಮೈಸೂರು ಜಿಲ್ಲೆಯ ಜನರ ದುರದೃಷ್ಟವೋ ಏನೋ ಈ ವಿಷಯವನ್ನು ಶ್ರೀಮನ್ಮಹಾರಾಜರ ಗಮನಕ್ಕೆ ತರುವ ಅವಕಾಶ ದೊರಕಲಿಲ್ಲ, ಮೈಸೂರು ಜಿಲ್ಲೆಯಲ್ಲಿ ಮಳೆ ಬಾರದಿದ್ದುದರಿಂದ ಬಾವಿಗಳಲ್ಲಿ ನೀರಿಲ್ಲ. ಕೆಲವು ಕಡೆ ಕುಡಿಯುವ ನೀರಿಗೂ ಅಭಾವವಾಗಿದೆ. ಸಂದರ್ಭ ಹೀಗಿರುವಾಗ ಒಂದೊಂದು ತಾಲ್ಲೂಕಿಗೆ ರಿಲೀಫ್ ಫಂಡಿನಿಂದ ಮೂರು ನಾಲ್ಕು ಸಾವಿರ ರೂಪಾಯಿ ಕೊಟ್ಟಿದ್ದಾರೆ. ಇದರಲ್ಲಿ ವ್ಯವಸಾಯಗಾರರಿಗೆ, ರೈತರಿಗೆ, ಕಾರ್ಮಿಕರಿಗೆ ಜೀವನೋಪಾಯವನ್ನೊದಗಿಸಲು ಸಾಧ್ಯವೆ? ಕುಡಿಯುವ ನೀರಿನ ಬಾವಿಗಳನ್ನು ತೆಗೆಯುವುದಕ್ಕೆ ಸಾಧ್ಯವೆ? ಎಂಬುದನ್ನು ಯೋಚಿಸಿದರೆ, ಖಂಡಿತವಾಗಿಯೂ ಸಾಧ್ಯವಿಲ್ಲ. ನಾಲ್ಕಾರು ಮೈಲಿ ದೂರದಿಂದ ನೀರನ್ನು ತಂದು ಉಪಯೋಗಿಸುತ್ತಿದ್ದಾರೆ. ಕೊಟ್ಟಿರುವ ಹಣವನ್ನು ವಿನಿಯೋಗಿಸುವುದರಲ್ಲಿಯೂ ಲೋಪದೋಷಗಳಿವೆ. ಅಧಿಕಾರಿಗಳು ತಾವೇ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಇಂತಹ ಸಂದರ್ಭದಲ್ಲಿ ಸರಿಯಾದ ಮಾರ್ಗವನ್ನು ಹುಡುಕಬೇಕೆಂಬುದು ಒಂದು ವಿಷಯ.

ಎರಡನೆಯದಾಗಿ, ರೆಮಿಷನ್ ವಿಷಯದಲ್ಲಿ, ಸುಮಾರು ಎರಡು ಮೂರು ವರ್ಷಗಳ ಹಿಂದೆ, ಹಿಂದಿನ ಸರ್ಕಾರವಿದ್ದಾಗ ನಂಜನಗೂಡು ಸಬ್‌ಡಿವಿಜನ್‌ನಲ್ಲಿ ಮಳೆಯಿಲ್ಲದೆ ಜನರು ಗೆಡ್ಡೆಗಳನ್ನು ತಿಂದು, ಕುಡಿಯುವ ನೀರಿಲ್ಲದೆ ಮೂರು ನಾಲ್ಕು ಮೈಲಿಗಳಿಂದ ನೀರನ್ನು ತರುತ್ತಿದ್ದರು. ಈಗಲೂ ಅದೇ ಪರಿಸ್ಥಿತಿ ಇದೆ. ಹತ್ತು ವರ್ಷಗಳಿಂದಲೂ ಮೈಸೂರು ಜಿಲ್ಲೆಯನ್ನು ಹಿಂದುಳಿದ ಜಿಲ್ಲೆಯೆಂದು ಭಾವಿಸಿದ್ದಾರೋ ಏನೋ ಗೊತ್ತಿಲ್ಲ. ಪ್ರಾಯಶಃ ಈ ಪರಿಸ್ಥಿತಿಗೆ ಕಾರಣ ಅಲ್ಲಿಗೆ ಮಂತ್ರಿಮಂಡಲದಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲದಿರುವುದೇ ಎಂದು ಜನರ ಅಭಿಪ್ರಾಯ. ಹಿಂದೆ ಮಲೆನಾಡಿನ ಕಠಿಣ ಪರಿಸ್ಥಿತಿಯನ್ನು ಸರಿಪಡಿಸುವ ಉದ್ದೇಶದಿಂದ ಅಲ್ಲಿನ ಜನರ ಕಷ್ಟನಷ್ಟಗಳನ್ನು ನೋಡಿ, ಅಲ್ಲಿನ ಜನರ ಪ್ರೀತಿಪಾತ್ರರಾದವರು ಮಂತ್ರಿಮಂಡಲದಲ್ಲಿದ್ದರೆ ಅಲ್ಲಿನ ಜನರ ಸುಖದುಃಖಗಳನ್ನು ನೋಡುತ್ತಾರೆಂಬ ಉದ್ದೇಶದಿಂದ ಇದಕ್ಕೆ ಅವಕಾಶ ಕೊಟ್ಟಿದ್ದರೆಂದು ಭಾವಿಸುತ್ತೇನೆ. ಈ ದಿವಸ ಮೈಸೂರು ಜಿಲ್ಲೆಯ ವಿಷಯವನ್ನು ಹೇಳುವಾಗ ಇದನ್ನೂ ಹೇಳಬೇಕಾಗಿದೆ. ಇದು ನನ್ನ ಅಭಿಪ್ರಾಯವಲ್ಲ, ಅಲ್ಲಿನ ಜನರ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಮಳೆಹನಿಯಿಂದ ಬಂದ ನೀರು ಒಂದು ಸ್ಥಳದಲ್ಲಿ ನಿಲ್ಲುವಂತೆ ಒಂದು ಏರ್ಪಾಡನ್ನು ನಮ್ಮ ಜಿಲ್ಲೆಯಲ್ಲಿ ಮಾಡಿಲ್ಲ. ಕೆರೆಕಟ್ಟೆಗಳ ನಿರ್ಮಾಣ ಮಾಡಿ ದನಕರುಗಳ ಅವಶ್ಯಕತೆಗಳಿಗೂ ಜನರಿಗೆ ಆವಶ್ಯಕವಾದ ನೀರಾವರಿ ಸೌಕರ್ಯಗಳಿಗೂ ಅನುಕೂಲವಾಗುವಂತಹ ಮಾರ್ಗವನ್ನು ಅನುಸರಿಸುತ್ತಿಲ್ಲ ಈ ನೀತಿಯನ್ನು ಹೊರದೇಶಗಳಲ್ಲಿ ಎಲ್ಲರೂ ಅನುಸರಿಸುತ್ತಿದ್ದಾರೆ. ಇದನ್ನು ನಮ್ಮ ಸರ್ಕಾರದವರೂ ಅನುಸರಿಸಿ ಆ ಜಿಲ್ಲೆಯ ಜನರಿಗೆ ಅನುಕೂಲ ಮಾಡಬೇಕೆಂಬ ಕೋರಿಕೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಮಂತ್ರಿಗಳು).—ಅಧ್ಯಕ್ಷರೆ, ಈ ಕತ್ತರಿ ನಿರ್ಣಯದಲ್ಲಿ ಸರ್ಕಾರದವರು ಅಭಾವ ಪ್ರದೇಶಗಳಲ್ಲಿ

(ಶ್ರೀ ಕಡಿದಾಳ್ ಮಂಜಪ್ಪನವರು).

ಕಂದಾಯ ರಿಯಾಯಿತಿ ಮಾಡಿರುವುದರಲ್ಲಿ ಒಂದು ಪಕ್ಷಪಾತ ನೀತಿಯನ್ನನುಸರಿಸುತ್ತಿದ್ದಾರೆಂಬ ಆಪಾದನೆಯನ್ನು ಶ್ರೀಮಾನ್ ಲಿಂಗಣ್ಣನವರು ಹೊರಿಸಿದ್ದಾರೆ. ಇದಕ್ಕೆ ಏನೂ ಆಧಾರವಿಲ್ಲವೆಂದು ಮೊಟ್ಟಮೊದಲು ಹೇಳಬೇಕಾಗಿದೆ. ಸರ್ಕಾರದವರು ಒಂದು ಪ್ರದೇಶದ ವಿಚಾರದಲ್ಲಿ ಪಕ್ಷಪಾತ ಮನೋಭಾವವನಿಟ್ಟುಕೊಳ್ಳಲು ಯಾವ ಕಾರಣವೂ ಇಲ್ಲ. ಕೋಲಾರ ಜಿಲ್ಲೆಯವರು, ತುಮಕೂರು ಜಿಲ್ಲೆಯವರು ಮತ್ತು ಚಿತ್ರದುರ್ಗ ಜಿಲ್ಲೆಯವರು ಸರ್ಕಾರದ ನೆಂಟರಲ್ಲ; ಮೈಸೂರು ಜಿಲ್ಲೆಯವರು ಸರ್ಕಾರದ ಶತ್ರುಗಳಲ್ಲ. ಈ ವಿಚಾರವನ್ನು ಶ್ರೀಮಾನ್ ಲಿಂಗಣ್ಣನವರೂ ಇತರರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು.

Sri M. LINGANNA.—When moving the cut motion the spirit in which I referred to it was that proper attention has to be bestowed so far as this aspect of the problem in Mysore District is concerned. That was the purport of my speech and I explained that aspect in that spirit.

Mr. SPEAKER.—The Hon'ble Minister is meeting the Member's point as an impression has been created by him in the course of his speech that the administration is partial.

ಶ್ರೀ ಕಡಿದಾಳ್ ಮಂಜಪ್ಪನವರು.—ಕಂದಾಯದ ರೆಮಿಷನ್ ಕೊಡುವ ವಿಚಾರದಲ್ಲಿ ಸರ್ಕಾರದವರು ನಿರ್ದಿಷ್ಟವಾದ ನಿಬಂಧನೆಗಳನ್ನು ಮಾಡಿದ್ದಾರೆ. ಈ ನಿಬಂಧನೆಗಳ ಪ್ರಕಾರ, ಸ್ಥಳೀಯ ಅಧಿಕಾರಿಗಳ ಶಿಫಾರಸುಗಳ ಮೇಲೆ ಮಂಜೂರು ಮಾಡುತ್ತಾರೆ. ತಾವು ಹೇಳತಕ್ಕ ಪ್ರದೇಶಗಳಲ್ಲಿ distress, ಎಂದರೆ ಅಭಾವ ಇದೆ ಎಂದು ಹೇಳುತ್ತಿದ್ದೀರಿ. ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಯ ಕೆಲವು ಅಭಾವ ಪ್ರದೇಶಗಳನ್ನು ನೋಡಿದರೆ, ಅಭಾವ ಪ್ರದೇಶವೆಂದು ಏನು ಹೇಳುತ್ತೀವೆಯೋ ಅದನ್ನು ಗಮನಿಸಿದರೆ, ಅವುಗಳಿಗೂ ನೀವು ಹೇಳುವಂಥವುಗಳಿಗೂ ಏನೂ ಸಂಬಂಧವೇ ಇಲ್ಲವೆಂಬುದು ತಮಗೇ ಗೊತ್ತಾಗುತ್ತದೆ. ಬೇರೆ ಪ್ರದೇಶಗಳಲ್ಲಿಯೂ ತೊಂದರೆಗಳಿವೆ. ಕಡೂರು, ಚನ್ನಗಿರಿಯಲ್ಲಿ ಕೆಲವು ಭಾಗಗಳು, ತರೀಕೆರೆಯ ಕೆಲವು ಭಾಗಗಳು ಇಲ್ಲೆಲ್ಲಾ ತೊಂದರೆಗಳಿವೆ. ಇಂಥಾ ಪ್ರದೇಶಗಳು ಮೈಸೂರು ದೇಶದಲ್ಲಿ ಮಾತ್ರವಲ್ಲದೆ ಇತರ ಪ್ರಾಂತಗಳಲ್ಲಿಯೂ ಇವೆ ಎಂಬುದನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ತಾತ್ಕಾಲಿಕ ಪರಿಹಾರದಿಂದ ಪ್ರಯೋಜನವಿಲ್ಲ, ಖಾಯಂ ಆಗಿ ಪರಿಹಾರವನ್ನೊದಗಿಸಬೇಕೆಂದು ಶ್ರೀಮಾನ್ ಲಿಂಗಣ್ಣನವರೂ ಇತರ ಕೆಲವು ಸದಸ್ಯರೂ ಹೇಳಿರುತ್ತಾರೆ. ನಮ್ಮ ಆಸೆಯೂ ಇದೇ. ನಮ್ಮಲ್ಲಿ ಹಣವಿದ್ದರೆ ಮೈಸೂರು ಸಂಸ್ಥಾನವನ್ನು ಸ್ವಿಟ್ಜರ್ಲೆಂಡ್ ನಂತೆ ಮಾಡಬೇಕೆಂದು ನಮಗೆ ಆಸೆ ಇದೆ.

ಜನಾಬ್. ಜೆ. ಮಹಮ್ಮದ್ ಇಮಾಂರವರು.—ನೆನ್ನೆಯ ದಿವಸ ಹಣದ ಅಭಾವವಿದೆಯೆಂದು ತಾವು ಒಪ್ಪಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಒಪ್ಪಿದೆವು. ಆದುದರಿಂದ ತಾವು ನಮ್ಮೊಡನೆ ಸಹಕರಿಸಿ ಮೈಸೂರು ಸಂಸ್ಥಾನದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾದರೆ ನಮ್ಮ ಕೈಲಾದ ಪ್ರಯತ್ನಗಳನ್ನು ಮಾಡಿ, ಇನ್ನು ಮುಂದೆ ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೂ ಅಭಾವವಿಲ್ಲದೇ ಇರುವ ಹಾಗೆ ಮಾಡುತ್ತೇವೆಂದು ಭರವಸೆ ಕೊಡಬಲ್ಲೆ. ರೆಮಿಷನ್ ವಿಚಾರದಲ್ಲಿ ಒಂದು ಮಾತು. ಎಲ್ಲೆಲ್ಲಿ ಆವಶ್ಯಕತೆ ಇದೆಯೋ, ಕಾನೂನು ಪ್ರಕಾರ ರೆಮಿಷನ್ ಕೊಡಲು ಕಾರಣವಿದೆಯೋ ಅಲ್ಲೆಲ್ಲಾ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಸರ್ಕಾರದವರು ಹಣ ಉಳಿಯಲೆಂಬ ಜಿಪುಣತನದ ಮನೋಭಾವದಿಂದ ಕೆಲಸ ಮಾಡುತ್ತಿಲ್ಲ. ನಮಗೆ ವರದಿ ಹೇಗೆ ಬರುತ್ತದೆಯೋ ಅದನ್ನು ನೋಡಿ ಮಾಡುತ್ತಿದ್ದೇವೆ.

ಶ್ರೀ ಎಂ. ಲಿಂಗಣ್ಣನವರು.—ಜಿಪುಣರೆಂದು ನಾನು ಹೇಳಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವರು ಆ ಅರ್ಥ ಬರುವಂತೆ ಹೇಳಿದರು.

ಒಟ್ಟಿನಲ್ಲಿ ಎಲ್ಲೆಲ್ಲಿ ಆವಶ್ಯಕತೆಯಿದೆಯೋ ಅಲ್ಲೆಲ್ಲಾ ರೆಮಿಷನ್ ಕೊಡಲು ಸಿದ್ಧವಾಗಿದ್ದೇವೆ. ನಿಬಂಧನೆಗಳ ಪ್ರಕಾರ ಸರಿಯಾದ ಕಾರಣವಿರಬೇಕು. ಇಷ್ಟು ಹೇಳಿದಮೇಲೆ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri M. LINGANNA.—I do not press the cut motion Sir. I seek the leave of the House to withdraw it.

The cut motion was, by leave, withdrawn.

Working of the Record of Rights Scheme.

Sri S. SREENIVASA IYENGAR (T.-Narsipur)—Sir, I beg to move :

"That the demand under the head '7. Land Revenue' for Rs. 10,80,000 be reduced by Rs. 100 (to raise a debate on the working of the Record Rights Scheme)."

Mr. Speaker, I beg to submit that the Record of Rights Scheme was introduced in the State in the year 1934 or 35. Ever since that date all rights of any person are immediately posted in these registers maintained under the Record of Rights Scheme. The mutation slips are passed on from the Registration Office, that is, from the Sub-Registrar's Office and conveyed to the several Taluk Offices, but unfortunately the scheme has not worked as proposed. More than that Record of Rights Scheme has been rendered as the Record of wrongs. Most of these slips are not posted up-to-date. We could see in any taluk office huge bundles of these mutation slips not being posted regularly and immediately

against those survey numbers to which these mutations refer. Thereby, the object of the Government in maintaining a correct record of rights about these lands has not been achieved. The reasons for such delay and negligence are to be investigated.

Further, as regards this *phodi* system, in spite of the fact that the prescribed fee for *phodi* work has been remitted to various treasuries in the taluk, the work has not been taken up even though the period between the time of deposit and the time of finishing the work has come to nearly 4 to 5 years. If an instance or an example is necessary, I could very well quote my own instance. I deposited for *phodi* work in the year 1938 and it was completed only in the year 1945. That means, a period of 7 years lapsed from the date of deposit to the date of completion. We are spending already about Rs. 9 lakhs for this Record of Rights Scheme while our receipts are Rs. 2·9 lakhs. Spending such a heavy amount, are we to continue this method of delay or is it to be investigated and something done to improve the present system? As the Record of Rights Scheme is not working properly and efficiently, many times people who do not have any right over the lands have their names still continued in the record and in most of the acquisition cases it has become a job to establish one's own rights. It will be necessary therefore to maintain an efficient record of rights scheme and to minimise the inordinate delay that is happening at present.

Mr. SPEAKER.—Cut motion moved:

"That the demand be reduced by Rs. 100."

2 P.M.

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ, ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಸಭೆಯ ಮುಂದೆ ಶ್ರೀಮಾನ್ ಶ್ರೀನಿವಾಸಅಯ್ಯಂಗಾರ್‌ಅವರು, ಮಂಡಿಸಿರತಕ್ಕ ಖೋತಾ ನಿರ್ಣಯವನ್ನು ಸಮರ್ಥಿಸುತ್ತ ಸಭೆಯ ಗಮನಕ್ಕೆ ನಾನೊಂದು ಹೊಸ ವಿಚಾರವನ್ನು ತರಬೇಕೆಂದಿಚ್ಛಿಸುತ್ತೇನೆ. ನನ್ನ ಸ್ನೇಹಿತರಾದ ಶ್ರೀನಿವಾಸಯ್ಯಂಗಾರ್ ಅವರು ಈ ಮ್ಯೂಟೇಷನ್ ಸ್ಲಿಪ್‌ಗಳು ಏಕೆ ನಿಧಾನವಾಗುತ್ತಿವೆ, ಹಾಗೆ ಮಾಡುವುದರಿಂದ ಏನೇನು ತೊಂದರೆಗಳಾಗುತ್ತಿವೆ ಎಂಬುದರ ಬಗ್ಗೆ ಬೇಕಾದಷ್ಟು ನಿದರ್ಶನಗಳನ್ನು ಕೊಟ್ಟು, ಅವುಗಳಿಗೆಲ್ಲಾ ಕಾರಣವೇನು ಮತ್ತು ಅವುಗಳನ್ನು ಹೇಗೆ ಸರಿಪಡಿಸಬೇಕು ಎಂಬ ವಿಚಾರಗಳನ್ನೆಲ್ಲಾ ವಿಶದವಾಗಿ ಈಗಾಗಲೇ ತಿಳಿಸಿರುತ್ತಾರೆ. ಆದರೆ ಅವರು ಹಾಗೆ ತಿಳಿಸಿರತಕ್ಕ ವಿಷಯಗಳ ಜೊತೆಗೆ ಈಗ ನಾನೊಂದು ಹೊಸ ಸಲಹೆಯನ್ನು ಸೇರಿಸಬೇಕೆಂದಿದ್ದೇನೆ. ಈ ಮ್ಯೂಟೇಷನ್ ಸ್ಲಿಪ್ಪುಗಳೆಲ್ಲಾ ಸಬ್ ರಿಜಿಷ್ಟ್ರಾರ್ ಆಫೀಸಿನಿಂದ ತಾಲ್ಲೂಕು ಆಫೀಸಿಗೆ ಬಂದನಂತರ ಅವುಗಳನ್ನು ಅಪ್-ಟು-ಡೇಟಾಗಿ ಆಯಾ ಸಂಬಂಧಪಟ್ಟ ಲೆಕ್ಕಪತ್ರಗಳಲ್ಲಿ ಕ್ರಮವಾದ ದಾಖಲೆಯನ್ನು ನಮೂದಿಸದಿರುವುದರಿಂದಲೂ, ಮತ್ತು ಆ ಸ್ಲಿಪ್‌ಗಳನ್ನು ಸರ್ವೇ ಇಲಾಖೆಗೆ ಹೊಸ ಟಿಪ್ಪಣಿ ಕಾಪಿಗಳನ್ನು ತಯಾರಿಸಿ, ಅವುಗಳಲ್ಲಿ ತಕ್ಕ ಬದಲಾವಣೆಗಳನ್ನು ಮಾಡುವುದಕ್ಕೆ ಕಳುಹಿಸದೆ ಇರುವುದರಿಂದಲೂ ಅನೇಕ ತೊಂದರೆಗಳು ಉಂಟಾಗಿರುತ್ತವೆ. ಆದುದರಿಂದ ಈ ಅವ್ಯವಸ್ಥೆಗಳನ್ನೆಲ್ಲಾ ಕ್ರಮಪಡಿಸಬೇಕಾದುದು ಅತ್ಯಗತ್ಯ ಮತ್ತು ಇದು ಕೂಡಲೇ ಆಗಬೇಕಾಗಿದೆ.

ಮದ್ರಾಸ್ ಪ್ರಾವಿನ್ಸಿನಲ್ಲಿ ಈ ರೆಕಾರ್ಡ್ ಆಫ್ ರೈಟ್ಸಿನ ಹಕ್ಕನ್ನೆಲ್ಲಾ ಸಬ್ ರಿಜಿಸ್ಟ್ರಾರ್ ಅವರಿಗೇ ಸಂಪೂರ್ಣವಾಗಿ ವಹಿಸಿರುತ್ತಾರೆ. ಈ ಪದ್ಧತಿಯಿಂದ ಅಲ್ಲಿ ಈ ಕೆಲಸ ಕಾರ್ಯಗಳು ಯಾವ ತೊಂದರೆಗೂ ಅವಕಾಶ ಕೊಡದಂತೆ ನಡೆದುಕೊಂಡು ಬರುತ್ತಿವೆ. ಈ ಸಂಬಂಧವಾಗಿ ಎಲ್ಲಾ ಹಕ್ಕುಗಳನ್ನೂ ಸಂಪೂರ್ಣವಾಗಿ ಆ ಸಬ್ ರಿಜಿಷ್ಟ್ರಾರ್ ಅವರಿಗೇ ಬಿಟ್ಟುಕೊಡಲಾಗಿದೆ. ಹೀಗೆ ಮಾಡಿರುವುದರಿಂದ ಯಾವುದಾದರೂ ಪತ್ರಗಳು ಸಬ್ ರಿಜಿಷ್ಟ್ರಾರ್‌ಅವರ ಕಚೇರಿಗೆ ರಿಜಿಷ್ಟ್ರೇಶನ್‌ಗತಕ್ಕ ಬಗ್ಗೆ ಹೋದಾಗ, ಅಲ್ಲಿ ಅವರೇ, ಕ್ರಯವಾಗತಕ್ಕ ಸ್ವತ್ತಿಗೆ ಯಾರು ಮಾಲೀಕರು, ಅವರಿಗೆ ಅದರ ಬಗ್ಗೆ ಹಕ್ಕು ಎಷ್ಟಿದೆ, ಯಾರು ಯಾರು ಹಕ್ಕುದಾರರುಗಳಿದ್ದಾರೆ ಎಂಬ ಅಂಶಗಳನ್ನೆಲ್ಲಾ ಪರಿಶೀಲಿಸಿ ರಿಜಿಸ್ಟರ್ ಮಾಡುತ್ತಾರೆ. ಹೀಗೆ ಒಂದು ವ್ಯವಸ್ಥೆ ಮಾಡಿರುವುದರಿಂದ ಈ ಮ್ಯೂಟೇಷನ್ ಸ್ಲಿಪ್ಪುಗಳು ಹೊರಗಡೆ ಹೋಗಿ ಕೆಲಸ ನಿಧಾನವಾಗುವುದಕ್ಕೆ ಅವಕಾಶವಿಲ್ಲದಂತಾಗಿದೆ. ಜನರಿಗೂ ಅನುಕೂಲವಾಗಿದೆ. ಆದುದರಿಂದ ಅದೇ ರೀತಿ ಇಲ್ಲಿಯೂ ಮಾಡಬೇಕೆಂದು ಹೇಳಿ ನಾನು ಈ ಕತ್ತರಿ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಸಚಿವರು).—ಅಧ್ಯಕ್ಷರೇ, ಈ ಕತ್ತರಿ ನಿರ್ಣಯದ ಸಂಬಂಧವಾಗಿ, ಮಾನ್ಯ ಸದಸ್ಯರು ತಿಳಿಸಿರುವಂತೆ, ಕಾಗದಪತ್ರಗಳ ವಿಲೇವಾರಿಯು ನಿಧಾನವಾಗುತ್ತಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೂ ಬಂದಿದೆ. ಕೆಲವು ಕಡೆ ಈ ಕಾಗದಪತ್ರಗಳ ವಿಲೇವಾರಿ ಸಂಖ್ಯೆ ಜಾಸ್ತಿಯಾಗಿದೆ. ಆದರೂ ಈ ವಿಷಯದಲ್ಲಿ ಸರ್ಕಾರದವರು ಸಾಧ್ಯವಾದಷ್ಟು ಜಾಗ್ರತೆ, ಸೂಕ್ತಕಾರ್ಯಕ್ರಮಗಳನ್ನು ತೆಗೆದುಕೊಂಡು ಇದನ್ನು ಕ್ರಮಪಡಿಸಲಾಗುತ್ತದೆಯೆಂಬ ಭರವಸೆಯನ್ನು ಮಾನ್ಯ ಸೂಚಕರಿಗೆ ಕೊಡಲಿಚ್ಛಿಸುತ್ತೇನೆ. ಈ ಒಂದು ಭರವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

Sri S. SRINIVASA IYENGAR.—I do not press the motion, but seek the leave of the House to withdraw it.

The cut motion was, by leave, withdrawn.

Salaries to Village Officers in addition to inamtis.

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ, ಅನುಸೂಚಿತ ಜಾತಿಗಳು).—ಸ್ವಾಮಿ ನಾನು ನನ್ನ ಈ ಹತ್ತನೇ ಕತ್ತರಿ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"That the demand under the head '7. Land Revenue' for Rs. 10,80,000 be reduced by Rs. 100 (to raise a debate on the abolition of the offices of Thotis, Talavaris, Niragantis, etc., and grant them salaries in addition to the inam lands held by them at present,"

ಸ್ವಾಮಿ, ಇದು ಬಹಳ ಮುಖ್ಯವಾದ ನಿರ್ಣಯ. ದೇಶದ ಹಿತದೃಷ್ಟಿಯಿಂದ ಒಂದು, ಮತ್ತು ಜನತೆಯ ಹಿತದೃಷ್ಟಿಯಿಂದ ಒಂದು, ಹೀಗೆ ಈ ಎರಡು ಹಿತದೃಷ್ಟಿಯಿಂದ ನಾನು ಈ ನಿರ್ಣಯವನ್ನು ಸಭೆಯ ಮುಂದೆ ಈ ದಿವಸ ತಂದಿರುತ್ತೇನೆ. ಆದರೆ ಈ ನಿರ್ಣಯದಲ್ಲಿ ನಾನು ತಿಳಿಸಬೇಕೆಂದಿರುವ ವಿಷಯಗಳು ಸರ್ಕಾರದವರ ಗಮನಕ್ಕೂ ಕೂಡ ಈಗಾಗಲೇ ಬಂದಿರುತ್ತವೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಗ್ರಾಮ ನೌಕರರ ಒಂದು ವ್ಯವಸ್ಥೆಯು ಬಹಳಕಾಲದ ಹಿಂದಿನಿಂದಲೂ ಎಂದರೆ ದಿವಂಗತ ಚಿಕ್ಕದೇವರಾಜ ಒಡೆಯರ ಕಾಲದಿಂದಲೂ, ಬಾರಾಬಲೂತಿಯೆಂಬುದಾಗಿ ಕರೆಯಲ್ಪಟ್ಟು, ಅಂದಿನಿಂದಲೂ ಈ ಗ್ರಾಮನೌಕರರು ದೇಶಕ್ಕೆ ಸೇವೆ ಮಾಡುತ್ತಿರುವ ವಿಚಾರ ತಮಗೆಲ್ಲರಿಗೂ ತಿಳಿದಿರುವುದೇ ಆಗಿದೆ. ಈಗಿನ ಕಾಲದಲ್ಲಿ ಅನುಸರಿಸಲಾಗುತ್ತಿರುವ ಗ್ರಾಮನೌಕರರ ಆಕ್ಟಿನಲ್ಲೂ ಕೂಡ ತಿಳಿಸಿರುವಂತೆ, ಈ ಗ್ರಾಮನೌಕರರಲ್ಲಿ ತೋಟಿ ತಳವಾರ, ನೀರುಗಂಟಿ, ಇವರೆಲ್ಲರೂ ಸೇರಿದ್ದಾರೆ. These officers are the basis for the administration of the State ಎಂದು ತಿಳಿದಿದ್ದೇನೆ. ಅದೇ ಆಕ್ಟಿನ ಆರ್ಟಿಕಲ್ 86-87ರಲ್ಲಿ ಈ ಗ್ರಾಮ ನೌಕರರುಗಳ ಕರ್ತವ್ಯವೇನೆಂಬುದನ್ನೂ ಸಹ ನಿರ್ಧರಿಸಿದ್ದಾರೆ. ಹಾಗೆ ನಿಗದಿಯಾಗಿರತಕ್ಕ ಕೆಲಸಗಳನ್ನು ಸರ್ಕಾರದ ಪರವಾಗಿ ಅವರು ಹಗಲೂ-ರಾತ್ರಿ ನಡೆಸಿಕೊಂಡು ಬಂದಾಗ್ಯೂ ಕೂಡ, ತಾವು ಅವರಿಗೆ ಸಾಕಾದಷ್ಟು ಉತ್ತೇಜನ ಕೊಡದೆ ಇರುವುದರಿಂದ ಅವರು ಇಂದು ಬಹಳ ನಿರ್ಗತಿಕರಾಗಿದ್ದಾರೆ. ಆದರೆ ತಾವು ಈ ದಿವಸ ಅವರಿಗೆ ಏನೊಂದು ಇನಾಂತಿ ಮತ್ತು ಮಿರಾಸೆಯೆಂಬ ಅನುಕೂಲಗಳನ್ನು ಕೊಡಬೇಕೆಂದು ವಿಧಾಯಕ ಮಾಡಿದ್ದೀರೋ ಅವುಗಳೆಲ್ಲವೂ, ಅವರು ದೇಶಕ್ಕೆ ಸಲ್ಲಿಸುತ್ತಿರುವ ನಿಷ್ಠೆಗೆ ಮತ್ತು ಅವರ ದೇಶಸೇವೆಗೆ ತೀರಾ ಸಾಲದಾಗಿರುವುದರಿಂದ ಈ ಜನಾಂಗ ಇಂದು ಬಹಳ ಬಡಸ್ಥಿತಿಗೆ ಬಂದಿದೆಯೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ತಾವು ಅವರಿಗೆ ಕೊಟ್ಟಿರತಕ್ಕ ಇನಾಂ ಜಮೀನುಗಳಿಂದ ತಕ್ಕಷ್ಟು ವರಮಾನ ಬರುತ್ತಿಲ್ಲ. ಇಷ್ಟೇ ಅಲ್ಲದೆ ಅವರಿಗೆ ಕೊಟ್ಟಿರತಕ್ಕ ಇನಾಂ ಜಮೀನುಗಳನ್ನು ಹಂಚಿಕೊಳ್ಳುವುದರಲ್ಲಿ ಷಿಖ್ಮಿದಾರರಿಗೆ ಹಕ್ಕು ಇರುವುದಿಲ್ಲವೆಂಬುದಾಗಿ ಮಾಡಿದ್ದೀರಿ. ಆ ಇನಾಂ ಜಮೀನುಗಳೇನಿದ್ದರೂ, ಆ ಸರ್ಕಾರಿ ಕೆಲಸವನ್ನು ಯಾರು ಮಾಡುತ್ತಾರೋ ಅವರೇ ಅನುಭವಿಸಬೇಕೆಂದಿದೆ. ಆ ಜನಾಂಗದ ಬಡತನಕ್ಕೆ ಇದೂ ಒಂದು ಕಾರಣವಾಗಿದೆ. ಆದರೆ ಈ ಸಂಬಂಧವಾಗಿ ಇವರ ತೊಂದರೆಗಳನ್ನು ನಿವಾರಣೆ ಮಾಡತಕ್ಕ ಬಗ್ಗೆ ಸೂಕ್ತ ಸಲಹೆಗಳನ್ನೀಯಲು ಹಿಂದಿದ್ದ ಸರ್ಕಾರದವರು ಒಂದು ಮಿರಾಸೆ ಸಮಿತಿಯೆಂದು ಒಂದು ಸಮಿತಿ ನೇಮಕ ಮಾಡಿದ್ದರು. ಆ ಸಮಿತಿಯವರು ಕೆಲವು ಶಿಫಾರಸುಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೆ ಅವು ಕಿಂಚಿತ್ತಾದರೂ ಪ್ರಯೋಜನವಿಲ್ಲ. ಆ ಸಮಿತಿಯವರು ಎಕರೆಯೊಂದಕ್ಕೆ ಮೂರು ಸೇರು ಮಿರಾಸೆ ಕೊಡಬೇಕೆಂದು ಶಿಫಾರಸು ಮಾಡಿದ್ದನ್ನೇ ಸರ್ಕಾರದವರೂ ಅನುಮೋದಿಸಿದ್ದಾರೆ. ಆದರೆ ಹಾಗೆ ಅವರು ಕ್ಲುಪ್ತಮಾಡಿರುವ 3 ಸೇರು ಮಿರಾಸೆ ಕೂಡ ಈಗ ಇವರಿಗೆ ಸರಿಯಾಗಿ ಸಲ್ಲುತ್ತಿಲ್ಲ. ಹೀಗಾಗಿ ಅವರು ಎಷ್ಟೇ ನಿಷ್ಠೆಯಿಂದ ಸರ್ಕಾರಕ್ಕೆ ಸೇವೆ ಸಲ್ಲಿಸಿಕೊಂಡು ಬರುತ್ತಿದ್ದಾಗ್ಯೂ ಅವರಿಗಿರತಕ್ಕ ಅನಿವಾರ್ಯಗಳೊಂದೂ ಕಡಮೆಯಾಗಲಿಲ್ಲ. ದೇಶದಲ್ಲಿ ಈ ಆಹಾರಾಭಾವ ಬಂದಮೇಲಂತೂ, ಈ ಆಹಾರ ಧಾನ್ಯಗಳು ದೇಶದಿಂದಾಚೆಗೆ ಮತ್ತು ಗಡಿಯಿಂದ ಗಡಿಗೆ ಹೋಗತಕ್ಕದ್ದನ್ನು ತಡೆಗಟ್ಟುವುದರಲ್ಲೂ ಪಟೇಲ್ ಶ್ಯಾನುಭೋಗರುಗಳಿಗೆ ಎಚ್. ಎಸ್. ಫಾರಂ ಇತ್ಯಾದಿ ಲೆಕ್ಕಗಳನ್ನು ತಯಾರಿಸುವ ಸಂಬಂಧದಲ್ಲೂ ಇವರಿಗೆ ಎಷ್ಟೋ ಕೆಲಸ ಜಾಸ್ತಿಯಾಗಿತ್ತು ಮತ್ತು ಇವರು ಹೇಗೆ ನಿಷ್ಠೆಯಿಂದ ಸೇವೆ ಸಲ್ಲಿಸಿದರೆಂಬುದಕ್ಕೆ ಯಾವ ಪ್ರತಿಫಲವೂ ಅವರಿಗೆ ದೊರೆಯಲಿಲ್ಲ. ಪಟೇಲ್ ಶ್ಯಾನುಭೋಗರಿಗಾದರೂ ತಾವು ಒಂದು ಪ್ರೋಟಿಗೇ ರೂಪವಾಗಿ ಅನುಕೂಲ ನೀಡಿದ್ದೀರಿ. ಆದರೆ ಇವರಿಗೆ ಯಾವ ವಿಧವಾಗಿಯೂ, ಯಾವ ಅನುಕೂಲವೂ ಸಲ್ಲಲಿಲ್ಲ.

ಹೀಗೆ ನಾನಾ ರೀತಿಯಲ್ಲಿ ಅವರಿಗೆ ತೊಂದರೆಯಾಗಿದ್ದರೂ ಕೂಡ ಅವರು ನಿಜವಾಗಿಯೂ ದೇಶಸೇವೆ ಮಾಡುತ್ತಿರುವುದು, ಕಷ್ಟಪಟ್ಟು ಕೆಲಸಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ, ಅದನ್ನು ಸಂತೋಷದಿಂದ ಒಪ್ಪುತ್ತಾರೆಂದು ನಂಬಿದ್ದೇನೆ.

ಎರಡನೆಯದಾಗಿ ಇದರ ಹಕ್ಕು ಏಕೆ ಹೋಗಬೇಕೆಂಬುದನ್ನು ನಾನು ಇಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ತೋಟಿ ತಳವಾರರು ನಿಜವಾಗಿಯೂ ದೇಶಸೇವೆ ಮಾಡಿದರೂ ಕೂಡ ಸಾಮಾಜಿಕವಾಗಿ ಅವರನ್ನು ಒಂದು ಕೀಳು ಭಾವನೆಯಿಂದ ಕಾಣುವುದು ಅನೇಕರಿಗೆ ಮನದಟ್ಟಾಗಿದೆ, ಇದು ಮುಖ್ಯವಾಗಿ ಹೋಗಬೇಕು. ಅವರು ಎಷ್ಟೇ ನಿಷ್ಠೆಯಿಂದ ಕೆಲಸಮಾಡಿದರೂ, ಎಷ್ಟೇ ಕಷ್ಟಪಟ್ಟು ಕೆಲಸಮಾಡಿದರೂ, ಅವರು ಎಷ್ಟೇ ವಿದ್ಯಾವಂತರಾದರೂ ಕೂಡ ಅವರನ್ನು ತೋಟಿ, ತಳವಾರರು ಎಂಬ ಒಂದು ಸಣ್ಣ ಭಾವನೆಯಿಂದ ಕಾಣುವುದರಿಂದ ಸಾಮಾಜಿಕ ದೃಷ್ಟಿಯಿಂದ ಈ ಹಕ್ಕು ಹೋಗಬೇಕೆಂದು ನಾನು ಕೇಳುತ್ತಿದ್ದೇನೆ.

ಮೂರನೆಯದಾಗಿ ಹಳ್ಳಿಗಾಡಿನಲ್ಲಿ ತೋಟಿತಳವಾರರ ಕೆಲಸಕ್ಕೆ ಸಾಮಾನ್ಯವಾಗಿ ಬೇರೆಯವರು ಬರುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ ದೇಶಸೇವೆಯ ಹಿತದೃಷ್ಟಿಯಿಂದ ಒಂದೇ ಒಂದು ಸಲಹೆ ಮಾಡುವುದು ನನ್ನ ಕರ್ತವ್ಯ. ಅವರು ಕೆಲಸಮಾಡಲು ತಯಾರಾಗಿದ್ದಾರೆ. ಅವರಿಗೆ ಈಗ ಕೊಡುವ ಮಿರಾಸೆಗೆ ಬದಲಾಗಿ ಸರಿಯಾದ ಸಂಬಳ ಕೊಟ್ಟರೆ ಈಗಿರುವ ಉತ್ಸಾಹಕ್ಕಿಂತ ಹೆಚ್ಚಿನ ಉತ್ಸಾಹದಿಂದ ಕೆಲಸಮಾಡುತ್ತಾರೆಂದು ಸರ್ಕಾರದಲ್ಲಿ ಮನವಿಮಾಡುತ್ತೇನೆ.

ಕೊನೆಯದಾಗಿ ಅವರಿಗೆ ಈಗಾಗಲೇ ಇನಾಂ ಜಮೀನೆಂದು ಸ್ವಲ್ಪ ಜಮೀನು ಕೊಡಲಾಗಿತ್ತು. ಅದನ್ನೇನೋ ಕೊಟ್ಟಿದ್ದರೂ ಅವರು ಸರಿಯಾಗಿ ಕೆಲಸಮಾಡುವುದಿಲ್ಲ

ವೆಂದು ಅನೇಕ ಗ್ರಾಮಗಳಲ್ಲಿ ಪಟೇಲರು, ಶೇಕದಾರರು ಸಸ್ಪೆಂಡ್‌ಮಾಡಿ ಆ ಜಮೀನನ್ನು ಬೇರೆಯವರ ಮೂಲಕ ವ್ಯವಸಾಯ ಮಾಡಿಸಿ ಫಸಲು ತೆಗೆಸುವುದು ಅನೇಕ ಕಡೆ ಕಂಡುಬಂದಿದೆ; ಅದಕ್ಕೆ ಉದಾಹರಣೆ ಹೇಳಬಹುದು. ಅನೇಕ ಗ್ರಾಮಗಳಲ್ಲಿ ಈ ರೀತಿ ನಡೆಯುತ್ತಿರುವುದು ಈ ಸಭೆಯವರಿಗೂ ಗೊತ್ತಿದೆ. ಸರ್ಕಾರಕ್ಕೂ ಗೊತ್ತಿರಬಹುದು. ಆದ್ದರಿಂದ ಹೆಚ್ಚು ಒತ್ತಾಯ ಮಾಡುವುದಿಲ್ಲ. ಹರಿಜನರ ಉದ್ಧಾರವಾಗಬೇಕು, ನಿಜವಾಗಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಬೇಕು, ಅದರ ಮೂಲಕ ದೇಶೋನ್ನತಿಯಾಗಬೇಕು ಎಂಬುದಾಗಿ ಹೇಳುತ್ತಿರುವುದನ್ನು ಗಮನಿಸಿ ಅವರಿಗೆ ಸಂಬಳ ಸಾರಿಗೆ ಕೊಡುವುದರ ಜೊತೆಗೆ ಈಗಿರುವ ಇನಾಂತಿ ಜಮೀನುಗಳನ್ನು ಜಮೀನಿಲ್ಲದ ತೋಟಿ ತಳಾರಿಗಳ ಹೆಸರಿಗೆ ಖಾಯಂ ಮಾಡಬೇಕು. ಅದರಿಂದ ಸರ್ಕಾರಿ ಕೆಲಸವೂ ಸುಲಲಿತವಾಗಿ ನಡೆಯುತ್ತದೆ. ಆದಕಾರಣ ಸಂಬಳ ಸಾರಿಗೆಗಳನ್ನು ಕೊಟ್ಟು ನೇಮಕಮಾಡಿ ಅವರ ಹಕ್ಕನ್ನು ತೆಗೆದು ಅನುಕೂಲಪಡಿಸಬೇಕೆಂದು ಒತ್ತಾಯಪಡಿಸುತ್ತೇನೆ.

Mr. SPEAKER.—Cut motion moved.

"That the demand be reduced by Rs. 100".

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು (ಮಳವಳ್ಳಿ).—ಸ್ವಾಮಿ, ನನ್ನ ಮಿತ್ರರಾದ ಶ್ರೀ ಚಿಕ್ಕಲಿಂಗಯ್ಯನವರು ಮಂಡಿಸಿರುವ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ. ಈ ತೋಟಿ, ತಳವಾರ, ನೀರಗಂಟಿ ಎಂಬುವರು ಎಲ್ಲೆಲ್ಲಿರುವರೋ ಅಲ್ಲೆಲ್ಲಾ ಅವರು ವಿಶೇಷವಾಗಿ ನಿಮ್ಮ ವರ್ಗದವರೇ ಆಗಿರುತ್ತಾರೆಂಬುದು ಸರ್ಕಾರಕ್ಕೆ ಗೊತ್ತೇ ಇದೆ. ಹೆಚ್ಚಾಗಿ ಅವರಲ್ಲೇ ಇರುತ್ತಾರೆಂದು ಬೇರೆ ಹೇಳಬೇಕಾಗಿಲ್ಲ. ಯಾವ ಒಂದು ಜಾತ್ಯಾತೀತ ರಾಷ್ಟ್ರವನ್ನು ನಿರ್ಮಾಣ ಮಾಡಬೇಕೆಂದಿರುವ ರಾಜ್ಯಾಂಗದಲ್ಲಿಯೂ ಕೂಡ ನಿಮ್ಮ ವರ್ಗದವರಿಗೆ ಒಂದು ರಕ್ಷಣೆಕೊಟ್ಟಿದೆ. ಈ ತೋಟಿ, ತಳವಾರ, ನೀರಗಂಟಿಗಳಿಗೆ ಪುರಾತನ ಕಾಲದಲ್ಲಿ ಇನಾಂತಿ ಜಮೀನನ್ನು ಕೊಟ್ಟು ಜೀವನಮಾಡಿಕೊಂಡು ಹೋಗಿ ಎಂದು ಹೇಳಿದ್ದರೆ ಜೀವನದ ವೆಚ್ಚ ಹೆಚ್ಚಾಗಿರುವ ಈ ಕಾಲದಲ್ಲೂ ಅದೇ ಜಮೀನಿನಿಂದ ಜೀವನಮಾಡಿ ಎಂದು ಒತ್ತಾಯಪಡಿಸುವ ನೀತಿ ನಿಜವಾಗಿಯೂ ಸರಿಯಲ್ಲ. ಮುಂದುವರಿದ ಪಂಗಡ ಎಂದು ಹೇಳುವವರು ಅಂಥ ಹಿಂದುಳಿದ ಪಂಗಡದವರ ದುಡಿಮೆ, ತ್ಯಾಗ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದಾದರೆ, ಅವರ ಬಡತನ, ಅಜ್ಞಾನ ಇವುಗಳನ್ನೂ ದುರುಪಯೋಗಪಡಿಸಿಕೊಂಡು ನಾವು ಮುಂದುವರಿದಿದ್ದೇವೆ. ಆದ್ದರಿಂದ ಈ ಮೂಲಕ ಅವರಿಗೆ ಸಾಲಗಾರರಾಗಿದ್ದೇವೆ. ಅವರ ಸಾಲ ತೀರಿಸುವುದು ನಮ್ಮೆಲ್ಲರ ಕರ್ತವ್ಯ ಎಂಬುದನ್ನು ಮರೆಯಬಾರದು. ಇಂಥಾದ್ದರಲ್ಲಿ ಹೆಚ್ಚು ಜನ ಸಂಖ್ಯೆಯಿರುವ ತೋಟಿ, ತಳವಾರ, ನೀರುಗಂಟಿ ಮುಂತಾದ ನಿಮ್ಮ ವರ್ಗದ ನೌಕರರಿಗೆ ನೀವು ಈ ರೀತಿ ಉದಾರವಾಗಿ ಸಹಾಯ ಮಾಡುವುದರಿಂದ ಅವರು ಮುಂದುವರಿಯುವುದಕ್ಕೆ ಅವಕಾಶ ಮಾಡಿದಂತಾಗುತ್ತದೆ ಹೊಸದಾಗಿ ಏನೂ ಹೆಚ್ಚಾಗಿ ಕೇಳಿಲ್ಲ. ಅವರಿಗಿರತಕ್ಕದ್ದರಲ್ಲಿ ಸ್ವಲ್ಪ ಅನುಕೂಲಪಡಿಸಿಕೊಡಿ ಎಂದು ಮಾತ್ರ ಕೇಳುತ್ತಿದ್ದಾರೆ. ಇದುವರಿಗೆ ಅವರಿಗೆ ಯಾವ ರೀತಿ ಉತ್ತೇಜನ ಕೊಟ್ಟಿದ್ದೇವೆಂಬುದನ್ನು ನೋಡಿದರೆ ಅತ್ಯಂತ ವಿಷಾದವಾಗುತ್ತದೆ. ಆದ್ದರಿಂದ ಸರ್ಕಾರದವರು ಹಿಂದುಳಿದ ಜನಾಂಗವೆಂದು ಪರಿಗಣಿಸಿರುವ ಇಂಥ ಬಹಳ ಕೆಳವಟ್ಟದಲ್ಲಿರುವ ಪಂಗಡದವರಿಗೆ ಹೆಚ್ಚಾಗಿ ಸಹಾಯ ದೊರಕಿಸುವುದು ಖಂಡಿತ ಅತ್ಯಗತ್ಯವಾಗಿದೆ. ಇಲ್ಲದಿದ್ದರೆ ಅವರ ಕಷ್ಟದ ಕೊರಗಿನ ಕೂಗು ಕಾಡ್ಕಿಚ್ಚಾಗಿ ಕ್ರಾಂತಿ ಉಂಟಾಗಿ ಆ ಕ್ರಾಂತಿ ಬೆಳೆದಲ್ಲಿ ನಾವೆಲ್ಲ ಕೊಚ್ಚಿ ಹೋಗಬೇಕಾಗುತ್ತದೆಂಬುದನ್ನು ಮರೆಯಬಾರದು. ನಮ್ಮ ಮಾನ್ಯ ಮಿತ್ರರಾದ ಹರಿಜನರ ಕೂಗಿಗೆ ಕಿವಿಗೊಟ್ಟು ಅವರ ಕಷ್ಟ ನಿವಾರಣೆಗಾಗಿ, ಅವರ ಉತ್ತೇಜನಕ್ಕಾಗಿ, ಇಂಥ ಒಂದು ಖೋತಾ ನಿರ್ಣಯವನ್ನು ಮಂಡಿಸಿರುವುದು ಸೂಕ್ತವಾಗಿದೆ. ಆದ್ದರಿಂದ ನಿಮ್ಮ ವರ್ಗದವರ ಜನಾಂಗಕ್ಕೆ ಸರ್ಕಾರ ಬಹಳ ಉದಾರವಾಗಿ ಮತ್ತು ಸಹಕಾರ ಮನೋಭಾವನೆಯಿಂದ ಸಹಾಯ ನೀಡುತ್ತಾರೆಂದು ನಂಬಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ರೆವೆನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಸಚಿವರು).—ಅಧ್ಯಕ್ಷರೇ, ನಿಮ್ಮ ವರ್ಗದವರ ವಿಚಾರದಲ್ಲಿ ಸರ್ಕಾರದವರಿಗೆ ಸಂಪೂರ್ಣ ಸಹಾನುಭೂತಿಯಿದೆಯೆಂಬುದನ್ನು ಎಲ್ಲರೂ ತಿಳಿದುಕೊಂಡಿರುವುದರಿಂದ ಅದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಆದರೆ ಈ ಕತ್ತರಿ ನಿರ್ಣಯದಲ್ಲಿ ತೋಟಿ, ತಳವಾರ, ನೀರುಗಂಟಿ ಇವರುಗಳಿಗೆ ವಂಶಪಾರಂಪರ್ಯವಾಗಿ ಬಂದಿರುವ ಹಕ್ಕು ಹೋಗದ ಹಾಗೆ ಕಾಪಾಡಿ ಅವರಿಗೆ ಸಂಬಳ ಕೊಡಬೇಕೆಂದು ಸೂಚಿಸಿದ್ದಾರೆ. ಈ ವಿಚಾರ ಪದೇ ಪದೇ ಶಾಸನಸಭೆಗಳ ಮುಂದೆ ಬರುತ್ತಲೇ ಇದೆ. 1943ರಲ್ಲಿ ಈ ತೋಟಿ, ತಳವಾರರ ವಿಚಾರದಲ್ಲಿ ಒಂದು ಸಮಿತಿ ನೇಮಕವಾಗಿತ್ತು. ಅ ಸಮಿತಿಯವರು ಎಲ್ಲಾ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಈಗಿರತಕ್ಕ ಪದ್ಧತಿಯೇ ಮುಂದುವರಿಯುವುದು ಸರಿ ಎಂದು ಹೇಳಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಅನಂತರ ಶ್ರೀ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟಿದ್ದ ಸಮಿತಿಯವರೂ ಕೂಡ ಈಗಿರುವ ಪದ್ಧತಿಯನ್ನು ಬದಲಾವಣೆಮಾಡಬೇಕಾಗಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇನ್ನೊಂದು ಅಂಶ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಈ ತೋಟಿ ತಳವಾರ ಮುಂತಾದವರು full time workers ಅಲ್ಲ. ಅವರು ಗ್ರಾಮಾಧಿಕಾರಿಗಳಿಗೆ ಸಹಾಯಕರಾಗಿ ಕಂದಾಯ ವಸೂಲಿ ಕಾಲದಲ್ಲಿ ನೆರವು ಕೊಟ್ಟರೆ ಸಾಕು.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—On a point of Order Sir. ಅವರು full time workers ಅಲ್ಲವೆಂದು ಹೇಳುತ್ತಿದ್ದಾರೆ. ಆದರೆ 365 ದಿನಗಳೂ ಕೆಲಸಗಾರರು ಎಂಬುದನ್ನು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅದು point of order ಅಲ್ಲ. ಆದರೂ ಪರವಾಗಿಲ್ಲ. ನನಗೆ ತಿಳಿದ ಹಾಗೆ ತೋಟಿ ತಳವಾರರಿಗೆ ವರ್ಷದಲ್ಲ 365 ದಿವಸಗಳೂ ಕೆಲಸವಿಲ್ಲ. ಅವರು ಬೇರೆ ಉದ್ಯೋಗದಲ್ಲಿ ನಿರತರಾಗುವುದಕ್ಕೆ ಸಾಕಾದಷ್ಟು ಅವಕಾಶವಿದೆ. ಅದೂ ಅಲ್ಲದೆ ಇನ್ನೊಂದು ಅಂಶ ನೆನಪಿನಲ್ಲಿಟ್ಟಿರಬೇಕು. ವಂಶಪಾರಂಪರ್ಯವಾದ ಹಕ್ಕಿನ ವಿಚಾರದಲ್ಲಿ ಸರ್ಕಾರ ಒಂದು ನೀತಿಯನ್ನು ಅನುಸರಿಸಬೇಕಾಗಿದೆ. ತೋಟಿ ತಳವಾರರುಗಳಿಗೆ ಈಗಿರುವ ಒಂದು ವ್ಯವಸ್ಥೆಯನ್ನು ಬಿಟ್ಟು ಸಂಬಳ ಕೊಡುವುದಾದರೆ ಅದಕ್ಕೆ ಹಣ ಎಷ್ಟಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ಎಲ್ಲಾ ದೃಷ್ಟಿಯಿಂದ ಈಗಿರುವ ಪದ್ಧತಿ ಮುಂದುವರಿಯುವುದೇ ಸದ್ಯಕ್ಕೆ ವಾಸಿ. ಆದ್ದರಿಂದ ಮಾನ್ಯ ಸದಸ್ಯರು ಈ ಕತ್ತರಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಪಟೇಲ್ ಶ್ಯಾನುಭೋಗರ ವಂಶ ಪಾರಂಪರ್ಯವಾದ ಹಕ್ಕನ್ನು ...

Mr. SPEAKER.—The Hon'ble Member cannot make a statement now. He must say that either he seeks leave to withdraw or presses the cut motion. That is all.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ನನ್ನ ಕತ್ತರಿ ನಿರ್ಣಯುವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

The cut motion was, by leave, withdrawn.

Mr. SPEAKER.—So far as cut motion No. 12 is concerned the proper place would be under Demand No. 13. The Hon'ble Member will be alert and move it when that demand is taken up for discussion.

Cut motions in the list under "Land Revenue" are over.

Sri S. GOPALA GOWDA.—Sir, I may be permitted to move cut motion No. 4.

Mr. SPEAKER.—I am sorry, the Hon'ble Member was not present when it was called.

The question is:

"That a sum not exceeding Rs. 10,80,000 be granted to the Government to complete the sum necessary to defray the charges which will come in course of payment during the year ending 31st day of March 1953 in respect of 'Land Revenue'."

The motion was adopted.

Demand No. 2—State Excise.

8. STATE EXCISE DUTIES.

Mr. SPEAKER.—Motion moved:—

"That a sum not exceeding Rs. 6,83,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'State Excise'."

Cut motion No. 14 stands in the name of Sri M. Linganna. The Hon'ble Member is not present. Cut motion No. 17. Sri B. Hutche Gowda. The Hon'ble Member is not present.

The question is:

"That a sum not exceeding Rs. 6,83,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'State Excise'."

The motion was adopted.

Janab J. MOHAMED IMAM (Jagalur).—I oppose the demand.

Mr. SPEAKER.—I waited for a minute and a half but you did not rise to speak.

Janab J. MOHAMED IMAM.—The Chair called out the name of Sri B. Hutche Gowda and then put the demand. No time was given before that.

Mr. SPEAKER.—I am sorry. The demand is already voted.

Janab J. MOHAMED IMAM.—I have to strongly protest against it. What I submit with all due respect to the Chair is—I will not question the authority—that in all such important matters, the Chair should give sufficient latitude to the Members. The Chair might have been watching that I never took part in the discussion concerning Land Revenue. I thought this was an important subject. The Chair called out Sri Srinivasa Iyengar, then Sri B. Hutche Gowda and then put the demand to vote. I at once got up saying I am opposing the entire demand. I would appeal to the Chair to be more considerate and give sufficient time to the Members of this House. But to rush through the agenda without giving proper opportunity, is, I only say, regretted

Sri L. SIDDAPPA (Channagiri).—It would facilitate if the Chair after putting the demand sits and gets up again.

Mr. SPEAKER.—I quite understand. In fact that is what I did. I resumed my seat after reading the demand. After a minute and a half I got up and put the demand to vote. However I will be a little more generous and I will bear your suggestion in mind in future.

Demand No. 3—Stamps.

9. STAMPS.

Mr. SPEAKER.—Motion moved:—

"That a sum not exceeding Rs. 83,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Stamps'."

Supply of Water mark Paper.

Janab J. MOHAMED IMAM (Jagalur).—Sir, I move:

"That the demand under the head '9. Stamps' for Rs. 83,000 be reduced by Rs. 100 (to ascertain the procedure adopted by Government to get the supply of water mark paper)."

I want to elicit information regarding the supply of stamp papers and judicial stamp papers. I would like to know what the procedure adopted by the Government is to get the supply of water mark paper—from which country it is got. So far as my information goes this water mark paper is purchased from other countries. It is not manufactured in India. I think that since we are purchasing it from other countries a good deal of our money goes out of the country. So it is desirable that arrangements are made for the manufacture of water mark paper in India alone. To elicit this information I am moving this cut motion.

Mr. SPEAKER.—Cut motion moved:

"That the demand be reduced by Rs. 100."

Sri Kadidal MANJAPPA (Minister for Revenue and Public Works).—Sir, the water mark paper required for the use of the Mysore State is being purchased from John Dickinson & Co., Ltd., London. If there is delay in getting the paper from that firm, we get it from Bhadravati. Of course there is some truth in what Janab Mohamed Imam said that we should not waste our money by purchasing it from outside countries. Government will consider the feasibility of manufacturing this paper in Bhadravati itself.

Janab J. MOHAMED IMAM.—I seek leave of the House to withdraw the cut motion.

The cut motion was, by leave, withdrawn.

Mr. SPEAKER.—The question is:

"That a sum not exceeding Rs. 83,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Stamps'."

The motion was adopted.

Demand No. 4—Forest.

10. FOREST.

Mr. SPEAKER.—Motion moved—

"That a sum not exceeding Rs. 25,12,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Forest'."

Formation of National Park at Bandipura Forests in Gundlupet Taluk.

Sri H. K. SIVARUDRAPPA (Gundlupet—Heggaddevankote).—I move:

"That the demand under the head "10. Forest" for Rs. 25,12,000 be reduced by Rs. 100 (to bring to the notice of the Government the difficulties regarding the policy of the Government in forming the National Park at Bandipura Forests in Gundlupet Taluk)."

2-30 P.M.

ಸ್ವಾಮಿ, ಈ ಬಂಡೀಪುರ ಎಂಬುದು ನಮ್ಮ ಸಂಸ್ಥಾನದಲ್ಲಿ ಎಲ್ಲರಿಗೂ ಗೊತ್ತಿರುವ ಪ್ರದೇಶ. ಬಂಡೀಪುರ ಫಾರೆಸ್ಟ್ ಸುತ್ತ ಮುತ್ತಲೂ ಅನೇಕ ಗ್ರಾಮಗಳು ಇವೆ. ಅದು ಒಂದು ಕಾಡುಪ್ರದೇಶವಾದ್ದರಿಂದ ಆ ಗ್ರಾಮಗಳಲ್ಲಿ ಹೆಚ್ಚು ದನಗಳನ್ನು ಸಾಕಲು ಅನುಕೂಲವೂ ಸೌಲಭ್ಯವೂ ಇರುವುದರಿಂದ ಹೆಚ್ಚು ದನಗಳನ್ನು ಸಾಕಿದ್ದಾರೆ. ಈರೀತಿ ದನಗಳಿರತಕ್ಕ ಪ್ರದೇಶ

(SRI H. K. SIVARUDRAPPA.)

ದಲ್ಲಿ ಅವುಗಳ ಸೌಕರ್ಯಕ್ಕೆ ಹಿಂದೆ ಬಂಡೀಪುರ ಕಣಿಯನಪುರ, ಸೋಮನಾಥಪುರ, ಮಾಯೂರು ಹೆಗ್ಗ ವಾಡಿ, ಲೋಕ್ಕೆರೆ ಫಾರೆಸ್ಟ್ಗಳಲ್ಲಿ ಒಂದು ಕನಿಷ್ಠಾಂಶ ದುಡ್ಡು ತೆಗೆದುಕೊಂಡು ಮೇಯಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಈಚೆಗೆ ನಮ್ಮ ಕಾಂಗ್ರೆಸ್ ಸರ್ಕಾರ ದವರು ಬಂದಮೇಲೆ ಈ ಹುಲ್ಲು ಬನ್ನಿಯನ್ನು ವಜಾ ಮಾಡಿ, ಎಲ್ಲರೂ ಮುಫತ್ತಾಗಿ ಇಂಥ ಜಂಗಲುಗಳಲ್ಲಿ ತಮ್ಮ ತಮ್ಮ ದನಗಳನ್ನು ಮೇಯಿಸುವುದಕ್ಕೆ ಅವಕಾಶ ಮಾಡಿಕೊಟ್ಟರು. ಹೀಗಿರುವಲ್ಲಿ ಈಚೆಗೊಂದು ಹೊಸ ಆರ್ಡರು ಸರ್ಕಾರದಿಂದ ಹೊರಟು ಈ ಜನರಿಗೆಲ್ಲಾ ಭಯವಾಗಿ ಈ ಖೋತಾ ನಿರ್ಣಯವನ್ನು ಈ ಸಂದರ್ಭ ದಲ್ಲಿ ತರಲು ಅವಕಾಶವಾಯಿತು. ಆ ಆಜ್ಞೆ ಹೀಗಿದೆ :

"Un-official No. 49—51-52 dated 10th March 1952, from the Chief Conservator of Forests to the Secretary to Government, Local Self-Government Department, Bangalore.
Retransmitted.

A compact block of 145 sq. miles comprising group of forests upto Somnathpur of Mysore District and including a portion of the existing Venugopal wild life park can be formed into a 'National Park'. Definite proposals in this behalf will be submitted to Government separately in due course."

Copy of the above is forwarded to the District Forest Officer, Mysore, in continuation of this office D.O. letter No. 78.

In the meanwhile, no cutting of any sort or grazing should be allowed within the State forests proposed to be converted into 'National Park'."

ಇದರ ಪ್ರಕಾರ ಆ ಆರ್ಡರಿನಲ್ಲಿ ನಮೂದಿಸಿರತಕ್ಕ ಸ್ಟೆ 5-6 ಸ್ಟೇಟ್ ಫಾರೆಸ್ಟ್ಗಳಲ್ಲಿ 145 ಚದರ ಮೈಲಿ ಗಳಿಗೆ ಮೇಲ್ಪಟ್ಟ ಪ್ರದೇಶವನ್ನು national ಪಾರ್ಕಾಗಿ ಮಾಡಿ ಅಲ್ಲಿರತಕ್ಕ ದನಗಳಿಗೆ ಮೇಯುವು ದಕ್ಕೆ ಅವಕಾಶವಿರುವುದನ್ನು ತಪ್ಪಿಸಿರುವುದರಿಂದ ಅಲ್ಲಿನ ಜನಗಳಿಗೆ ಬಹಳ ಯೋಚನೆಗೆ ಕಾರಣವಾಗಿದೆ. ಈ ಆಜ್ಞೆಯನ್ನೇನಾದರೂ ಸರ್ಕಾರದವರು ಜಾರಿಗೆ ತರುವುದಾದರೆ ಅಲ್ಲಿರತಕ್ಕ ದನಗಳಿಗೆ ಮೇಯುವುದಕ್ಕೆ ಜಾಗವಿಲ್ಲದೆಹೋಗಿ, ಅವುಗಳನ್ನು ಇಲ್ಲವೇ ಇತರರಿಗೆ ಮಾರಬೇಕು, ಇಲ್ಲದಿದ್ದರೆ ಸಾಯುವುದಕ್ಕೆ ಬಿಡಬೇಕು ಇಂಥಾ ಸ್ಥಿತಿ ಬಂದೊದಗುತ್ತದೆ. ಈ ವಿಚಾರದಲ್ಲಿ ಫಾರೆಸ್ಟ್ ಕನ್ಸರ್ವೇಟರವರಿಗೆ ಖುದ್ದಾಗಿ ಮನವಿ ಮಾಡಿ ಕೊಂಡಿದ್ದೇವೆ. ಬೇಕಾದರೆ ಈ ಆಜ್ಞೆಯಿಂದ ಆ ಪ್ರದೇಶ ದಲ್ಲಿ ಎಷ್ಟು ಗ್ರಾಮಗಳಿಗೆ ತೊಂದರೆಯಾಗಿರುತ್ತದೆಂಬು ದನ್ನು ನಾನು ಹೇಳಬಲ್ಲೆ. ಮಂಗಲ, ಕರಿಯನಪುರ, ಜಕ್ಕಹಳ್ಳಿ, ಯಲಚೆಟ್ಟಿ, ಹೆಗ್ಗವಾಡಿ ಕೆಂಡಕೆರೆ, ಒಡ್ಡಗೆರೆ ಯೆರಿಯೂರು, ಹಂಗಳ, ಬಾಚಹಳ್ಳಿ, ಬೆಳವಾಡಿ, ಶೆಟ್ಟಿ ಹಳ್ಳಿ, ಹಂಡಿಪುರ, ಚೌಡಹಳ್ಳಿ ಕಬ್ಬೆಪುರ,-ಮುಂತಾಗಿ ಸುಮಾರು 30 ಗ್ರಾಮಗಳ ದನಗಳಿಗೆ ಇದರಿಂದ ಅನಾನುಕೂಲವಾಗುತ್ತದೆ. ಈಗಾಗಲೇ ಬಂಡೀಪುರ ಸ್ಟೇಟ್ ಫಾರೆಸ್ಟ್‌ನ್ನು ರಿಸರ್ವ್ ಪ್ರದೇಶವಾಗಿ ಮಾಡಿ ಆ ಪ್ರದೇಶಗಳಲ್ಲಿ ದನ ಮೇಯುವುದಕ್ಕೆ ಅವಕಾಶವಿಲ್ಲ ವಾಗಿದೆ. ಈಗ ಮಿಕ್ಕ ಪ್ರದೇಶಗಳನ್ನು ಈ ರೀತಿಯ ನಿರ್ಬಂಧಕ್ಕೊಳಪಡಿಸಿದರೆ ರೈತರಿಗೆ ತುಂಬ ತೊಂದರೆ ಯಾಗುತ್ತದೆ. ಆದ್ದರಿಂದ ಖಂಡಿತವಾಗಿಯೂ ಸರ್ಕಾರ ದವರು ಈ ಆಜ್ಞೆಯನ್ನು ಕಾರ್ಯಗತ ಮಾಡುವುದಕ್ಕೆ ಅವಕಾಶ ಕೊಡಕೂಡದೆಂದು ಹೇಳುತ್ತೇನೆ. ಇದೇ ವಿಚಾರದಲ್ಲಿ ಅಲ್ಲಿನ ಜನರೆಲ್ಲರೂ ಸೇರಿ ಮುಖ್ಯ ಮಂತ್ರಿ ಗಳಿಗೆ ಒಂದು ಟೆಲಿಗ್ರಾಂ ಸಹ ಕೊಟ್ಟಿದ್ದಾರೆ. ಅಲ್ಲದೆ ನಾನೂ ಸಹ ಖುದ್ದಾಗಿ ಬಂದು ತಮ್ಮಲ್ಲಿ ಅರಿಕೆ ಮಾಡಿ ಕೊಂಡಿದ್ದೇನೆ. ಆ ವಿಷಯದಲ್ಲಿ ನನಗೆ ಭರವಸೆಯನ್ನು ಸಹ ಕೊಟ್ಟಿದ್ದಾರೆ. ಈಗಲೂ ಅದೇ ರೀತಿ ಈ ನ್ಯಾಷ ನಲ್ ಪಾರ್ಕನ್ನು ಏರ್ಪಾಡುಮಾಡುವುದಿಲ್ಲವೆಂದು ಒಂದು ಭರವಸೆಯನ್ನು ತಮ್ಮಿಂದ ತೆಗೆದುಕೊಳ್ಳಬೇ ಕೆಂಬ ಆಕಾಂಕ್ಷೆಯಿಂದ ನಾನು ಈ ಖೋತಾ ನಿರ್ಣಯ ವನ್ನು ತಂದಿದ್ದೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜ ನಗರ).—ಅಧ್ಯಕ್ಷರೇ. ಶ್ರೀಮಾನ್ ಶಿವರುದ್ರಪ್ಪನವರು ತಂದಿರತಕ್ಕ ಈ ಖೋತಾ ನಿರ್ಣಯವನ್ನು ಸಮರ್ಥಿ ಸುತ್ತೇನೆ. ದೇಶದ ಸಂಪತ್ತಿನಲ್ಲಿ ಗೋಸಂಪತ್ತೂ ಒಂದು. ಪಾಶ್ಚಾತ್ಯ ದೇಶದ ಗೋಸಂಪತ್ತಿನ ಪರಿಸ್ಥಿತಿಯೇನು ? ನಮ್ಮ ಇಂಡಿಯಾದೇಶದ ಗೋಸಂಪತ್ತಿನ ಪರಿಸ್ಥಿತಿ ಯೇನು ? ನಮ್ಮ ದೇಶದ ಒಂದು ಗೋವು ದಿನಕ್ಕೆ ಸುಮಾರು ಒಂದು ಪೌಂಡ್ ಹಾಲು ಕೊಡುತ್ತದೆ ; ಅದೇ ಬ್ರಿಟನ್ನಿನ ಗೋವು 5 ಪೌಂಡ್ ಕೊಡುತ್ತದೆ—ಹೀಗೆಂದು ಅನೇಕ ತಜ್ಞರು ಹೇಳಿರುವ ವಿಷಯವನ್ನು ಈಗ ತಮ್ಮ ಮುಂದಿಡಬಯಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ಹುಲ್ಲುಗಾವಲುಗಳಿಲ್ಲ, ಮತ್ತು ಗೋಮಾಳಗಳೆಲ್ಲಾ ದರಖಾಸ್ತಿನ ಮೇಲೆ ವಿಲೇಯಾಗಿಹೋಗಿವೆ. ಪರಿಸ್ಥಿತಿ ಹೀಗಿರುವಲ್ಲಿ ದನಕರುಗಳಿಗೆ ಹುಲ್ಲಿಲ್ಲದೆ ಹೋದರೆ ಅವು ಹಾಲು ಕೊಡುವುದು ತಾನೆ ಹೇಗೆ? ನಮಗೆ ಬೇಕಾದ ಮುಖ್ಯ ಆಹಾರಾಂಶಗಳು ಎಲ್ಲಾ ಗೋವಿನ ಹಾಲಿನಲ್ಲೇ ಸಿಕ್ಕುವಂಥವು. ನಮ್ಮ ದೇಶ ಕ್ಷೀಣಸ್ಥಿತಿಗೆ ಬರುವುದಕ್ಕೆ ಮುಖ್ಯವಾದ ಕಾರಣವೇನೆಂದರೆ, ನಮ್ಮ ಜನಗಳು ಉಪಯೋಗಿಸತಕ್ಕ ಹಾಲಿನ ಪ್ರಮಾಣ ಬಹಳ ಕಡಮೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು, ಈ ಸಂದರ್ಭದಲ್ಲಿ ಬಂಡೀಪುರದಲ್ಲಿ ಮತ್ತು ಅದರ ಅಕ್ಕಪಕ್ಕದ ಕಾಡುಗಳಲ್ಲಿ ಈಗ ದನಗಳನ್ನು ಮೇಯಿಸುವುದಕ್ಕೆ ತೊಂದರೆಯಾಗಿರುವುದನ್ನು ತಪ್ಪಿಸಿ ಆ ರೈತರ ಕುಂದು ಕೊರತೆಗಳನ್ನು ನಿವಾರಿಸಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

*ಶ್ರೀ ಎಂ. ಶಂಕರ ಲಿಂಗೇಗೌಡರು (ನಾಗಮಂಗಲ) ಅಧ್ಯಕ್ಷರೇ, ನ್ಯಾಷನಲ್ ಪಾರ್ಕ್ ಮಾಡತಕ್ಕ ಉದ್ದೇಶವೇನೆಂಬುದೇ ನನಗೆ ಗೊತ್ತಾಗುವುದಿಲ್ಲ. ಇದೊಂದು ತಮಾಷೆಮಾಡತಕ್ಕ ನ್ಯಾಷನಲ್ ಪಾರ್ಕಂತೆ. ನಮ್ಮಲ್ಲಿ ಬೇಕಾದಷ್ಟು ಹಣ ಓಡಾಡುತ್ತಿರುವಾಗ ನ್ಯಾಷ ನಲ್ ಪಾರ್ಕ್ ಮಾಡುವುದೇನೂ ಅಡ್ಡಿಯಿಲ್ಲ; ಅದನ್ನೂ ಒಂದು asset ಅಂತಲೇ ತಿಳಿದುಕೊಳ್ಳಬಹುದು. ಆದರೆ

ಈಗ ನ್ಯಾಷನಲ್ ಪಾರ್ಕ್ ಮಾಡುವುದರಲ್ಲಿ ಅನೇಕ ಗ್ರಾಮಗಳಲ್ಲಿನ ಗೋಮಾಳವನ್ನು ತೆಗೆದುಕೊಂಡು ನಕಾಷೆಯಲ್ಲಿ ಅಷ್ಟು ಜಾಗವನ್ನು ವಜಾ ಮಾಡಿ ಇಷ್ಟು ಜನರಿಗೆ ತೊಂದರೆಯಾಗುವುದರಿಂದ ಈ ನ್ಯಾಷನಲ್ ಪಾರ್ಕ್ ಉದ್ಯಮವನ್ನು ಸದ್ಯಕ್ಕೆ ಕೈಕೊಳ್ಳುವುದನ್ನು ನಿಲ್ಲಿಸಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—ಅಧ್ಯಕ್ಷರೇ, ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ನಾಲ್ಕಾರು ಮಾತುಗಳನ್ನು ಹೇಳಬೇಕೆಂದು ಆಶಿಸುತ್ತೇನೆ. ಬಂಡಿಪುರ ಫಾರೆಸ್ಟನ್ನು ಸುಮಾರು ಈ ಸಭೆಯವರೆಲ್ಲರೂ, ಮಾನ್ಯ ಮಂತ್ರಿಗಳೂ ನೋಡಿರಬಹುದು. ಅದು ನಿಜವಾಗಿಯೂ ಬಹಳ ಆರೋಗ್ಯವಾದ ಸ್ಥಳ. ರಾಜಪ್ರಮುಖರು ಆಗಾಗ್ಗೆ ಅಲ್ಲಿಗೆ ಹೋಗಿ ಕೆಲವು ವೇಳೆ ಕಾಲಕಳೆಯುತ್ತಾರೆ. ಅಷ್ಟೇಅಲ್ಲದೆ ನಮ್ಮ ಮೈಸೂರು ಸಂಸ್ಥಾನದ ಸರ್ಕಾರದ policy, programme ಇವುಗಳು ಏನಿವೆಯೋ ಅವುಗಳೂ ಕೂಡ ಇಲ್ಲೇ ನಿರ್ಧರವಾಗಿವೆಯೆಂದು ನನಗೆ ಜ್ಞಾಪಕವಿದೆ.

ಈಗ ಸರ್ಕಾರದವರು ಅಥವಾ ಫಾರೆಸ್ಟ್ ಇಲಾಖೆಯವರು ಅಲ್ಲಿ 145 ಚ. ಮೈ. ಗಳಷ್ಟು ಭಾಗವನ್ನು ಅಕ್ವೈರ್ ಮಾಡಿಕೊಂಡು ನ್ಯಾಷನಲ್ ಪಾರ್ಕ್ ಮಾಡಬೇಕೆಂದಿದ್ದರೆ ಅದು ನಿಜವಾಗಿಯೂ ಯೋಚನೆ ಮಾಡಬೇಕಾದ ವಿಷಯ. ಹಾಗೂ, ಪ್ರಜೆಗಳ ಹಿತ ರಕ್ಷಣೆಗಾಗಿ ಪಣ ತೊಟ್ಟು, ಪ್ರಜೆಗಳ ಬೆಂಬಲದ ಮೇಲೆ ಮಹಾಚುನಾವಣೆಯಲ್ಲಿ ಜಯಗಳಿಸಿ ಅವರುಗಳ will ಅಥವಾ ಅಭಿಪ್ರಾಯದ ಮೇಲೆಯೇ ನಿಂತಿರುವ ಈ ಪ್ರಜಾಸರ್ಕಾರ ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕಾದದ್ದೇ ಸರಿ. 145 ಚ. ಮೈಲಿಗಳಷ್ಟು ಜಮೀನನ್ನು ತೆಗೆದುಕೊಳ್ಳುವುದರ ಅವಶ್ಯಕತೆಯಿದೆಯೇ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಏಕೆಂದರೆ ಇದರಿಂದ 30—40 ಗ್ರಾಮಗಳವರಿಗೆ ತೊಂದರೆಯಾಗುತ್ತದೆಯೆಂದು ಮಾನ್ಯ ಶಿವರುದ್ರಪ್ಪನವರು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇಷ್ಟೊಂದು ಪ್ರದೇಶದ ಅವಶ್ಯಕತೆಯಿಲ್ಲ. ಇಂಥ ಒಂದು ಪಾರ್ಕಿಗೆ ಒಂದು ಚದರ ಮೈಲಿ, ಅಥವಾ ಎರಡು ಚದರಮೈಲಿಯಷ್ಟು ಮಾತ್ರ ಅಕ್ವೈರ್ ಮಾಡಿಕೊಂಡು ಬಾಕಿಯುದನ್ನು ದನಗಳಿಗೆ ಮೇಯುವುದಕ್ಕೆ ಬಿಡುವುದು ಸೂಕ್ತವೆಂದು ಕಾಣುತ್ತದೆ. ಇಲ್ಲದಿದ್ದರೆ 40-50 ಗ್ರಾಮಗಳವರಿಗೆ ಸೌದೆ ಮುಂತಾದುವುಗಳಿಗೂ ಗೋವುಗಳನ್ನು ಕಾಪಾಡುವುದಕ್ಕೂ ಕಷ್ಟವಾಗುತ್ತದೆ. ಈಗಾಗಲೇ ಗುಂಡ್ಲುಪೇಟೆ ತಾಲ್ಲೂಕಿನ ಗೋ ಸಂಪತ್ತು ಕಡಮೆಯಾಗುತ್ತಿದೆ. ಏಕೆಂದರೆ ಮಳೆಯಿಲ್ಲ ಬೆಳೆಯಿಲ್ಲ ಹುಲ್ಲಿನ ಅಭಾವ ಜಾಸ್ತಿಯಾಗಿದೆ. ಈ ದೃಷ್ಟಿಯಿಂದ 145 ಚ. ಮೈಲಿಯಷ್ಟನ್ನೂ ತೆಗೆದುಕೊಳ್ಳಬೇಕೆಂಬುದನ್ನು ತಪ್ಪಿಸಿ ರೈತರನ್ನು ಕಾಪಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಬದಲು ಅವಶ್ಯಕವಿದ್ದರೆ 1-2 ಚದರ ಮೈಲಿಗಳಷ್ಟನ್ನು ತೆಗೆದುಕೊಳ್ಳಬಹುದು. ಈ ದೃಷ್ಟಿಯಿಂದ ಈ ಖೋತಾ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಗಮನ ಕೊಟ್ಟು ಈ ನಿರ್ಣಯದ ಉದ್ದೇಶವನ್ನು ಸಾರ್ಥಕಪಡಿಸುತ್ತಾರೆಂದು ನಂಬಿದ್ದೇನೆ.

Sri T. CHANNIAH (Minister for Local Self-Government and Public Health).—Sir, in regard to the cut motion moved by my Hon'ble friend there are two or three aspects to be considered. The first one is, for the protection of animal kingdom a Central Board of Wild Life has been constituted by the Government of India and the policy of establishing a National Park has been enunciated by a resolution by the Government of India and this problem of protection and conservation and control of wild life and fauna has been engaging the attention of the Government of India for some time. India had a heritage of wild life which is fast becoming a vanishing asset and some of our notable animals such as lions, rhinoceros, tigers and cheetahs are on the verge of extinction.

Sri M. SHANKAR LINGE GOWDA.—Are there lions in Mysore?

Sri T. CHANNIAH.—This is a resolution which has been enunciated by the Government with a view to preserve and give protection to these wild animals from extinction. It is under the contemplation of the Government of India to form a National Park in Bandipura area of Gundlupet Taluk and the area so selected does not inconvenience raiyats. Details of this project are not yet finalised and before doing so all factors will be considered and public opinion will be elicited in the matter. Hon'ble Members need not be so anxious about this and I hope the cut motion will be kindly withdrawn.

Sri M. SHANKAR LINGE GOWDA.—If the Government knows the difficulty of raiyats, then it is all right.

Sri H. K. SIVARUDRAPPA.—I do not press the motion Sir. I seek the leave of the House to withdraw it.

The cut motion was, by leave, withdrawn.

Leakage of revenue from State Forests.

Sri B. HUTCHE GOWDA (Turuvekere).—Sir, I move.—

"That the demand under the head "10. Forest" for Rs. 25,12,000 be reduced by Rs. 100 (to raise a debate on the leakage of revenue from State Forests)."

ಸ್ವಾಮಿ, ನಮ್ಮ ದೇಶದಲ್ಲಿ ಮಾಮೂಲಾಗಿ ಅರಣ್ಯ ಶಾಖೆಯಿಂದ ಬರುವ ಉತ್ಪತ್ತಿ ಸಂಸ್ಥಾನದ ವರಮಾನ ಬಾಬುಗಳಲ್ಲಿ ಮೂರನೆಯದು. ಆದರೆ ಅದು ಈಚೆಗೆ ಸಿಬ್ಬಂದಿಯನ್ನು ಹೆಚ್ಚುಮಾಡಿದಾಗ್ಯೂ ಕೂಡ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಉತ್ಪತ್ತಿ ಕಡಮೆಯಾಗುತ್ತಿದೆ. ಸ್ವಾಭಾವಿಕವಾಗಿ ಹೆಚ್ಚು ಕಡಮೆಯಾಗುವ ಗಂಧದ ಮರದ ವಿಷಯ ಹಾಗಿರಲಿ. ಮುಖ್ಯವಾಗಿ ಅರಣ್ಯ ಸಂಪತ್ತೆಂದರೆ, ಮರಗಿಡಗಳು. ಇವನ್ನು ಸರಿಯಾದ ಮಾರ್ಗದಲ್ಲಿ ಕಾಪಾಡಿ, ಇವಕ್ಕೆ ಸರಿಯಾದ ಬೆಲೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುವುದಕ್ಕೆ ಬದಲು, ಇದರಿಂದ ಹೆಚ್ಚು ನಷ್ಟಉಂಟಾಗುತ್ತಿದೆ. ಒಂದು ಉದಾಹರಣೆ ಹೇಳುವುದಾದರೆ, ಈ ಇಲಾಖೆಯಲ್ಲಿ ಇಷ್ಟೊಂದು ಸಿಬ್ಬಂದಿ ಇದ್ದರೂ ಕೂಡ ಖಾಸಗೀ ಜನರಿಗೆ ಈ ಉತ್ಪತ್ತಿ ಮಾಡತಕ್ಕ ಬಾಬನ್ನು 'ಲೀಸ್' ಮುಖಾಂತರ ಕೊಡುತ್ತಿರುವುದರಿಂದ ನಮ್ಮ ಸರ್ಕಾರಕ್ಕೆ ಬರುವ ವರಮಾನಕ್ಕೆ ಬಹಳ ಧಕ್ಕೆ ಬರುತ್ತಿದೆ. ಸಾವಿರಾರು ಎಕರೆಗಳನ್ನು ಎಕರೆಗೆ ಕೇವಲ ಒಂದಾಣೆ ಎರಡಾಣೆಯಂತೆ 'ಲೀಸ್''ಗೆ ಕೊಡುತ್ತಾ ಬಂದಿದ್ದಾರೆ. ಅಡಿಯೊಂದಕ್ಕೆ 15-20 ರೂಪಾಯಿ ಬರತಕ್ಕ ಮರಗಳಿಗೆ ಕೇವಲ ಕೆಲವು ಆಣೆಗಳನ್ನು ತೆಗೆದುಕೊಂಡು 'ಲೀಸ್' ಕೊಡುತ್ತಾ ಬಂದಿದ್ದಾರೆ. ಇದರಿಂದ ಇಲಾಖೆಗೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಇಷ್ಟೇ ಅಲ್ಲದೆ ಈ ಇಲಾಖೆಯಲ್ಲಿ ದೊಡ್ಡ ದೊಡ್ಡ ಸ್ಥಾನಗಳಲ್ಲಿದ್ದವರು ರಿಟೈರ' ಆದಮೇಲೆ ಒಂದು ಕಂಪೆನಿ ಮಾಡಿಕೊಂಡು 'ಲೀಸ್' ತೆಗೆದುಕೊಂಡು ಅವರೇ ನೇರವಾಗಿ ನಿಂತೋ, ಅವರ ಕೈಕೆಳಗೆ ಹಿಂದೆ ಈ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದವರ ಸಹಾಯದಿಂದಲೋ ನಿಯಮ ನಿಬಂಧನೆಗಳನ್ನು ತಮ್ಮ ಅನುಕೂಲಕ್ಕನುಸಾರವಾಗಿ ತಿರುಗಿಸಿಕೊಂಡು ತಾವು ಇಲಾಖೆಯಲ್ಲಿದ್ದು ಅಧಿಕಾರ ನಡೆಸಿದ ಕಾಲದಲ್ಲಿ ತಮ್ಮ ಕೈಕೆಳಗಿದ್ದ ಜನರ ಮೇಲೆ ತಾವು ಅಧಿಕಾರ ನಡೆಸಿದ ಜನರ ಮೇಲೆ ಪ್ರಭಾವವನ್ನು ಬೀರುವುದಕ್ಕೂ ಅವಕಾಶವಾಗಿದೆ. ಮೈಸೂರಿನವರಲ್ಲದೇಯಿರುವವರಿಗೂ ವಿಶೇಷವಾಗಿ ಈ ರಿಯಾಯಿತಿಗಳನ್ನು ಕೊಡುವುದು ನಮ್ಮ ಗಮನಕ್ಕೆ ಬಂದಿದೆ. ಕೆಲವು ಜನರು ಸೇರಿಕೊಂಡು, ಮುಖ್ಯವಾಗಿಸರ್ಕಾರಕ್ಕೆ ದ್ರೋಹ ಮಾಡುವುದೊಂದೇ ಉದ್ದೇಶವನ್ನಿಟ್ಟುಕೊಂಡು, ಮೊದಲಿನಿಂದ ಒಂದು ಯೋಜನೆಯ ಮೇಲೆ ಕೆಲಸಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ಖಾಸಗೀ ಜನರಿಗೆ ಲೀಸ್ ಕೊಡುವುದಕ್ಕೆ ಕಾರಣವೇ ಇಲ್ಲ. ಇಲಾಖೆಯಲ್ಲಿ ಸಿಬ್ಬಂದಿ ವಿಪರೀತ ಜಾಸ್ತಿಯಾಗಿದೆ. ಚೀಫ್ ಕನ್ಸರ್‌ವೇಟರು, ಕನ್ಸರ್‌ವೇಟರುಗಳು ಇವರೇ ಮುಂತಾದ ಇನ್ನೂ ಅನೇಕ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚು ಮಾಡಿದ್ದಾರೆ. ಹೀಗಿದ್ದರೂ, ಅನೇಕ ರಿಯಾಯಿತಿಗಳನ್ನು ತೋರಿಸಿ ಬೇರೆಯವರಿಗೆ ಕೊಡುವುದು ಸರಿಯಲ್ಲ. ಅನೇಕ ಕಡೆ, ಅದರಲ್ಲಿಯೂ ಮೈದಾನ ಪ್ರದೇಶಗಳ ಕಡೆ ಲಂಚ ರುಷುವತ್ತಿನಿಂದ ಅನೇಕ ಮರಗಳು ಪೋಲಾಗುತ್ತಿವೆ. ಹೀಗೆ ಪೋಲಾಗುತ್ತಿರುವುದು ಇಲಾಖೆಯವರ ಅವಗಾಹನೆಗೆ ಬಂದರೂ ತಮ್ಮ ಕೈಕೆಳಗಿನ ಅಧಿಕಾರಿಗಳನ್ನು ಬಿಟ್ಟುಕೊಡುವುದಕ್ಕೆ ಇಷ್ಟವಿಲ್ಲದೆ ಅದು ಮುಚ್ಚಿಹೋಗುತ್ತಿದೆ. ಅನೇಕರು ಈ ವಿಷಯದಲ್ಲಿ ಸರ್ಕಾರಕ್ಕೆ ಅರ್ಜಿ ವಗೈರೆ ಕೊಟ್ಟರೂ ಪರಿಣಾಮ ಸರ್ಕಾರಕ್ಕೆ ಆದಾಯ ತರುವ ರೀತಿಯಲ್ಲಿ ಆಗುವುದಿಲ್ಲ. ಇಲಾಖೆಯಲ್ಲಿ ಈಚೆಗೆ ದಕ್ಷತೆಯೂ ಸಹ ಬಹಳ ಕಡಮೆಯಾಗಿದೆ. ತಕ್ಷಣ ಇದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು ಸರಿಪಡಿಸುವುದು ಅವಶ್ಯಕ. ದಕ್ಷತೆ ಕಡಮೆಯಾಗಿರುವುದಕ್ಕೆ ಸಿಬ್ಬಂದಿಯನ್ನು ಹೆಚ್ಚು ಮಾಡುವುದೇ ಕಾರಣವೆಂದು ತೋರುತ್ತದೆ.

ಇನ್ನೊಂದು ವಿಷಯ, ಮೈದಾನದ ಕಡೆ ಏನೂ ಉತ್ಪತ್ತಿ ಇಲ್ಲದಿದ್ದರೂ ಕೂಡ ವಿಶೇಷವಾಗಿ ಸಿಬ್ಬಂದಿಯನ್ನಿಟ್ಟಿದ್ದಾರೆ. ಮರಗಿಡಗಳು ಸ್ವಲ್ಪ ಇದ್ದರೂ ಆ ಪ್ರದೇಶವನ್ನು ಸ್ಟೇಟ್ ಫಾರೆಸ್ಟ್ ಎಂದು ಮಾಡಿದ್ದಾರೆ. ಇದರಿಂದ ಏನೂ ಉತ್ಪತ್ತಿ ಬರುವುದಿಲ್ಲ. Afforestation ಎಂದು ಸುಮ್ಮನೆ ಲಕ್ಷಾಂತರ ಮರಗಳನ್ನು ಹಾಕುವುದು ಕಾಣುತ್ತದೆಯೇ ಹೊರತು, ಇದು ಕಾರ್ಯಗತವಾಗಿ ಮುಂದೆ ಸರ್ಕಾರಕ್ಕೆ ಆದಾಯ ಬರುವ ರೀತಿ ಕಾಣುತ್ತಿಲ್ಲ. ಇದೆಲ್ಲವನ್ನೂ ನೋಡಿದರೆ ಈ ಇಲಾಖೆಯಲ್ಲಿ ಆಡಳಿತ ದಕ್ಷತೆ ಕಡಮೆಯಾಗಿ ಸರ್ಕಾರಕ್ಕೆ ಬರಬೇಕಾದ ವರಮಾನ ಬಹಳ ಕಡಮೆಯಾಗುತ್ತಿದೆ. ತಕ್ಷಣ ಇದನ್ನು ನಿಲ್ಲಿಸದೇಯಿದ್ದರೆ ಮುಂದೆ ಆದಾಯ ಬಹಳ ಕಡಮೆಯಾಗಬಹುದೆಂದು ನನ್ನ ಅಭಿಪ್ರಾಯ. ಇಷ್ಟು ಹೇಳಿ ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

Sri T. CHANNIAH (Minister for Public Health and Local Self-Government).—Sir, with regard to the cut motion moved by my Hon'ble friend Sri Hutche Gowda, I have got very little to say. It is not very clear as to how there is leakage of revenue from sales by the Department; it is so vague and I do not know the source of leakage and all that. But so far as we know, all the revenues from several kinds of sales by departmental agencies and leases are collected according to schedules and we have got figures to prove and show that there is a continuous increase of revenue. For example, for the year 1946-47 the revenue from the forest area was Rs. 95,27,232.

Sri B. HUTCHE GOWDA.—Are Government leasing out forest areas for any nominal sum?

Sri T. CHANNIAH.—Yes, we are leasing out forest areas because it is a source of revenue to the Government.

Sri B. HUTCHE GOWDA.—At 2 annas per cubic foot?

Mr. SPEAKER.—The Minister will meet that point also.

Sri T. CHANNIAH.—For the year 1947-48 the revenue to the Forest Department was about Rs. 61,53,277; for the year 1948-49 it was Rs. 71,56,476; for the year 1949-50 Rs. 74,37,142, that is for nine months only; for the year 1950-51 it was Rs. 1,28,98,799. So we have been seeing a gradual increase of revenue from the Forest Department. There is no decrease of revenue in the Forest Department as pointed out by Hon'ble Member and what he has stated, that there is leakage of revenue in the Forest Department, is, as could be seen from the figures, not correct. According to the figures on record, there is no leakage of the forest revenue; on the other hand from year to year there is an increase of forest revenue and if there are to be any leakages we, from the Government side, are taking all precautionary measures to stop all such leakages. I hope my Hon'ble friend is convinced that the Government on their part will take all necessary measures to stop any leakages from the forests when leasing them out to local people. I hope with this assurance he will withdraw his cut motion.

Sri B. HUTCHE GOWDA.—I do not press the cut motion and request leave to withdraw it.

The cut motion was, by leave, withdrawn.

Improving the Maralavadi–Hunasanahalli Forest Road.

ಶ್ರೀ ಎಸ್. ಕರಿಯಪ್ಪನವರು (ವಿರೂಪಾಕ್ಷಪುರ).—ಸ್ವಾಮಿ, ನನ್ನ ಖೋತಾ ನಿರ್ಣಯವು ಈ ರೀತಿಯಾಗಿದೆ. ಅದನ್ನು ಮಂಡಿಸುತ್ತೇನೆ.

"That the demand under the head '10. Forest (b) Conservancy and works, (iv) Communications-Buildings and Water Supply Roads and Bridges' for Rs. 50,000 be reduced by Rs. 100 (to bring home to the Government the urgent necessity of improving the Maralvadi-Hunasanahalli Forest Road)."

ಸ್ವಾಮಿ, ಈ ನಿರ್ಣಯವು ಕನಕಪುರ ತಾಲ್ಲೂಕಿನಲ್ಲಿರತಕ್ಕ ರಸ್ತೆಗೆ ಸಂಬಂಧಪಟ್ಟಿದ್ದು. ಆ ತಾಲ್ಲೂಕಿನ ರಸ್ತೆಗಳ ಪೈಕಿ ಇದು ಬಹಳ ಮುಖ್ಯವಾದ ರಸ್ತೆಯೆಂದು ಹೇಳಬೇಕಾಗಿದೆ. ಈ ರಸ್ತೆ ಸೇಲಂ ಜಿಲ್ಲೆಗೆ ಸಂಬಂಧವನ್ನು ಕಲ್ಪಿಸುತ್ತದೆ. ಈ ರಸ್ತೆಯನ್ನು ಬಿಟ್ಟರೆ ಸೇಲಂ ಜಿಲ್ಲೆಗೆ ಸಂಬಂಧ ಕಲ್ಪಿಸುವಂಥ ರಸ್ತೆ ಮತ್ತೊಂದಿಲ್ಲ. ಸೇಲಂನಿಂದ ಬರತಕ್ಕವರು ಡಂಕಣಿಕೋಟೆ, ಜವಳಿಗೆರೆ ಈ ಸ್ಥಳಗಳನ್ನೆಲ್ಲಾ ಸುತ್ತಿಕೊಂಡು ಬೆಂಗಳೂರಿಗೆ ಬಂದು ಅನಂತರ ಕಾರ್ಕಾನಹಳ್ಳಿಗೆ ಬರಬೇಕಾಗಿದೆ. ಈಗ ಇಂಥ ಸ್ಥಿತಿಯಿದೆ. ಈ ಒಂದು ರಸ್ತೆಯನ್ನು ಮಾಡತಕ್ಕ ಸಂಬಂಧದಲ್ಲಿ ನಮ್ಮ ಬೆಂಗಳೂರು ಜಿಲ್ಲಾ ಬೋರ್ಡಿನವರಿಗೂ ಮತ್ತು ಸೇಲಂ ಜಿಲ್ಲಾ ಬೋರ್ಡಿನವರಿಗೂ ಪತ್ರ ವ್ಯವಹಾರಗಳು ನಡೆದು, ಇದುವರೆಗೂ ಅವರು ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ. ನಮ್ಮ ಅರಣ್ಯ ಇಲಾಖೆಯವರು ಇಲ್ಲಿಗೆ 19 ವರ್ಷಗಳ ಕೆಳಗೆಯೆ ಈ ಕಾರ್ಯವನ್ನು ಕೈಕೊಂಡು ಸುಮಾರು 15 ಮೈಲಿಗಳ ಉದ್ದ ರಸ್ತೆಯನ್ನು ಮಾಡಿರುತ್ತಾರೆ. ಇದನ್ನು ಮಾಡಿ ಅವರು ಜನ ಜಾನುವಾರುಗಳಿಗೆ ಮತ್ತು ಪ್ರಯಾಣಿಕರಿಗೆ ಬಹಳ ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ. ಈ 19 ವರ್ಷಗಳ ಲಾಗಾಯ್ತಿನಿಂದಲೂ ಈ ರಸ್ತೆಯ ಸಾಲಿಯಾನಾ ಕಾಮಗಾರಿಯನ್ನೇನಾದರೂ ಕೈಕೊಂಡಿದ್ದಾರೆಯೇ ಎಂದರೆ ಅದೂ ಇಲ್ಲ. ಆದರೆ ಈ 19 ವರ್ಷಗಳಲ್ಲಿ ಈ ರಸ್ತೆ ರಿಪೇರಿಗಾಗಿ ಆಗಿಂದಾಗ್ಗೆ ಸರ್ಕಾರದವರು ಖರ್ಚುಮಾಡಿರತಕ್ಕ ಮೊಬಲಗು ಎಷ್ಟೆಂದರೆ ಕೇವಲ 700 ರೂಪಾಯಿಗಳು ಮಾತ್ರ. ಹೀಗೆ ಸಾವಿರಾರು ಜನರಿಗೂ, ಜಾನುವಾರುಗಳಿಗೂ, ವಾಹನ ಸೌಕರ್ಯವನ್ನು ಕಲ್ಪಿಸಿಕೊಡುವಂಥ ಈ ರಸ್ತೆಯನ್ನು ಇಷ್ಟೊಂದು ದೀರ್ಘಕಾಲ ಸಾಲಾಬಾದು ಕಾಮಗಾರಿ ನಡೆಸದೆ ಬಿಟ್ಟು ಬಿಟ್ಟರೆ, ಇದಕ್ಕೆ ಸರ್ಕಾರದವರು ಖರ್ಚು ಮಾಡಿರತಕ್ಕ ಹಣವೆಲ್ಲಾ ದುರುಪಯೋಗವಾದಿದಂತಾಗುತ್ತದೆಂಬುದನ್ನು ನಾನು ಪುನಃ ಒತ್ತಿ ಹೇಳಬೇಕಾಗಿಲ್ಲ. ಇದೇ ಸಭೆಯಲ್ಲಿ ಮೊನ್ನೆ ಪ್ರಶ್ನೋತ್ತರಗಳ ಕಾಲದಲ್ಲಿ ಅರ್ಕಾವತಿ ನದಿಗೆ ಒಂದು ಸೇತುವೆಯನ್ನು ಕಟ್ಟಿಸಬೇಕೆಂಬ ಸಂಬಂಧದಲ್ಲಿ ಬಂದಿದ್ದ ಒಂದು ಪ್ರಶ್ನೆಗೆ ಸರ್ಕಾರದವರು ಒದಗಿಸಿದ ಉತ್ತರದಲ್ಲಿ ಅವರ ಅಭಿಪ್ರಾಯ ಹೇಗಿದೆಯೆಂಬುದನ್ನು ಆಲೋಚನೆ ಮಾಡಿ ನೋಡಿದರೆ ಆ ಸೇತುವೆಯನ್ನು ಹಾಕತಕ್ಕ ಸೂಚನೆಗಳು ಕಂಡುಬಂದಿಲ್ಲ. ಹಾಗೆ ಆ ಸೇತುವೆಯು ಆಗದೇ ಇರುವುದರಿಂದ ಆ ಪ್ರದೇಶದಿಂದ ಇದ್ದಿಲು, ಸೌದೆ ಇತ್ಯಾದಿಗಳನ್ನು ಹೇರಿಕೊಂಡು ಬರುವ ಲಾರಿಗಳು ಮತ್ತು ಎತ್ತಿನ ಗಾಡಿಗಳೂ ಬಹು ದೂರ ಸುತ್ತಿಕೊಂಡು ಬರಬೇಕು. ಹಾವು ಸುತ್ತಿಕೊಂಡು ಹೋಗುವಂತೆ ಮೂರು ನಾಲ್ಕು ಕಡೆ ಅರ್ಕಾವತಿ ಸುತ್ತಿಕೊಂಡು ಹೋಗಿದೆ. ಇದರಿಂದ ಸೇತುವೆಯನ್ನು ಕಟ್ಟಬೇಕಾಗುತ್ತದೆ. ಈ ರಸ್ತೆ ಆದರೆ ಹೀಗೆ ಸುತ್ತಿಕೊಂಡು ಬೆಂಗಳೂರಿಗೆ ಬರಬೇಕಾಗುವುದಿಲ್ಲ. ಆದರೆ ಒಂದು ಸೇತುವೆಯನ್ನು ಕಟ್ಟಿಸಿಕೊಟ್ಟಿದ್ದೇ ಆದರೆ ಬೆಂಗಳೂರಿಗೆ ಬಂದು ಸೇರುವಂಥ ಸುಲಭ ಸೌಕರ್ಯವನ್ನು ಕಲ್ಪಿಸಿದಂತೆ ಆಗುತ್ತದೆ. ಇಂಥ ಹಣದ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಅಂಥ ದೊಡ್ಡ ಕೆಲಸವನ್ನೇ ಮಾಡಿಸದೇ ಹೋದರೂ ಕೊಂಚ ಮಟ್ಟಿಗಾದರೂ ಒಂದು ಅನುಕೂಲವನ್ನು ಕಲ್ಪಿಸಿಕೊಡತಕ್ಕದ್ದು ಅಗತ್ಯವೆಂಬುದಾಗಿ ಪದೇ ಪದೇ ಕನಕಪುರದ ಮಹಾಜನರು ಒತ್ತಾಯಪಡಿಸುತ್ತಿದ್ದಾರೆ. ದೇಶದಲ್ಲಿ ಹಣದ ಮುಗ್ಗಟ್ಟಿರುವಾಗ ದೇಶದಲ್ಲಿ ಹೊಸ ರಸ್ತೆಗಳನ್ನು ಮಾಡಿಸಲು ಶಕ್ತಿ ಇಲ್ಲದಿರುವಾಗ ಹೀಗೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿರುವ ರಸ್ತೆಯನ್ನು ಕೆಟ್ಟುಹೋಗುವುದಕ್ಕೆ ಬಿಟ್ಟುಬಿಡುವುದರಿಂದ ಜನರಿಗೂ ತೊಂದರೆ ಮತ್ತು ಸರ್ಕಾರಕ್ಕೂ

(ಶ್ರೀ ಎಸ್. ಕರಿಯಪ್ಪನವರು.)

ನಷ್ಟ. ಆದಪ್ರಯುಕ್ತ ಸರ್ಕಾರದವರು ಈ ಕೆಲಸವನ್ನು ಕೂಡಲೇ ಕೈಕೊಂಡು ಇದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡುವುದಕ್ಕಾಗಿ ನಾನು ಈ ಕತ್ತರಿ ನಿರ್ಣಯವನ್ನು ತಂದಿದ್ದೇನೆ. ಇಂತಹ ಕಾರ್ಯಗಳಿಗೆ ತಾವು ಬಡ್ಜೆಟ್ಟಿನಲ್ಲಿ 50,000 ರೂಪಾಯಿಗಳನ್ನು ಮುಡುಪಾಗಿಟ್ಟಿದ್ದೀರಿ. ಈ ಹಣ ಪೂರ್ತ ಈ ಕೆಲಸಕ್ಕೆ ಖರ್ಚುಮಾಡಬೇಕಾಗಿಲ್ಲ. ಈಗ ಸದ್ಯಕ್ಕೆ 25 ಸಾವಿರ ರೂಪಾಯಿಗಳನ್ನಾದರೂ ಒದಗಿಸಿ ಕೂಡಲೇ ಆ ರಸ್ತೆಯನ್ನು ಮಾಡಿಸಿಕೊಡಬೇಕೆಂದೂ, ಹಾಗೆ ಮಾಡಿಸದೆ ಕಾಲವಿಳಂಬ ಮಾಡಿದಷ್ಟೂ ಅದು ಕೆಟ್ಟುಹೋಗಿ ಕೊನೆಗೆ 25 ಸಾವಿರ ಏತಕ್ಕೂ ಸಾಲದಾಗುತ್ತದೆಂದೂ ಆದ ಪ್ರಯುಕ್ತ ಪ್ರಸಕ್ತ ಸಾಲಿನಲ್ಲಿಯೇ ಆ ಕೆಲಸವನ್ನು ಕೈಕೊಳ್ಳತಕ್ಕ ಬಗ್ಗೆ 25 ಸಾವಿರ ರೂಪಾಯಿಗಳನ್ನು ಈ ಬಾಬಿಗೆ ಈ ವರ್ಷಕ್ಕೆ ಖರ್ಚುಮಾಡಿ ಎಂದು ಸರ್ಕಾರವನ್ನು ಒತ್ತಾಯಪಡಿಸುವುದಕ್ಕಾಗಿ ನಾನು ಈ ನಿರ್ಣಯವನ್ನು ಈಗ ಸಭೆಯ ಮುಂದೆ ಇಡಲು ಇಷ್ಟಪಡುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

3 P. M.

ಜನಾಬ್ ಜೆ. ಮಹಮದ್ ಇಮಾಂರವರು (ಜಗಳೂರು).—ಸ್ವಾಮಿ, ಈ ಖೋತಾ ನಿರ್ಣಯನ್ನು ನಾನು ಅನುಮೋದಿಸಿ ಪುಷ್ಟೀಕರಿಸುತ್ತೇನೆ. ಇಮಾಂ ಸಾಹೇಬರಿಗೂ ಕಾನಕಾನಹಳ್ಳಿಗೂ ಏನು ಸಂಬಂಧ ಎಂದು ಅನೇಕರು ಅನುಮಾನ ಪಡಬಹುದು. ಆದರೆ ಸ್ವಾನುಭವದಿಂದ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಅಲ್ಲಿ ಶ್ರೀ ಕರಿಯಪ್ಪನವರಿಗೆ ವಿರೋಧವಾಗಿ ಪ್ರಚಾರ ಮಾಡುವುದಕ್ಕೆಹೋಗಿದ್ದೆ ಅಲ್ಲಿಗೆ ಹೋಗುವಾಗ ನಾನೂ ನನ್ನ ಕೆಲವು ಮಿತ್ರರೂ ಒಂದು ಮೋಟಾರಿನಲ್ಲಿ ಹೋದೆವು. ಸುಮಾರು ಆ ರಸ್ತೆಯಲ್ಲಿ ಆರು ಮೈಲಿಗಳು ಪ್ರಯಾಣ ಮಾಡಿ ಮರಳುವಾಡಿಗೆ ಹೋದೆವು. ಕಾರಿನಲ್ಲಿ ಹೋಗುವುದಕ್ಕೆ ಅಷ್ಟು ಸ್ವಲ್ಪ ದೂರಕ್ಕೆ ಒಂದು ಗಂಟೆ ಮೇಲೆ ಬೇಕಾಯಿತು. ಇಷ್ಟೇ ಅಲ್ಲದೆ ಆ ರಸ್ತೆ ಬಹಳ ಮುಖ್ಯವಾದುದು. ಮುಖ್ಯವಾಗಿ ಆ ರಸ್ತೆಯಲ್ಲಿ ಸೌದೆ ಸರಬರಾಯಾಗುತ್ತದೆ. ಅಲ್ಲಿಂದ ಗಾಡಿಗಳಲ್ಲಿ ಬಹಳವಾಗಿ ಸೌದೆ ಬರುತ್ತದೆ. ನಾನೂ ಅನೇಕಾವರ್ತಿ ಅಲ್ಲಿ ಸಂಚಾರವಮಾಡುವ ಗಾಡಿ ಮತ್ತು ಎತ್ತುಗಳ ಪಾಡು, ಅವುಗಳ ಅವಸ್ಥೆ ಮತ್ತು ಕಷ್ಟ ನೋಡಿ ಬಹಳ ವ್ಯಸನಪಟ್ಟಿದ್ದೇನೆ. ಖಂಡಿತ ಸರ್ಕಾರಕ್ಕೆ ಅದು ನಾಚಿಕೆಗೇಡು. In fact to have such a road, I must say, does not do any credit to any Government. ಅಲ್ಲಿ ಹೋದಾಗ ಆ ಪ್ರಾಂತದ ಜನರನ್ನು ಏಕೆ ರಸ್ತೆ ಈ ರೀತಿ ಇದೆ, ಸರಿಮಾಡದೇಯಿರಲು ಕಾರಣವೇನು ಎಂದು ಕೇಳಿದೆ. ಅದಕ್ಕೆ ಅವರು ಎಷ್ಟು ಅರ್ಜಿ ಕೊಟ್ಟು ಎಲ್ಲರಿಗೂ ಎಷ್ಟೇ ಹೇಳಿದರೂ ಸಹ ಯಾರೂ ಇಲ್ಲಿಗೆ ಬಂದು ನೋಡುವುದಿಲ್ಲ, ಏನೂ ಮಾಡುವುದಿಲ್ಲ ಎಂದು ಹೇಳಿದರು.

I think that is a worst specimen of a road that could be found. In fact it is not a road at all. It is a road which has added more to the difficulty of the traffic than anything else. Perhaps, I think, that road belongs to the District Board and the Government or the Minister in charge of the Forest Portfolio might say that it is not their responsibility but that it is the look out of the District Board. But whether the road is maintained by the District Board or by the Municipality, the primary responsibility of the Government does not cease. They have got the controlling power and the supervising power over the Local Bodies including the Forest Roads. If the road is bad then it is the duty of the Government to see that that road is repaired having regard to its importance. I think that what Sri S. Kariappa had stated is absolutely true and nothing but truth. But I think he has not stated the whole truth, so as not to embarrass the Government. To have such a road in a Responsible Government is really a matter to be regretted. I submit that this road must be repaired by the Government at a very early date.

Sri T. CHANNIAH.—The Maralvadi-Hunasanahalli Forest Road is mainly meant for transport of forest produce. It is nearly 15 miles in length. The repair of this road was hitherto undertaken by the Forest Department. In the year 1933-34 it was formed and it was repaired in the year 1950-51 at a cost of Rs. 798. And for the purpose of movement of forest produce temporary repairs are being effected, now and then. Since it is 15 miles in length, the Forest Department is not in a position to maintain it. It is because it has got very few funds to subscribe to the maintenance of this road. However, I am thinking to allot some funds through the District Board for this road from next year onwards, though not this year. We did not undertake the repairs of this road through Forest Department for this reason, *i.e.*, insufficiency of funds available in the Budget for this year. We will, of course, try to undertake the repairs of this road through the District Board and with the help of the Forest Department also. So, I request the mover of cut motion to withdraw this motion.

Sri B. HUTCHE GOWDA.—Sir, I rise to oppose.

Mr. SPEAKER.—The cut motion ?

Sri B. HUTCHE GOWDA.—No, Sir, not the cut motion.

ಶ್ರೀ ಎಸ್. ಕರಿಯಪ್ಪನವರು.— ನಾನು ಇದನ್ನು ಒತ್ತಾಯ ಪಡಿಸುವುದಿಲ್ಲ. ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

Mr. SPEAKER.—Has the Member the leave of the House to withdraw his cut motion?

(*Permission was not granted.*)

Mr. SPEAKER.—The question is:

'That thedemand be reduced by Rs. 100.'

The motion was negatived.

The Assembly rose for Lunch at Seven Minutes past Three of the Clock and reassembled at Forty-three Minutes past Three of the Clock.

[Mr. SPEAKER in the Chair.]

Statement *re*. Extension of Time.

Sri A. G. RAMACHANDRA RAO.—One question was raised this morning and that is regarding the extension of the number of days for moving cut motions and demands by two days. The rules are clear that not less than ten days should be given. Even this period was fixed with the knowledge of Janab Mohamed Imam. We have already sat for ten days and we have to sit for ten days more. If we have to sit further for a few more days other Government work is likely to be interfered with. So Government regret that they cannot agree for any further extension of time.

Preservation of Forest Wealth and Afforestation.

Sri K. PUTTASWAMY (Srirangapatna).—Sir, I move.—

"That the demand under the head '10. Forest' for Rs. 25,12,000 be reduced by Rs. 100 (to urge upon the Government the importance of preservation of Forest Wealth and afforestation."

ಅರಣ್ಯ ಸಂಪತ್ತನ್ನು ರಕ್ಷಿಸುವ ಮತ್ತು ಬೆಳೆಸುವ ಪ್ರಾಮುಖ್ಯತೆಗೆ ಸರ್ಕಾರದ ಗಮನವನ್ನು ಎಳೆಯುವುದಕ್ಕೆ ಈ ಅರಣ್ಯ ಶಾಖೆಯ ಖರ್ಚಿಗಾಗಿ ಕೇಳಿರುವ 25 ಲಕ್ಷದ 12 ಸಾವಿರ ರೂಪಾಯಿಗಳಲ್ಲಿ 100 ರೂಪಾಯಿ ಖೋತಾ ಆಗಬೇಕೆಂಬ ನಿರ್ಣಯವನ್ನು ಸಭೆಯಲ್ಲಿ ಮಂಡಿಸಲಿಚ್ಛಿಸುತ್ತೇನೆ. ಈಗ್ಗೆ ಕೆಲವಾರು ವರ್ಷಗಳಿಂದ ದೇಶದಲ್ಲಿರುವ ಅರಣ್ಯ ಸಂಪತ್ತು ಕ್ಷೀಣಿಸುತ್ತಾ ಬಂದಿರುವ ಅಂಶ ಮಹಾಜನರಿಗೆ ಎಲ್ಲರಿಗೂ ತಿಳಿದಿರುವುದಾಗಿದೆ. ಅದರಲ್ಲೂ ಈ ಹೆಚ್ಚುಬೆಳೆ ಬೆಳೆಯಬೇಕೆಂಬ ಒಂದು ಯೋಜನೆಯನ್ನು ಸರ್ಕಾರದವರು ಕೈಕೊಂಡ ಮೇಲೆ ಅರಣ್ಯ ಪ್ರದೇಶದಲ್ಲಿ ಬಹುಭಾಗವನ್ನು ಹೆಚ್ಚು ಬೆಳೆ ಬೆಳೆಯುವ ಯೋಜನೆಯಲ್ಲಿ ಹಲವಾರು ರೈತರಿಗೆ ಕೊಟ್ಟಿದ್ದಾರೆ. ದೇಶದಲ್ಲಿ ಈಗ ಆರಂಬಕ್ಕೆ ಅನುಕೂಲವಾಗಿರುವ ಪ್ರದೇಶ ಬಹಳವಾಗಿದೆ. ಅಲ್ಲಿ ಸರಿಯಾಗಿ ಬೆಳೆ ಬೆಳೆಯುತ್ತಾ ಇಲ್ಲ. ಆರಂಬಕ್ಕೆ ಲಾಯಕ್ಕಾಗಿರುವ ಸಾವಿರಾರು ಎಕರೆ ಪ್ರದೇಶ ಪಾಳುಬಿದ್ದಿದೆ. ಪಾಳುಬಿದ್ದಿರುವ ಜಮಿಾನನ್ನು ವ್ಯವಸಾಯಕ್ಕೆ ತರುವ ಪ್ರಯತ್ನ ಅಷ್ಟೊಂದು ಜಯಪ್ರದವಾಗಿ ನೆರವೇರಿಲ್ಲ. ಅದಕ್ಕೆ ಅನೇಕ ಅಡ್ಡಿ, ಅಡಚಣೆಗಳಿರಬಹುದು. ವ್ಯವಸಾಯದ ಕಸಬಿನಲ್ಲಿ ತೊಡಗದೇ ಇರುವ ಅನೇಕರಿಗೆ ಆ ಜಮಿಾನು ಸೇರಿ ಅವರು ವ್ಯವಸಾಯವನ್ನು ಮಾಡದೇ ಇದ್ದರೂ ಮತ್ತು ಸರಿಯಾದ ರೈತಾಬಾದು ಇಲ್ಲದೆ ಆ ಪ್ರದೇಶವೆಲ್ಲಾ ಪಾಳುಬಿದ್ದಿದ್ದರೂ, ಈ ನೈಸರ್ಗಿಕವಾದ ಪ್ರಕೃತಿ ಸಂಪತ್ತಿರುವ ಅರಣ್ಯ ಪ್ರದೇಶವನ್ನೂ ವ್ಯವಸಾಯಕ್ಕೆ ಕೊಟ್ಟಿರುವುದರಿಂದ ಅರಣ್ಯ ಸಂಪತ್ತು ನಶಿಸಿ ಹೋಗುತ್ತಿದೆ. ವನಸಂಪತ್ತು ದೇಶದ ಅಭಿವೃದ್ಧಿಗೆ ಎಷ್ಟು ಅತ್ಯಗತ್ಯ ಎಂಬ ವಿಚಾರವನ್ನು ಒತ್ತಿ ಒತ್ತಿ ಹೇಳಬೇಕಾಗಿಲ್ಲ. ಈ ದೇಶದಲ್ಲಿ ಮಳೆ ಇತ್ತೀಚೆಗೆ ಕಡಮೆಯಾಗಿರುವುದಕ್ಕೂ ಮತ್ತು ಕಾಲಕಾಲಕ್ಕೆ ಮಳೆ ಬೀಳದೆ ಇರುವುದಕ್ಕೂ ಅರಣ್ಯಸಂಪತ್ತು ಕ್ಷೀಣಿಸಿರುವುದೇ ಕಾರಣ ಎಂದು ತಿಳಿದವರು ಹೇಳುತ್ತಾರೆ. ಅರಣ್ಯ ಸಂಪತ್ತನ್ನು ಹೆಚ್ಚಿಸುವುದು ಮುಖ್ಯವಾದ ಕೆಲಸ. ಈ ಕೆಲಸದಲ್ಲಿ ಸರ್ಕಾರ ಯಾವ ಕಾರ್ಯವನ್ನು ಕೈಕೊಂಡಿದೆ ? ಇದು ಎಷ್ಟು ಅವಶ್ಯಕವೋ ಅಷ್ಟುಮಟ್ಟಿಗೆ ಈ ಕಾರ್ಯ ಸಾಗುತ್ತಾ ಇಲ್ಲ. ಅರಣ್ಯವನ್ನು ಬೆಳೆಸುವ ಕೆಲಸಕ್ಕೆ ಸಾಕಾದಷ್ಟು ಸಿಬ್ಬಂದಿ, ಸಾಕಾದಷ್ಟು ಗಮನ ಮತ್ತು ಸಾಕಾದಷ್ಟು ಹಣ ಇವನ್ನು ನಾವು ಮಿಾಸಲಾಗಿಟ್ಟಿದ್ದೇವೆಯೇ ? ಮೈಸೂರು ದೇಶ, ಅರಣ್ಯ ಸಂಪತ್ತಿನಲ್ಲಿ ಹೆಸರಾದ ದೇಶ. ಇಲ್ಲಿ ಬರಬರುತ್ತಾ ಅರಣ್ಯ ಸಂಪತ್ತು ಕಳೆದುಹೋಗುತ್ತದೆಯೋ ಏನೋ ; ಕ್ಷೀಣಿಸಿ ಹೋಗುತ್ತದೆಯೋ ಏನೋ ಎಂಬ ಸಂಶಯ ಬಂದಿದೆ. ಮೈಸೂರು, ಬೆಂಗಳೂರು ಇಂಥಾ ದೊಡ್ಡ ಪಟ್ಟಣಗಳಿಗಾಗಿ ಅರಣ್ಯ ಸಂಪತ್ತನ್ನು ಸೂರೆಮಾಡಿ ಅಲ್ಲಿ ನಿತ್ಯದ ಬಳಕೆಗೆ ಬೇಕಾಗುವ ಸೌದೆ ತಂದುಕೊಡುತ್ತಾ ಇದ್ದಾರೆ. ಮೈಸೂರು ದೇಶದಲ್ಲಿ ವಿದ್ಯುಚ್ಛಕ್ತಿ ತಯಾರಿಕೆ ಹೆಚ್ಚಾಗಿರುವಾಗ ಮೈಸೂರು, ಬೆಂಗಳೂರಿನಂಥ ಮುಖ್ಯ ಪಟ್ಟಣಗಳಲ್ಲಿ ವಿದ್ಯುಚ್ಛಕ್ತಿಯನ್ನು ಅಡಿಗೆಗೆ ಬಳಸುವುದನ್ನು ಕಡ್ಡಾಯವಾಡುವುದರ ಮೂಲಕ ಅಥವಾ ಪ್ರೋತ್ಸಾಹ ಕೊಡುವುದರ ಮೂಲಕ ಅರಣ್ಯ ಸಂಪತ್ತನ್ನು ರಕ್ಷಿಸಬಹುದು. ಇನ್ನೂ ಈ ಅರಣ್ಯ ಸಂಪತ್ತನ್ನು ರಕ್ಷಿಸುವುದಕ್ಕೂ ಬಳಸುವುದಕ್ಕೂ ನಾನಾ ಮಾರ್ಗಗಳು ಇವೆ. ಸಾಮಾನ್ಯವಾಗಿ ತಿಳಿದೇಇರತಕ್ಕವುಗಳನ್ನು ಪುನಃಪುನಃ ಒತ್ತಿಹೇಳಿ ಈ ಸಭೆಯ ಹೊತ್ತನ್ನು ಕಳೆಯುವುದಕ್ಕೆ ಇಷ್ಟವಿಲ್ಲ. ಸರ್ಕಾರದವರು ಈ ಕಡೆ ಈಗ ಕೊಡುತ್ತಿರುವುದಕ್ಕಿಂತ ಹೆಚ್ಚು ಗಮನ ಕೊಡಬೇಕು ಎಂಬ ಬಗ್ಗೆ ತಮ್ಮ ಗಮನವನ್ನು ಎಳೆಯುವ ಉದ್ದೇಶದಿಂದ ಖೋತಾ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದ್ದೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಸ್ವಾಮಿ, ನಾನು ಈಗ ನಮ್ಮ ಮಾನ್ಯ ಮಿತ್ರರಾದ ಪುಟ್ಟಸ್ವಾಮಿಯವರು ಮಂಡಿಸಿರತಕ್ಕ ಖೋತಾ ನಿರ್ಣಯದ ವಿಷಯದಲ್ಲಿ ಸಭೆಯ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಈಗಾಗಲೇ ಮಾನ್ಯ ಮಿತ್ರರು ವಿವರವನ್ನು ತಿಳಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಅರಣ್ಯ ಸಂಪತ್ತಿನ ವಿಷಯದಲ್ಲಿ ಬಹಳ ಕಾಲದಿಂದಲೂ ಹಿಂದಿನ ಅಸೆಂಬ್ಲಿಗಳಲ್ಲೂ ಸಹ ಹೇಳಿದ್ದೇವೆ. ಫಾರೆಸ್ಟ್ ಜಂಗಲುಗಳಲ್ಲಿ ಸಾವಿರಾರು ಎಕರೆ ಜಮೀನುಗಳನ್ನು ಸರ್ಕಾರದವರ ಅಪ್ಪಣೆ ಇಲ್ಲದೆ ಉಳುಮೆಮಾಡತಕ್ಕ ವಿಷಯವನ್ನು ಅನೇಕಸಾರಿ ಸಭೆಯಲ್ಲಿ ತಂದಿದ್ದೇವೆ. ಒಂದು ಎಕರೆಯನ್ನಾದರೂ ಕೂಡ ವಾಪಸು ತೆಗೆದುಕೊಂಡಿಲ್ಲ. ಅರಣ್ಯ ಸಂಪತ್ತು ದಿನೇದಿನೇ ಕಡಮೆ ಆಗುವುದಕ್ಕೆ ಇದು ಬಲವಾದ ಕಾರಣ ಎನ್ನುವುದನ್ನು ಈ ಸಭೆಯಲ್ಲಿ ನಾನು ಖಂಡಿತವಾಗಿ ಹೇಳಬೇಕಾಗಿದೆ. ಸಂಸ್ಥಾನದಲ್ಲಿ ಈ ಅರಣ್ಯ ಸಂಪತ್ತು ನಾಶವಾಗಿರುವುದರಿಂದಲೇ ಸಂಸ್ಥಾನದ ಅನೇಕ ಕಡೆಗಳಲ್ಲಿ ಕ್ಷಾಮ ಮತ್ತು ಕ್ಷೋಭೆ ಬಂದಿರುವುದು ಎಂದು ಹೇಳಿದರೆ ಏನೂ ತಪ್ಪಾಗುವುದಿಲ್ಲ. ಹಿರಿಯರು ಪೂರ್ವಕಾಲದಿಂದಲೂ ಹಿಡುವಳಿ ಜಮೀನಿನಲ್ಲೂ ಸಹ ಮರಗಳನ್ನು ಹಾಕುವುದರ ಮೂಲಕ ಮಳೆಯ ಒಂದು ಶಕ್ತಿಯನ್ನು ಸೆಳೆಯುತ್ತಾ ಇದ್ದರು. ಹಾಗೆಯೇ ಸರ್ಕಾರದವರಿಗೂ ಕೂಡ ಇಂಥಾ ಫಾರೆಸ್ಟ್ ಜಂಗಲುಗಳ ವಿಚಾರದಲ್ಲಿ ಹೆಚ್ಚಿನ ಅಭಿಮಾನ ಇದ್ದೇ ಇತ್ತು.

ಈಗಲೂ ಕೂಡ ಮೈಸೂರು ಸಂಸ್ಥಾನದಲ್ಲಿ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಮೊಬಲಗು ತೀರಾ ಕಡಮೆ. ಅಲ್ಲದೆ, ಈಗಾಗಲೇ ಖರ್ಚು ಮಾಡಿರತಕ್ಕ ಹಣವನ್ನೂ ಕೂಡ ಇಲಾಖೆಯವರು ಸರಿಯಾಗಿ ಉಪಯೋಗಿಸಿಲ್ಲವೆಂದು ನಾನು ಖಚಿತವಾಗಿ ಹೇಳಬಲ್ಲೆ. ನಮ್ಮ ಮಾಗಡಿ ತಾಲ್ಲೂಕಿನ ವಿಷಯವನ್ನೇ ತೆಗೆದುಕೊಳ್ಳುವುದಾದರೆ ಅಲ್ಲಿ ಕಳೆದ ಎರಡು ವರ್ಷಗಳಿಂದಲೂ ಎಷ್ಟೋ ಹಣವನ್ನು ವಿನಿಯೋಗ ಮಾಡಿದ್ದರೂ ಅಲ್ಲಿನ ಅರಣ್ಯಸಂಪತ್ತು ಏನೇನೂ ಹೆಚ್ಚಿಲ್ಲ. ಆದ್ದರಿಂದ ಸರ್ಕಾರದವರು ಇತ್ತಕಡೆ ತೀವ್ರವಾಗಿ ಗಮನಕೊಟ್ಟು ಅರಣ್ಯ ಸಂಪತ್ತನ್ನು ಹೆಚ್ಚು ಮಾಡುವುದಕ್ಕೆ ಮೊದಲು ಮನಸ್ಸು ಮಾಡಿದರೆ ದೇಶದ ಪೂರ್ಣ ಅಭ್ಯುದಯಕ್ಕೆ ಅವಕಾಶವಾಗುತ್ತದೆ. ಈಗ ಯಾವ ಕಾಡಿನಲ್ಲಿ ನೋಡಲಿ ಅಲ್ಲಿನ ಅರಣ್ಯ ಸಂಪತ್ತು ಕ್ಷೀಣವಾಗುತ್ತಾ ದಿನೇದಿನೇ ನಾಶವಾಗುತ್ತಿದೆ. ಈ ನಾಶಕ್ಕೆ ಮೊದಲನೆಯ ಕಾರಣ ಅಲ್ಲೆಲ್ಲಾ ಇದ್ದಲು ಸುಡುವುದಕ್ಕೂ ಸೌದೆಗೆ ಮರಗಳನ್ನು ಕಡಿಯುವುದಕ್ಕೂ ಅವಕಾಶ ಕೊಟ್ಟಿರುವುದೇ ಆಗಿದೆ. ಸರ್ಕಾರದವರು ಇದನ್ನು ಮನಗಂಡು ಈಗಾಗಲೇ ಮರಗಳನ್ನು ಕಡಿಯುವುದನ್ನು ಕಡಮೆಮಾಡಿದ್ದಾರೆ; ಮಾಡುತ್ತಲೂ ಇದ್ದಾರೆ. ಆದರೂ, ಇದು ಇನ್ನೂ ಯಶಸ್ವಿಯಾದ ರೀತಿಯಲ್ಲಿ ತಡೆಗಟ್ಟಲ್ಪಡಬೇಕಾದರೆ ಈಗ ಮಾಡಿರತಕ್ಕ ಕೂಪ್ ಸಿಸ್ಟಂ ಸರಿಮಾಡಿದ ಹೊರತು ಗತ್ಯಂತರವಿಲ್ಲ. ಏಕೆಂದರೆ, ಕೂಪುಗಳನ್ನು ತೆಗೆದುಕೊಂಡವರು ತಮ್ಮ ಕೂಪಿಗೆ ಸೇರಿದ ಮರಗಳ ಜೊತೆಗೆ ತೇಗ ಹೊನ್ನೆ ಮೊದಲಾದ ದೊಡ್ಡದೊಡ್ಡ ಬೆಲೆಬಾಳುವ ಮರಗಳನ್ನೂ ಕಡಿದುಕೊಂಡು ಹೋಗುವುದರಿಂದ ಸರ್ಕಾರದ ವರಮಾನ ಕಡಮೆಯಾಗುವುದಕ್ಕೆ ಅವಕಾಶವಾಗಿದೆ. ಆದ್ದರಿಂದ ಸರ್ಕಾರದವರು ಹೆಚ್ಚಿನ ಮೊಬಲಗನ್ನು ವೆಚ್ಚಮಾಡಿ ಈ ಇಲಾಖೆಯ ಏಳಿಗೆಗಾಗಿ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಸರ್ಕಾರಿ ಫಾರೆಸ್ಟ್ ಇಲಾಖೆಯಲ್ಲಿ ಕೆಲಸಮಾಡುವ ನೌಕರರ ವಿಷಯದಲ್ಲಿ ಈಗ ತಾವು ಅಷ್ಟಾಗಿ ಗಮನ ಕೊಟ್ಟಿಲ್ಲವೆಂದು ಕಾಣುತ್ತದೆ. ಈ ಕಡೆಗೂ ಗಮನ ಕೊಡಬೇಕಾದದ್ದು ಅವಶ್ಯಕವೆಂದು ಹೇಳಿ, ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನೂ ಮತ್ತು ಸಭಾಸದಸ್ಯರನ್ನೂ ವಂದಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಅನಂತರಾಮಯ್ಯರವರು (ಚಾಮರಾಜಪೇಟೆ).—ಅಧ್ಯಕ್ಷರೇ, ಈ ಹಿಂದೆ ಮಾತನಾಡಿದ ಸದಸ್ಯರು ಅರಣ್ಯಸಂಪತ್ತನ್ನು ಹೆಚ್ಚಿಸುವುದಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದಾಗ್ಯೂ, ನಾನು ಒಂದು ಹೊಸ ಸಲಹೆಯನ್ನು ಕೊಡುವುದಕ್ಕಾಗಿ ಎದ್ದು ನಿಂತಿದ್ದೇನೆ. ಒಂದು ದೇಶದಲ್ಲಿರತಕ್ಕ ಭೂಮಿಯಲ್ಲಿ ಸುಮಾರು 25% ರಷ್ಟು ಅರಣ್ಯವಾಗಿರಬೇಕೆಂದು international standard ಒಂದಿದೆ. ಅದಕ್ಕೆ ಕಡಮೆಯಿದ್ದರೆ ದೇಶದಲ್ಲಿ ಮಳೆ ಬರುವುದಿಲ್ಲ, ಜನರಿಗೆ ಬಹಳ ಅನಾನುಕೂಲಗಳಾಗುತ್ತವೆಂದು ಅವರು ತೀರ್ಮಾನಮಾಡಿದ್ದಾರೆ.

ಈಗ ನಮ್ಮ ಸಂಸ್ಥಾನದಲ್ಲಿ ನೋಡುವುದಾದರೆ ಕೇವಲ 14%ರಷ್ಟು ಮಾತ್ರ ಅರಣ್ಯವಿದೆ. ಇದನ್ನು ಸಂಸ್ಥಾನದ ಅಧಿಕಾರಿಗಳೂ ಮತ್ತು ಸರ್ಕಾರದವರೂ ಜಾಸ್ತಿ ಮಾಡುವುದಕ್ಕೆ ಪ್ರಯತ್ನಮಾಡಿ 25%ಗೆ ಏರಿಸುವುದು ಅವರ ಮುಖ್ಯ ಕರ್ತವ್ಯ. ಈ ವಿಚಾರದಲ್ಲಿ ಎಷ್ಟು ಕಷ್ಟವಿದೆಯೆಂಬದನ್ನು ಮಾನ್ಯ ಸದಸ್ಯರಾಗಲೇ ಹೇಳಿದ್ದಾರೆ. ಇದಕ್ಕಾಗಿ ನನ್ನ ಸಲಹೆಯೇನೆಂದರೆ, ಈಗ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಅಡಿಗೆ ಮಾಡುವುದಕ್ಕೆ 18—20 ಹೋಟೆಲಿನವರು ವಿನಾ ಮಿಕ್ಕವರು ಯಾರೂ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿಲ್ಲ. ಬಾಕಿಯವರು ವಿದ್ಯುಚ್ಛಕ್ತಿ ಉಪಯೋಗಿಸಲು ಅವಕಾಶ ಕೊಡಿ ಎಂದು ಕೇಳಿದರೂ ಸರ್ಕಾರದವರು ಅವರಿಗೆ ಒದಗಿಸುತ್ತಿಲ್ಲವೆಂದು ತಿಳಿದುಬಂದಿದೆ. ಹೀಗಾಗಿ ಬೇಕಾದಷ್ಟು ಸೌದೆ ಖರ್ಚಾಗಿ ಜನಗಳಿಗೆ ನಿತ್ಯಬಳಕೆಗೆ ಸೌದೆ ಸಿಕ್ಕುವುದೇ ಕಷ್ಟವಾಗಿದೆ. $2\frac{1}{2}$ ಮಣ ಸಿಕ್ಕಬೇಕಾದರೆ ಜನರು ಕ್ಯೂನಲ್ಲಿ ನಿಂತು ಘಂಟೆಗಟ್ಟಲೆ ಕಾಯಬೇಕು. ಹೀಗೆ ನಿತ್ಯವೂ ಕಾಡಿನಿಂದ ಬರತಕ್ಕ ಸೌದೆ ಇದ್ದಲು ಕಡಮೆಮಾಡಿ ನಮ್ಮ ಅರಣ್ಯಸಂಪತ್ತನ್ನು ಅಭಿವೃದ್ಧಿಪಡಿಸಿಕೊಂಡು 25% ಗಾದರೂ ತಂದರೆ ನಮಗೆ ಬೇಕಾದಷ್ಟು ಮಳೆಬೆಳೆಯಾಗುತ್ತದೆ. ಈಗಾಗಲೇ ಮಲೆನಾಡಿನಲ್ಲೂ ಅಷ್ಟು ಚೆನ್ನಾಗಿ ಮಳೆಯಾಗುತ್ತಿಲ್ಲವೆಂದು ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ. ಏಕೆಂದರೆ ಅಲ್ಲಿದ್ದ ಕಾಡೆಲ್ಲಾ ಇಂದು ಬರಿದಾಗಿದೆ! ಆದ್ದರಿಂದ ನಮ್ಮ ಅರಣ್ಯ ಸಂಪತ್ತನ್ನು ಉಳಿಸಬೇಕಾದರೆ ವಿದ್ಯುಚ್ಛಕ್ತಿಯನ್ನು ಪಟ್ಟಣಗಳಿಗೆ ಧಾರಾಳವಾಗಿ ಕೊಡಬೇಕು.

ಇನ್ನೊಂದು ವಿಷಯ. ಅರಣ್ಯದ ಇಲಾಖೆಯವರು ಗಂಧದ ಮರದ ವಿಚಾರದಲ್ಲಿ ಅದು ಬಿದ್ದು ಒಣಗಿಹೋಗುತ್ತಿದ್ದರೂ ನಿಗಾ ಕೊಡದಿರುವುದನ್ನು ನಾನೇ ಎಷ್ಟೋಸಾರಿ ಕಂಡಿದ್ದೇನೆ. ಈಗ ಕೆಲವು ದಿವಸಗಳ ಹಿಂದೆ ಕೆಂಪಾಂಬುಧಿ ಕೆರೆಯ ಹಿಂದೆ ಕೆಲವು ಗಂಧದ ಮರಗಳು ಬಿದ್ದು ಒಣಗಿಹೋಗಿರುವುದನ್ನು ನಾನೇ ಸರ್ಕಾರದವರ ಗಮನಕ್ಕೆ ತಂದರೂ ಅದನ್ನು ತೆಗೆದುಕೊಂಡು ಹೋಗಲಿಲ್ಲ. ಫಾರೆಸ್ಟ್ ಕನ್ಸರ್‌ವೇಟರಿಗೂ ಕೂಡ ಹೋಗಿ ಹೇಳಿದೆ. ಈ ಪ್ರಕಾರ ಒಬ್ಬ ಅಧಿಕಾ

ರಿಯೂ ಸಹ ಇದರಕಡೆ ನಿಗಾ ಕೊಡುತ್ತಿಲ್ಲ. ಅನ್ಯಾಯವಾಗಿ ಹಾಳಾಗುತ್ತಿರುತ್ತವೆ. ಸೌದೆಗೆ ಅಭಾವ ವಿರುವ ಇಂಥ ಊರುಗಳಲ್ಲಿ ಸುತ್ತುಮುತ್ತಿನ ಜನರು ಇಂಥ ಮರಗಳನ್ನು ಕಂಡರೆ ಹೊತ್ತುಕೊಂಡು ಹೋಗಿ ಒಲೆಗೆ ಹಾಕಿಬಿಡುತ್ತಾರೆ. ಪೋಲೀಸಿನವರಿಗೆ ಇದು ಗೊತ್ತಾಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿಗೆ ನಿಗಾ ಕೊಡಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ಹುಲಿಯೂರು ದುರ್ಗ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪುಟ್ಟಸ್ವಾಮಿಯವರು ತಂದಿರತಕ್ಕ ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ನಾನು ನಿಂತಿದ್ದೇನೆ. ಈ ಪ್ರಶ್ನೆ ದೊಡ್ಡ ದೊಡ್ಡ ಕಾಡುಗಳಿರತಕ್ಕ ಪ್ರದೇಶಗಳಿಗಿಂತ ಹೆಚ್ಚಾಗಿ ಬಯಲು ಸೀಮೆಯಾದ ತುಮಕೂರು, ಚಿತ್ರದುರ್ಗ ಮುಂತಾದ ಭಾಗಗಳಲ್ಲಿರತಕ್ಕ ಕಾಡುಗಳಿಗೆ ಹೆಚ್ಚಿಗೆ ಅನ್ವಯಿಸತಕ್ಕ ವಿಷಯವಾಗಿದೆ. ಆ ಪ್ರದೇಶಗಳಲ್ಲಿ ಮಳೆಯಾಗುವುದೇ ಬಹಳ ಕಡಮೆ. ಅದರಿಂದ ಕಾಡುಗಳು ಬೆಳೆಯುವುದೂ ಅಷ್ಟು ದಟ್ಟವಾಗಿರುವುದಿಲ್ಲ. ಹೀಗಿರುವಾಗ ಈ ಕಾಡುಗಳೂ ನಿರ್ನಾಮವಾಗಿ ಹೋದಪಕ್ಷಕ್ಕೆ ಆ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಮಳೆಯ ಅಭಾವವಾಗುತ್ತದೆಂಬುದು ಎಲ್ಲರೂ ಮನಗಂಡಿರತಕ್ಕ ವಿಷಯವಾಗಿದೆ. ಇದನ್ನು ತಪ್ಪಿಸಬೇಕಾದರೆ ಕಾಡುಗಳಲ್ಲಿ ಹಸಿ ಮರಗಳನ್ನೂ ಹೋಗಿ ಕಡಿಯುವುದಕ್ಕೆ ಅವಕಾಶ ಕೊಟ್ಟು ಸಾರ್ವಜನಿಕರಿಗೆ ಲೈಸನ್ಸ್ ಕೊಡುವ ಪದ್ಧತಿಯನ್ನು ತಪ್ಪಿಸಿ ಸರ್ಕಾರದವರೇ ಬಲಿತ ಮರಗಳನ್ನು ಕಡಿದು ಗುಡ್ಡೆಹಾಕಿ ಒಟ್ಟುಗಟ್ಟಲೆಯೋ ಅಥವಾ ಗಾಡಿಗಟ್ಟಲೆಯೋ ಮಾರುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಕೆಲವು ಕಡೆ ಕಾಡುಗಳಲ್ಲಿ ವಿಪರೀತವಾಗಿ ಲಾಂಟಾನಾ ಬೆಳೆದು ಬೇರೆ ಮರಗಳು ಹುಟ್ಟುವುದಕ್ಕೆ ಅವಕಾಶವಿಲ್ಲದಂತಾಗಿರುತ್ತದೆ. ಆದ್ದರಿಂದ ಹೀಗೆ ಲಾಂಟಾನ ಬೆಳೆಯದಂತೆ ಮಾಡುವುದಕ್ಕೆ ಏನೇನು ಪ್ರಯತ್ನ ಮಾಡಬೇಕೋ ಅದನ್ನೆಲ್ಲಾ ಕೈಕೊಳ್ಳುವುದು ಅತ್ಯಾವಶ್ಯಕ. ಈ ವಿಷಯದಲ್ಲಿ ವೈಜ್ಞಾನಿಕರೂ ಪ್ರಯತ್ನ ಮಾಡಲಿ, ಇಲ್ಲದಿದ್ದರೆ ನಮ್ಮ ಫಾರೆಸ್ಟ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಾಗಲಿ ಪರಿಶೋಧನೆ ನಡೆಸಿ ಯಾವುದಾದರೂ ದ್ರಾವಕವನ್ನು ಉಪಯೋಗಿಸಿ ಆ ಮೂಲಕ ಇದನ್ನು ಹೋಗಲಾಡಿಸುವುದು ಆವಶ್ಯಕ.

ಅಲ್ಲದೆ, ಕಾಡುಗಳ ಅಭಿವೃದ್ಧಿಗೆ ಇನ್ನೊಂದು ಸಲಹೆ ಹೇಳುತ್ತೇನೆ. ಕಾಡುಗಳಲ್ಲಿ ಅಲ್ಲಲ್ಲೇ ಸಣ್ಣಸಣ್ಣ ನದಿಗಳು, ಝರಿಗಳು ಹರಿಯುತ್ತಿರುತ್ತವೆ. ಅಂಥವಕ್ಕೆ ಅಲ್ಲಲ್ಲೇ ಸಣ್ಣಸಣ್ಣ ಅಣೆಕಟ್ಟುಗಳನ್ನು ಹಾಕಿದರೆ ನೀರು ನಿಲ್ಲುವುದಕ್ಕೆ ಅವಕಾಶವಾಗಿ ಮರಗಳು ಇನ್ನೂ ಸೊಂಪಾಗಿ ಬೆಳೆಯಲು ಅನುಕೂಲವಾಗುತ್ತದೆ.

ಕೂಪುಗಳನ್ನು ಕೊಡುವುದರಿಂದ ಏನು ಅನಾನುಕೂಲವೆಂಬುದನ್ನು ನಾನಾಗಲೇ ಹೇಳಿದ್ದೇನೆ. ಆ ರೀತಿ ಅವಕಾಶ ಕೊಟ್ಟರೆ, 100 ಎಕರೆ ಒಂದು ವೇಳೆ ಯಾರಾದರೂ ಕೂಪು ಮಾಡಿಕೊಂಡಿದ್ದರೆ ಅವರು ತಮ್ಮ ಕೂಪಿನಲ್ಲಲ್ಲದೆ ಅಕ್ಕಪಕ್ಕದ ಮರಗಳನ್ನೂ ಕಡಿದು ಸರ್ಕಾರದವರು ಅವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಈ ರೀತಿಯಾಗಿ ಕೂಪುಗಳನ್ನು ಕೊಡುವ ಪದ್ಧತಿಯನ್ನು ತಪ್ಪಿಸಬೇಕು.

ಇನ್ನು afforestation ವಿಚಾರದಲ್ಲಿ ಒಂದು ಮಾತು. ಸುಮ್ಮನೆ ಎಲ್ಲಾಕಡೆಯೂ ಯಾವಯಾವುದೋ ಮರಗಳನ್ನು ಹಾಕುವುದಕ್ಕೆ ಬದಲಾಗಿ ಎಲ್ಲಿ ಯಾವ ಜಾತಿಯ ಮರಗಳು ಅಭಿವೃದ್ಧಿಯಾಗುತ್ತವೆಂಬುದನ್ನು ತಿಳಿದು ಅಂಥಾ ಪ್ರದೇಶದಲ್ಲಿ ಆ ಜಾತಿಯ ಮರಗಳನ್ನೇ ಹೆಚ್ಚಿಗೆ ಬೆಳೆಸಲು ಪ್ರಯತ್ನಮಾಡಬೇಕು. ಉದಾಹರಣೆಗೆ ನಮ್ಮ ಕಡೆ ಹುಲಿಯೂರು ದುರ್ಗದಲ್ಲಿ ಅಳಲೆ ಕಾಯಿ ಮರ ಬಹಳ ಚೆನ್ನಾಗಿ ಬೆಳೆಯುತ್ತದೆ. ಅಲ್ಲಿ ಆ ಗಿಡಗಳನ್ನೇ ಹೆಚ್ಚಿಗೆ ಬೆಳೆಸಲು ಗಮನ ಕೊಡಬೇಕೆಂದು ಹೇಳುತ್ತೇನೆ.

ಆಮೇಲೆ, ವನಮಹೋತ್ಸವಗಳೆಂದು ಏರ್ಪಡಿಸಿ ಸರ್ಕಾರದವರು ಲಕ್ಷಾಂತರ ಮರಗಳನ್ನು ರಸ್ತೇ ಪಕ್ಕಗಳಲ್ಲಿ ನೆಡಸುತ್ತಿದ್ದಾರೆ. ಹೀಗೆ ಎಷ್ಟೋ ಹಣವನ್ನು ಖರ್ಚುಮಾಡಿ ಸಾರ್ವಜನಿಕರೂ, ಸರ್ಕಾರದವರೂ ಶ್ರಮಪಟ್ಟು ಅಲ್ಲಿ ಇಲ್ಲಿ ಗಿಡಗಳನ್ನು ಹೀಗೆ ನೆಡಸುವುದರಿಂದ ಅಷ್ಟು ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಏಕೆಂದರೆ ನಾವು ನೋಡಿರುವಂತೆ ರಸ್ತೆಪಕ್ಕಗಳಲ್ಲಿ, ಇತರ ಕಡೆಗಳಲ್ಲಿ ನೀವು ಎಷ್ಟೇ ನೆಟ್ಟರೂ ಮುಂದೆ ಅದಕ್ಕೆ ನಿಗಾ ಇಟ್ಟು ನೋಡಿಕೊಂಡು ಉಳಿಸುವುದು ಕಷ್ಟ. ವನಮಹೋತ್ಸವ ಕಾಲದಲ್ಲೇನೋ ಹುಮ್ಮಸ್ಸಿನಿಂದ ಲಕ್ಷಾಂತರ ಸಸಿಗಳನ್ನು ನೆಡಬಹುದು. ಆದರೆ ವರ್ಷಾಂತ್ಯದಲ್ಲಿ ನೋಡಿದರೆ ನೂರಾರು ಸಸಿಗಳೂ ಕೂಡ ಉಳಿದಿರುವುದಿಲ್ಲ. ಆದ್ದರಿಂದ ಈ ನೀತಿಯನ್ನು ಬದಲಾಯಿಸಿ ಕಾಡುಗಳಲ್ಲೇ ಸಸಿಗಳನ್ನು ಹೆಚ್ಚುಹೆಚ್ಚಿಗೆ ನೆಟ್ಟು ಮರಗಳನ್ನು ಬೆಳೆಸಲು ಪ್ರಯತ್ನ ಮಾಡಿದರೆ, ನಮ್ಮ ಕಾಡುಗಳನ್ನೂ ಅಭಿವೃದ್ಧಿ ಮಾಡಿದಂತಾಗುತ್ತದೆಂದು ಹೇಳಿ ಈ ಸಲಹೆಗಳನ್ನು ಸರ್ಕಾರದವರ ಮುಂದಿಡುತ್ತೇನೆ.

4 P.M.

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ).—ಸ್ವಾಮಿ, ರಾಷ್ಟ್ರಸಂಪತ್ತಿನಲ್ಲಿ ವನಸಂಪತ್ತಿಗೆ ಅತ್ಯಂತ ಮುಖ್ಯ ಸ್ಥಾನವಿದೆ. ಆದರೆ ಈಚೆಗೆ ನೋಡಿದರೆ, ಹಿಂದೆ ಈ ವನಗಳ ವಿಷಯದಲ್ಲಿ, ವೃಕ್ಷಗಳ ವಿಷಯದಲ್ಲಿ ಯಾವ ಧರ್ಮ ದೃಷ್ಟಿಯಿಂದ ನೋಡುತ್ತಿದ್ದೆವೋ ಆ ರೀತಿಯ ಧರ್ಮದೃಷ್ಟಿ ಈ ಕಾಲದಲ್ಲಿ ಕಡಮೆಯಾಗುತ್ತಾ ಬಂದಿದೆ. ಪೂರ್ವದಲ್ಲಿ ಮರಗಳು ಗಿಡಗಳು ಎಂದರೆ ಮನುಷ್ಯರ ಮತ್ತು ಪ್ರಾಣಿಗಳ ವಿಷಯದಲ್ಲಿ ಎಷ್ಟುಮಟ್ಟಿನ ದಯೆ ಮತ್ತು ಪ್ರೀತಿಯನ್ನು ತೋರಿಸುತ್ತಿದ್ದೆವೋ ಅಷ್ಟುಮಟ್ಟಿನ ಪ್ರೀತಿ ತೋರಿಸುತ್ತಿದ್ದೆವು. ಆದರೆ ಈಗ ಹಣ ಸಂಪಾದನೆ ಮಾಡಬೇಕೆಂಬ ಆಶೆಯಿಂದ ನಾವು ಗಿಡಗಳ ವಿಷಯದಲ್ಲಿ, ವನಗಳ ವಿಷಯದಲ್ಲಿ ನ್ಯಾಯವಾದ ಭಾವನೆಯಿಂದ ನಡೆದುಕೊಳ್ಳುತ್ತಿಲ್ಲ. ಮುಖ್ಯವಾಗಿ, ಪೂರ್ವದಲ್ಲಿ ಎಳೆಯ ಗಿಡಗಳನ್ನು, ಚಿಕ್ಕಚಿಕ್ಕ ಗಿಡಗಳನ್ನು ಪೋಷಣೆ ಮಾಡುವುದರಲ್ಲಿ ಜನರು ಬಹಳ ಆಶೆ ತೋರಿಸುತ್ತಿದ್ದರು. ಈಗ ಸೌದೆಗಾಗಿ ಗಿಡಗಳನ್ನು ಕೀಳುವುದರಲ್ಲಿ ಅಥವಾ ಬೇರೆ ಉಪಯೋಗಕ್ಕಾಗಿ ಗಿಡಗಳನ್ನು ನಾಶಮಾಡುವುದರಲ್ಲಿ ಹಿಂದಿದ್ದ ಪ್ರೀತಿಯ ಭಾವನೆ ಹೊರಟು ಹೋಗಿದೆ. ಆದುದರಿಂದ ಈಗ ಪುನಃ ಪ್ರಚಾರ ಕಾರ್ಯದಿಂದ ಅಥವಾ ಕಾನೂನಿನ ಬೆಂಬಲದಿಂದ ಪ್ರಾಣಿಗಳ ವಿಷಯದಲ್ಲಿ ಮತ್ತು ಮನುಷ್ಯರ ವಿಷಯದಲ್ಲಿ ಏನು ಸದ್ಭಾವನೆ ತೋರಿಸುತ್ತೇವೋ ಅದೇ ರೀತಿ ಗಿಡಗಳ ವಿಷಯದಲ್ಲಿಯೂ ತೋರಿಸುವ ಮನೋಧರ್ಮ ಬರುವ ಹಾಗೆ ಮಾಡಿ ಇದನ್ನು ಬೆಳೆಸಬೇಕಾಗಿದೆ. ಈಗಾಗಲೇ ವನಮಹೋತ್ಸವದ ವಿಚಾರ ಹೇಳಿದ್ದಾರೆ. ಈ ಸಂದರ್ಭದಲ್ಲಿ

(ಶ್ರೀ ಪಿ. ಆರ್. ರಾಮಯ್ಯನವರು.)

ಲಕ್ಷಾಂತರ ಗಿಡಗಳನ್ನು ಹಾಕುತ್ತೇವೆ, ಅದರೆ ಅವುಗಳನ್ನು ಕೀಳುವುದೂ ಅತ್ಯಂತ ತೀವ್ರವಾಗಿ ನಡೆಯುತ್ತಿದೆ. ನಾನು ಒಂದು ಚಿಕ್ಕ ಕೋಆಪರೇಟಿವ್ ಫಾರಂ ಇರುವ ಕಡೆ ಹೋಗಿದ್ದೆ. ಅಲ್ಲಿ ಬಹಳ ಶ್ರದ್ಧೆಯಿಂದ ಗಿಡಗಳನ್ನು ನೆಟ್ಟಿದ್ದರು. ಆದರೆ ಸುತ್ತಮುತ್ತಲಿನ ಹಳ್ಳಿಗಳಲ್ಲಿದ್ದ ಹುಡುಗರು ಆ ಚಿಕ್ಕ ಗಿಡಗಳನ್ನು ಮೇಕೆಗಳಿಂದ ಮೇಯಿಸುತ್ತಿದ್ದರು. ಹೀಗೆ ಹಳ್ಳಿಗಳಲ್ಲಿ ಗಿಡಗಳನ್ನು ಮೇಕೆಗಳಿಂದ ಕಾಪಾಡುವುದು ಕಷ್ಟವಾಗಿದೆ. ಆದುದರಿಂದ ಕಾನೂನಿನ ಮೂಲಕವೂ ಪ್ರಚಾರದ ಮೂಲಕವೂ ಪುನಃ ನಮ್ಮ ವನಸಂಪತ್ತು ಹೆಚ್ಚಾಗುವಂತೆ ಮಾಡಬೇಕು.

ಇನ್ನೊಂದು ವಿಷಯವನ್ನು ಸಭೆಯ ಗಮನಕ್ಕೆ ತರುತ್ತೇನೆ. ನಮ್ಮ ಶಾಸ್ತ್ರ ಪುರಾಣಗಳಲ್ಲಿ ನೋಡಿರುವಂತೆ ನಮಗೆ ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ, ಸನ್ಯಾಸಾಶ್ರಮಗಳೆಂದು ನಾಲ್ಕು ಆಶ್ರಮಗಳಿವೆ. ಇವುಗಳಲ್ಲಿ ಮುಖ್ಯವಾದ ವಾನಪ್ರಸ್ಥಾಶ್ರಮ ಒಂದು ಇದೆ. ಇದು ಈಗ ಜಾರಿಯಲ್ಲಿಲ್ಲವಾದರೂ ಕೂಡ ಹಿಂದೆ ಮನುಷ್ಯ ವನಗಳಿಗೆ ಹೋಗಿ ವಾಸ ಮಾಡಬೇಕೆಂಬ ಭಾವನೆ ಇತ್ತು. ಇದರಿಂದ ನಮ್ಮ ಧರ್ಮದಲ್ಲಿ, ನಮ್ಮ ನಾಗರಿಕತೆಯಲ್ಲಿ ವನಗಳಿಗೆ ಎಷ್ಟು ಉನ್ನತ ಸ್ಥಾನವನ್ನು ಕೊಟ್ಟಿದೆ ಎಂಬುದು ಗೊತ್ತಾಗುತ್ತದೆ. ಆದುದರಿಂದ ಪುನಃ ಈ ಧರ್ಮಭಾವನೆಯನ್ನು ಹೆಚ್ಚಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಸ್ವಾಮಿ, ಈ ವಿಷಯದಲ್ಲಿ ಒಂದೆರಡು ಸೂಚನೆಗಳನ್ನು ಮಾತ್ರ ಕೊಡಬೇಕೆಂದಿಚ್ಛಿಸುತ್ತೇನೆ. ನಮ್ಮ ಅರಣ್ಯ ಸಂಪತ್ತು ಹಾಳಾಗಿ ಹೋಗಿದೆ. ಅರಣ್ಯಗಳನ್ನು ಕಟ್ಟಿಗೆಗಾಗಿ ಉಪಯೋಗಿಸುತ್ತಿದ್ದಾರೆ. ಇದನ್ನು ಹೇಗೆ ಕಡ್ಡಾಯವಾಗಿ ನಿಲ್ಲಿಸುವುದು, ಇದಕ್ಕೆ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸೂಚಿಸುತ್ತೇನೆ. ಈಗ ಹೋಟೆಲುಗಳು ಮತ್ತು ಹಾಸ್ಟೆಲುಗಳಲ್ಲಿ ಕಡ್ಡಾಯವಾಗಿ ಸೌದೆ ಇದ್ದಿಲನ್ನು ಉಪಯೋಗಿಸುವುದನ್ನು ಬಿಟ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸಬೇಕು. ಎರಡನೆಯದಾಗಿ, ಪೌರ ಪ್ರದೇಶಗಳಲ್ಲಿ ಸ್ನಾನಕ್ಕೆ ಬಿಸಿನೀರನ್ನುಪಯೋಗಿಸುತ್ತಿದ್ದಾರೆ; ಇದಕ್ಕೆ ಬದಲು ತಣ್ಣೀರನ್ನುಪಯೋಗಿಸಬೇಕು. ಇಲ್ಲದಿದ್ದರೆ ವಿದ್ಯುಚ್ಛಕ್ತಿಯನ್ನುಪಯೋಗಿಸಿ ಬಿಸಿನೀರು ಕಾಯಿಸಿ ಉಪಯೋಗಿಸಬೇಕು. ಇದು ಕ್ರಾಂತಿಕಾರಕವಾದ ಸೂಚನೆಯೆಂದು ಕಾಣಬಹುದು. ಆದರೂ ಸಾಧ್ಯ. ವಿದ್ಯುಚ್ಛಕ್ತಿಯಿಂದ ಕಾಯಿಸಿ ಬಿಸಿನೀರು ಉಪಯೋಗಿಸಬಹುದು, ಅಥವ ತಣ್ಣೀರು ಉಪಯೋಗಿಸಬಹುದು. ನಾವು ಯಾವ ಯಾವ ಕಾಲದಲ್ಲಿ ಅಗತ್ಯವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕೋ ಅವನ್ನು ಮಾಡಿಕೊಳ್ಳಲೇಬೇಕು. ಈಗ ಅರಣ್ಯ ಸಂಪತ್ತನ್ನು ಬೆಳೆಸಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ಚಿತ್ರದುರ್ಗದಲ್ಲಿ ಮಳೆ ಬಹಳ ಕಡಮೆ ಬರುತ್ತಿದೆ. ಅಲ್ಲಿ ಬಹಳ ಕಷ್ಟ ಎಂದು ಹೇಳುತ್ತಿದ್ದಾರೆ. ಹೀಗಿರುವಾಗ ಈ ಕಷ್ಟಗಳನ್ನು ತಪ್ಪಿಸಬೇಕಾದರೆ ಕಡ್ಡಾಯವಾಗಿ ಪಟ್ಟಣಗಳಲ್ಲಿ ಸೌದೆ ಉಪಯೋಗಿಸಬಾರದೆಂದು ನಿರ್ಬಂಧಮಾಡಬೇಕೆಂದು ಸೂಚನೆ ಕೊಡುತ್ತೇನೆ.

Sri V. M. MASCARENHAS (St. John's Hill).—Sir, in supporting the cut motion moved by my friend, I am inviting the attention of Hon'ble Members to Question No. 229, in which I asked what the policy of the State was in increasing the area of forests. Sir, I am not a little surprised with the answer given which instead of saying 'efforts would be made', says: 'scope is limited', which practically means that no attempt will be made to increase the acreage of the forests. Sir, remembering that by far the greater part of the wealth of any country comes from the soil and that after centuries of experience and by assessment of experts it has been decided that every country must have at least 25 per cent of its land in the form of forests, I am surprised that in spite of such a healthy ruling, the Government should have thought that the scope for extending our forests is limited. This to me seems surprising.

Sri A. BHEEMAPPA NAIK.—Does he propose to cut down lands under cultivation and extend forests?

Sri V. M. MASCARENHAS.—If the Government of India forces it on you, you will be obliged to do it. I will continue. Sir, forests have a variety of ameliorative influences. First is conservation of soil, second prevention of soil erosion, third water flow and most important of all is the control of the climatic conditions of the area itself. When all these ameliorative influences are there, that we should forget that more and more of forests are necessary for us, is really unfortunate. Sir, I will not say about the leakage in the forests because they are too patent. Even the other day Government had to employ a Revenue Officer in the Mysore District to enquire into the so-called smuggling of timber that is going on practically for years whether it be of bigger type or smaller type. It is my earnest appeal to the Government that they must be ruthlessly suppressed. Sir, let us not forget that history has taught us that nations that do not give heed to the simple but fundamental tenets do so at the risk of their existence. Greece, Babylon and other Middle Eastern countries virtually committed suicide when they destroyed their forests. What is today happening in the Punjab at the foot of the Himalayas is an object lesson and

lest it be too late, I would request Government to revise their forest policy and to take timely remedial measures. Thank you.

ಶ್ರೀ ಎಸ್. ಗೋಪಾಲಗೌಡರು (ಸಾಗರ—ಹೊಸನಗರ).—ಸ್ವಾಮಿ, ನಾನು ಈ ಖೋತಾ ನಿರ್ಣಯವನ್ನು ಸ್ವಾಗತಿಸುತ್ತಾ ನಮ್ಮ ದೇಶದ ವನಸಂಪತ್ತು ಮತ್ತು ಅದನ್ನು ರಕ್ಷಣೆ ಮಾಡತಕ್ಕ ಬಗ್ಗೆ ಒಂದೆರಡು ಮಾತುಗಳನ್ನಾಡಬಯಸುತ್ತೇನೆ. ಈಗಾಗಲೇ ಅನೇಕ ಸದಸ್ಯರು ಮಾತನಾಡಿ ನಮ್ಮ ವನಸಂಪತ್ತು ಇತ್ತೀಚೆಗೆ ಹೇಗೆ ಕುಂದುತ್ತಾ ಬರುತ್ತಿದೆ, ಅದರ ರಕ್ಷಣೆಯನ್ನು ಹೇಗೆ ನಾವು ಮಾಡಿಕೊಳ್ಳಬೇಕು ಮತ್ತು ಅದರಿಂದ ದೇಶಕ್ಕೆ ಹೆಚ್ಚಿನ ಆದಾಯವನ್ನು ಪಡೆದುಕೊಳ್ಳುವ ರೀತಿ ಹೇಗೆ ಎಂಬುದನ್ನು ಸಾಕಷ್ಟು ವಿವರಿಸಿದ್ದಾರೆ. ನಾನು ಮಲೆನಾಡಿನವನಾಗಿರುವುದರಿಂದ ಕಾಡಿನ ಬಗ್ಗೆ ನನಗೆ ಹೆಚ್ಚು ಅಭಿಮಾನ ಮತ್ತು ಅದರ ಬಗ್ಗೆ ಸಾಕಷ್ಟು ತಿಳಿವಳಿಕೆ ಕೂಡ ಬಂದಿದೆ. ಇತ್ತೀಚೆಗೆ ನಮ್ಮಲ್ಲಿ ಕಾಡಿನ ಗಿಡವನ್ನು ಯಾವ ಅಡ್ಡಿ ತಡೆಯೂ ಇಲ್ಲದೆ ಅನೇಕ ಕಾನೂನುಗಳಿದ್ದಾಗ್ಯೂ ಕೂಡ ಅವನ್ನು ಗಮನಿಸದೆ ಕಡಿಯುತ್ತಿರುವುದು ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಎಷ್ಟು ಪ್ರಮಾಣದಲ್ಲಿ ದಿನೇ ದಿನೇ ಕಾಡು ನಶಿಸಿ ಹೋಗುತ್ತಿವೆಯೆಂಬುದು ಗೊತ್ತಾಗುತ್ತದೆ.

ಕಲ್ಲಿದ್ದಿಲಿಗಾಗಿ, ಮನೆಯ ಉಪಯೋಗಕ್ಕಾಗಿ, ರೈಲ್ವೆ ಲೈನಿನಲ್ಲಿ ಹಾಕಲಾಗುವ ಸ್ಲೀಪರ್ಸ್‌ಗಳಿಗಾಗಿ ಮತ್ತು ವಿದ್ಯುಚ್ಛಕ್ತಿ ಕಂಬಗಳಿಗಾಗಿ, ಹೀಗೆ ಎಷ್ಟೋ ಮರಗಳನ್ನು ನಾನಾ ಉಪಯೋಗಕ್ಕಾಗಿ ಕಡಿಯುತ್ತಾ ಬಂದಿದ್ದೇವೆ. ಹಾಗೆ ಕಡಿದ ಸ್ಥಳದಲ್ಲಿ ಮತ್ತೊಂದು ಹೊಸ ಮರವನ್ನು ಬೆಳೆಸತಕ್ಕ ಬಗ್ಗೆ ನಾವು ಯಾವ ಕ್ರಮವನ್ನೂ ಸರಿಯಾಗಿ ಕೈಕೊಂಡಿಲ್ಲ. ಆದರೆ ಅಲ್ಲಲ್ಲೇ ಕೆಲವು ಕಡೆ ತೇಗ, ಮತ್ತಿ ಮುಂತಾದ ಕೆಲವು ಬೆಲೆ ಬಾಳತಕ್ಕ ಗಿಡಗಳನ್ನು ಬೆಳೆಸಲಾಗುತ್ತಿದೆ. ಈ ದಿವಸ ಇಂಥ ಬೆಲೆ ಬಾಳುವ ಕಾಡನ್ನು ಎಷ್ಟರಮಟ್ಟಿಗೆ ರಕ್ಷಣೆ ಮಾಡಬೇಕಾಗಿತ್ತೋ ಅಷ್ಟರಮಟ್ಟಿಗೆ ಅದರ ರಕ್ಷಣೆ ಆ ಅರಣ್ಯ ಇಲಾಖೆಯಿಂದ ಆಗುತ್ತಿಲ್ಲ. ಇದರ ಜೊತೆಗೆ ಕಾಡಿನ ದುರುಪಯೋಗವನ್ನೂ ಅವರು ತಪ್ಪಿಸಿಲ್ಲ. ಈ ಎಲ್ಲ ಕಾರಣಗಳಿಂದ ಮಲೆನಾಡಿನಲ್ಲಿದ್ದ ವನಸಂಪತ್ತೆಲ್ಲಾ ಹಾಳಾಗುತ್ತ ಬಂದುದರಿಂದಲೇ ಈಗ ಅಲ್ಲೆಲ್ಲಾ ನಾಲ್ಕಾರು ಇಂಚು ಮಳೆ ಕ್ರಮೇಣ ಕಡಮೆಯಾಗುತ್ತಾ ನಡೆದಿದೆ. ಹೀಗೆ ಕಾಡು ನಾಶವಾಗುತ್ತಿರುವುದರಿಂದ ಆ ಮಲೆನಾಡು ಇಂದು ನಮ್ಮ ಬೈಲು ಸೀಮೆಗೆ ಸರಿಸಮಾನವಾಗುತ್ತಾ ಬಂದಿದೆ. ಹೀಗೆಯೇ ಇನ್ನೂ ಕೊಂಚಕಾಲ ನಡೆದರೆ ಮಲೆನಾಡು ಕೊನೆಗೆ ಬೆಂಗಾಡಾಗುವ ಕಾಲ ಒದಗಿದರೂ ಒದಗಬಹುದು; ಅಂಥ ಸಂಭವ ಬಂದುಹೋಗಿದೆ.

ಈ ಕಾಡುಗಳಿಂದ ದೇಶಕ್ಕೆ ಆಗತಕ್ಕ ಉಪಕಾರಗಳು ಬಹಳ ಮಹತ್ತರವಾದವುಗಳು. ಇವು ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸುತ್ತವೆ, ಪ್ರಕೃತಿ ಸೌಂದರ್ಯವನ್ನು ಹೆಚ್ಚಿಸುತ್ತವೆ, ಏಲಕ್ಕಿ, ಕಾಫಿ ಮುಂತಾದ ಬಹು ಬೆಲೆಬಾಳತಕ್ಕ ಬೆಳೆಯನ್ನು ಬೆಳೆಯಲು ಮತ್ತು ತಂಪನ್ನು ಉಂಟುಮಾಡುವ ಮೂಲಕ ಬಹಳ ಸಹಕಾರಿಗಳಾಗಿವೆ, ಭೂಮಿಯನ್ನು ಫಲವತ್ತಾಗಿ ಮಾಡಲು ಸಹಾಯಕವಾಗಿವೆ, ಭೂಮಿಯಲ್ಲಿರತಕ್ಕ ತಂಪನ್ನು ಕಾಪಾಡುತ್ತವೆ, ಹವಾಮಾನವನ್ನು ಉತ್ತಮಗೊಳಿಸುತ್ತವೆ. ಹೀಗೆ ಇಷ್ಟೆಲ್ಲಾ ಅನುಕೂಲ ನಮಗೆ ಈ ಕಾಡುಗಳಿಂದ ಲಭಿಸುತ್ತಿದೆ. ಇಷ್ಟೇ ಅಲ್ಲದೆ ಪ್ರಪಂಚದಲ್ಲಿರತಕ್ಕ ಹೆಸರುವಾಸಿ ಪಡೆದ ತಜ್ಞರುಗಳು ಪ್ರಪಂಚದ ಒಟ್ಟು ಭೂವಿಸ್ತೀರ್ಣದಲ್ಲಿ ದೇಶದ ಕ್ಷೇಮಾಭಿವೃದ್ಧಿಗೆ ಈ ಕಾಡುಗಳು ಒಟ್ಟು ಭೂಭಾಗದಲ್ಲಿ ಶೇಕಡ 25 ರಷ್ಟಾದರೂ ಇರಲೇಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇಂಥ ಅಮೂಲ್ಯವಾದ ಕಾಡನ್ನು ಅಭಿವೃದ್ಧಿಪಡಿಸತಕ್ಕ ಸಂಬಂಧವಾಗಿ ಒಂದು ಸರಿಯಾದ ಕ್ರಮದಲ್ಲಿ ಸಸಿಗಳನ್ನು ಬೆಳಸಿ, ಅವುಗಳನ್ನು ಕಾಡಿನ ನಾನಾ ಭಾಗಗಳಲ್ಲಿ ನಾಟಿ ಹಾಕಿ, ಅವುಗಳನ್ನು ಬೆಳೆಸುವಂಥ ಕೆಲಸಗಳಾವವೂ ಸರಿಯಾಗಿ ನಡೆಯುತ್ತಿಲ್ಲ. ಈಗ ಈ ಕಾಡುಗಳ ಅಭಿವೃದ್ಧಿಗಾಗಿ ನಾವು ಎಷ್ಟು ಲಕ್ಷಾಂತರಗಟ್ಟಲೆ ಖರ್ಚು ಮಾಡುತ್ತಿದ್ದೇವೋ ಅಷ್ಟಕ್ಕೆ ಸರಿತೂಗುವಷ್ಟು ಪ್ರಯೋಜನ ನಮಗೆ ಬರುತ್ತಿಲ್ಲ. ಸಾಧಾರಣವಾಗಿ ಯಾರು ಕೇವಲ ಮನೆಮುಟ್ಟುಗಳಿಗಾಗಿ ಇದನ್ನು ಉಪಯೋಗಿಸಬೇಕಾಗಿರುತ್ತದೋ ಅಂಥವರಿಗೆ ನಾಟ ಸರಬರಾಯಿ ಆಗದೆ ಅವರಿಗೆ ಆ ಸಾಮಾನುಗಳನ್ನು ಒದಗಿಸಲು ಬಹಳ ಕಷ್ಟಕ್ಕೆ ಬಂದಿದೆ. ಹೀಗೆ ದೇಶದಲ್ಲಿ ಜನರಿಗೆ ಈ ಮರಮುಟ್ಟುಗಳ ಅಭಾವವಿರುವಾಗ, ಸರ್ಕಾರದವರು ಸಾರ್ವತ್ರಿಕವಾಗಿ ಸಹಸ್ರಾರು ರೂಪಾಯಿಗಳ ನಾಟಾವನ್ನು ತಮ್ಮ ಲಾಭಕ್ಕಾಗಿ ಬೇರೆ ಕಡೆಗೆ ಸಾಗಿಸುತ್ತಿದ್ದಾರೆ. ಅನೇಕ ಜನರು ಮನೆಯ ಉಪಯೋಗಕ್ಕೆ ಬೇಕಾಗುವ ನಾಟಾಗಳೂ ಮತ್ತು ಮರಮುಟ್ಟುಗಳೂ ದೊರೆಯದೇ ಹೋಗಿ ಇನ್ನೂ ಕಟ್ಟಡ ಪೂರೈಸದೆ ಹಾಗೆಯೇ ಖಾಲಿಬಿಟ್ಟಿರುವ ನಿದರ್ಶನಗಳು ಬೇಕಾದಷ್ಟಿವೆ. ಕೇವಲ ಲಾಭದಾಯಕದ ಒಂದು ಪ್ರಶ್ನೆಗಾಗಲಿ ಅಥವಾ ದೇಶದ ಆದಾಯವನ್ನು ಹೆಚ್ಚುಮಾಡಿಕೊಳ್ಳಬೇಕೆಂಬ ಪ್ರಶ್ನೆಗಾಗಲಿ ನಮ್ಮ ತೀವ್ರಗಮನವನ್ನು ಕೊಡದೆ, ಇಂಥಾ ದೊಡ್ಡದೊಡ್ಡ ಕಾಡುಗಳನ್ನೆಲ್ಲಾ ಹೊರಗಡೆ ಲಾಭ ಸಂಪಾದನೆಗಾಗಿ ಕಡಿದು ಹಾಕದೆ, ಈ ವನದಿಂದ ಬರುವ ಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಹಿಂದಿನಿಂದಲೂ ಏನೊಂದು ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೋ ಅದನ್ನು ಇನ್ನು ಮುಂದಕ್ಕೆ ನಿಲ್ಲಿಸಿ, ಮನೆಗಳಲ್ಲಿ ಉಪಯೋಗದ ಬಗ್ಗೆ ಅದರ ಸೌದಯನ್ನು ಉಪಯೋಗಿಸದೆ, ಅದಕ್ಕೆ ಬದಲಾಗಿ ಯಾವುದಾದರೂ ಬೇರೊಂದು ರೀತಿಯ ಉಪಾಯವನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಜನರಿಗೆ ಉಂಟುಮಾಡಿಕೊಟ್ಟು ಈ ಕಾಡನ್ನು ನಾಶವಾಗದಂತೆ ತಡೆಗಟ್ಟಿದರೆ ಇದರಿಂದ ದೇಶಕ್ಕೆ ಉನ್ನತವಾದ ಉಪಯೋಗವಾಗುತ್ತದೆಂದು ಹೇಳಿ ನಾನು ಇದನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಆರ್. ನಾಯ್ಡುರವರು (ಮಲ್ಲೇಶ್ವರಂ).—ಅಧ್ಯಕ್ಷರೇ, ಈ ಅರಣ್ಯ ಸಂಪತ್ತನ್ನು ಹೆಚ್ಚುಮಾಡಬೇಕೆಂದು ನಮ್ಮ ಸ್ನೇಹಿತರಾದ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಈಗ ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ನೀಡುತ್ತಾ, ಒಂದೆರಡು ಅಂಶಗಳನ್ನು ಈ ಸಭೆಯ ಮುಂದಿಡಲು ಇಷ್ಟಪಡುತ್ತೇನೆ.

ಅರಣ್ಯ ಸಂಪತ್ತನ್ನು ಅಭಿವೃದ್ಧಿಮಾಡಬೇಕೆಂದು ಹೇಳುತ್ತಿರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಒಂದು ಸಂಪ್ರದಾಯ. ಇವುಗಳಿಂದ ದೇಶಕ್ಕೆ ಎಷ್ಟರಮಟ್ಟಿನ ಉಪಕಾರವಾಗುತ್ತಿದೆಯೆಂಬುದರ ಬಗ್ಗೆ ಎಲ್ಲಾ ವಿಜ್ಞಾನ ಶಾಸ್ತ್ರಜ್ಞರೂ ಮತ್ತು ಈ ಸಭೆಯ ಅನೇಕ ಮಾನ್ಯ ಸದಸ್ಯರೂ ಈಗಾಗಲೇ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಕೆಲವು ಮಹನೀಯರು ಈ ಕಾಡುಗಳು ದಿನೇ ದಿನೇ ನಶಿಸಿಹೋಗುತ್ತಿರುವುದಕ್ಕೆ ಕಾರಣ ಏನೆಂದರೆ ಈ

(ಶ್ರೀ ವಿ. ಆರ್. ನಾಯ್ಡುಯವರು.)

ಕಾಡುಗಳನ್ನೆಲ್ಲಾ ಬೆಂಗಳೂರಿನಲ್ಲಿರತಕ್ಕ ಪ್ರಜೆಗಳಿಗೆ ಅದರಲ್ಲೂ ದಿನೇ ದಿನೇ ಹೋಟೆಲ್ ಸಂಖ್ಯೆಗಳು ಹೆಚ್ಚುತ್ತಿರುವಂಥ ಈ ಪ್ರದೇಶಕ್ಕೆ ಸೌದೆಯನ್ನು ಒದಗಿಸುವುದಕ್ಕಾಗಿ, ಕಡಿಯುತ್ತಾ ಬಂದ ಕಾರಣ ಕಾಡುಗಳು ಹಾಳಾಗಿ ಹೋಗಲು ಅವಕಾಶವಾಗಿದೆಯೆಂದು ಹೇಳಿದರು. ಆದರೆ ಕೇವಲ ಬೆಂಗಳೂರಿನಲ್ಲಿರತಕ್ಕ ಹೋಟಲುಗಳಿಗಾಗಿಯೇ ಆ ಕಾಡುಗಳೆಲ್ಲಾ ಹಾಳಾಗಿಲ್ಲ. ಅದಕ್ಕೆ ಇನ್ನೂ ಅನೇಕ ಕಾರಣಗಳಿವೆ. ಹಿಂದೆ ನಮ್ಮ ದೇಶದಲ್ಲಿ ಜನಸಂಖ್ಯೆ ಬಹಳ ಕಡಮೆ ಇತ್ತು. ಈಗ ಅದು ಜಾಸ್ತಿಯಾಗಿದೆ. ಮತ್ತೊಂದು ಕಡೆ ಕಾಡು ದಿನ ದಿನಕ್ಕೂ ಎಷ್ಟರಮಟ್ಟಿಗೆ ಅಭಿವೃದ್ಧಿ ಆಗಬೇಕಾಗಿತ್ತೋ ಅದು ಸರಿಯಾಗಿ ಆಗದೆ ಅರಣ್ಯ ಸಂಪತ್ತು ಹೆಚ್ಚಾಗಲು ಅವಕಾಶವಿಲ್ಲವಾಗಿದೆ. ಇದರ ಜೊತೆಗೆ ಒಂದು ಮನೆಯಲ್ಲಿ 10 ಜನಗಳಿದ್ದ ಕಡೆ ಈ ದಿವಸ 25 ಜನಗಳಾಗಿದ್ದಾರೆ. ಒಂದು ಮೂಟೆ ಇದ್ದಿಲು ಸುಡುತ್ತಿದ್ದ ಮನೆಗಳಲ್ಲಿ ಇಂದು ಮೂರು ಮೂರು ಮೂಟೆ ಇದ್ದಿಲು ಖರ್ಚಾಗುತ್ತಿದೆ. ಈ ಕಾರಣಗಳಿಂದ ಕಾಡು ದಿನೇ ದಿನೇ ಹಾಳಾಗುವುದಕ್ಕೆ ದಾರಿಯಾಯಿತು. ಆದುದರಿಂದ ನಮಗೆ ಇಂದು ಕೃತಕ ಮಳೆಯ ಅವಶ್ಯಕತೆ ಅಗತ್ಯವಾಗಿರುತ್ತೆ. ಕೆಲವು ತಿಂಗಳ ಹಿಂದೆ ಕೆಲವು ಪತ್ರಿಕೆಗಳಲ್ಲಿ ತಿಳಿಸಿದ್ದ ಪ್ರಕಾರ ಮತ್ತು ಅನೇಕ ಮಹನೀಯರು ಹೇಳುತ್ತಿರುವ ಹಾಗೆ, ನಮ್ಮ ಸರ್ಕಾರದವರೂ ಕೂಡ ಈ ಕೃತಕ ಮಳೆಯನ್ನು ಉಂಟುಮಾಡುವ ಬಗ್ಗೆ ಪರೀಕ್ಷೆಗಾದರೂ ಒಂದೆರಡು ಕಡೆ ಪ್ರಯತ್ನ ಮಾಡಿ ನೋಡಿದರೆ ಇದರಿಂದ ನಮಗೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಮರಗಳನ್ನು ಕಡಿದುಹಾಕಿದ ನಂತರ ಅಲ್ಲಿ ಸಸಿಗಳನ್ನು ಹಾಕುವುದು ಮತ್ತೆ ಕಡಮೆಯಾಗುತ್ತಾ ಬಂದಿದೆ. ನಮ್ಮ ಪಕ್ಕದ ಪ್ರಾಂತವಾದ ಮದ್ರಾಸ್ ಸೀಮೆಯಲ್ಲಿ ರಸ್ತೆಯಲ್ಲಿ ವಿಶೇಷವಾಗಿ ಮರಗಳನ್ನು ಬೆಳೆಸುತ್ತಿರುವುದರಿಂದ ಅಲ್ಲಿ ಪ್ರಯಾಣಿಕರಿಗೆ ಅನುಕೂಲವಾಗಿರುವುದರ ಜೊತೆಗೆ ಸರ್ಕಾರಕ್ಕೂ ಅದರಿಂದ ಹೆಚ್ಚು ಪ್ರಮಾಣದಲ್ಲಿ ಆದಾಯ ಬರುತ್ತಿದೆಯೆಂದು ನನಗೆ ತಿಳಿದು ಬಂದಿದೆ. ಆದರೆ ನಮ್ಮ ಸಂಸ್ಥಾನದಲ್ಲಿ ಇಂಥ ಸಾಲು ಮರಗಳ ಸಂಖ್ಯೆ ಬಹಳ ಕಡಮೆಯಾಗಿರುತ್ತದೆ. ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಅದು ಗೊತ್ತಿಲ್ಲ. ಅಂತೂ ಒಂದು ಮರ ಕಡಿದರೆ, ಅಲ್ಲಿ ಒಂದು ಸಸಿಹಾಕುವಂತೆ ನಿರ್ಬಂಧ ಹಾಕಬೇಕು. ಈಗ ಭದ್ರಾವತಿಯ ಕಾರ್ಖಾನೆ ಉಪಯೋಗಕ್ಕಾಗಿ ಬಹಳ ಕಾಡನ್ನು ಕಡಿಯುತ್ತಿದ್ದಾರೆ. ಅದನ್ನು ತಪ್ಪಿಸಿದರೆ ಆರಣ್ಯದ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಆದಷ್ಟು ಬೇಗ ತಾವು ಈ ಅರಣ್ಯಗಳನ್ನು ರಕ್ಷಣೆಮಾಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಪೂರೈಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು (ಚಿಕ್ಕಮಗಳೂರು).—ಅಧ್ಯಕ್ಷರೇ, ಈಗ ಸಭೆಯ ಮುಂದೆ ಬಂದಿರತಕ್ಕ ನಿರ್ಣಯವನ್ನು ನಾನು ಅನುಮೋದಿಸುತ್ತ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಮುಖ್ಯವಾಗಿ ನಮ್ಮ ಮಲೆನಾಡಿನ ವಿಚಾರವನ್ನು ನಾನು ತಿಳಿಸುತ್ತೇನೆ. ನಮ್ಮ ಮಲೆನಾಡಿನಲ್ಲಿ ಎಷ್ಟು ಅರಣ್ಯ ಸಂಪತ್ತಿತ್ತೋ ಮತ್ತು ಅದು ಎಷ್ಟು ಪ್ರಕೃತಿ ಸೌಂದರ್ಯಮಯವಾಗಿತ್ತೋ ಅದೆಲ್ಲವೂ ಈ ದಿವಸ ಸಂಪೂರ್ಣವಾಗಿ ತೊಲಗಿ ಹೋಗಿರುವ ಹಾಗೆ ಕಾಣುತ್ತಿದೆ. ಕಾರಣವೇನೆಂದರೆ—ಈ ದಿವಸ ನಾವು ಅಲ್ಲಿಂದ ಅನೇಕ ಮರಗಳನ್ನು ಕಡಿದು ತಂದು ಸೌದೆಗಾಗಿ ಉಪಯೋಗಿಸುತ್ತಿರುವುದೇ ಆಗಿದೆ. ಅಲ್ಲದೆ ಅನೇಕ ಕಡೆ ಇತ್ತೀಚೆಗೆ ಈ ವನಮಹೋತ್ಸವ ಆಚರಣೆಯಲ್ಲಿದ್ದರೂ ನೈಜವಾದ ಪ್ರಕೃತಿ ನಿಯಮವನ್ನು ಮೀರುವಂತಿಲ್ಲ. ತತ್ಪರಿಣಾಮವಾಗಿ ದೇಶದಲ್ಲಿ ಮಳೆಯ ಅಭಾವ ಪರಿಸ್ಥಿತಿಯುಂಟಾಯಿತು; ನಮ್ಮ ಮಲೆನಾಡಿನಲ್ಲಿ ಕೂಡ ಇತ್ತೀಚೆಗೆ ಮಳೆಯು ನಿಂತು ಹೋಗಿದೆ. ಪುನರ್ವಸು, ಪುಷ್ಯ ಇತ್ಯಾದಿ ಮಳೆಗಳೊಂದೂ ಈಗ ಬೀಳುತ್ತಲೇ ಇಲ್ಲ. ಬಾಬಾಬುಡನ್‌ಗಿರಿಯಿಂದ ಎಂದರೆ ಯಾವುದನ್ನು ನಾವು ಸಂಜೀವಿನೀ ಪರ್ವತ ಎಂದು ಕರೆಯುತ್ತಿದ್ದೇವೋ ಅಂಥ ಕಡೆಯಲ್ಲಿ ಸಹ ಈಗ ಅನೇಕ ಮರಗಳನ್ನು ಕಡಿದು ತಂದು ಸೌದೆಗಾಗಿ ಸರಬರಾಯಿ ಮಾಡುತ್ತಿದ್ದಾರೆ. ಹೀಗೆ ಅಲ್ಲಿರತಕ್ಕ ಬಹುಬೆಲೆಬಾಳುವ ಗಿಡ ಮೂಲಿಕೆಗಳಿಗೆ ಸಂಬಂಧಪಟ್ಟ ಮರಗಿಡಗಳನ್ನು ಹಾಳು ಮಾಡುವ ಬದಲು ಅಲ್ಲೇ ಒಂದು ಆಯುರ್ವೇದ ಆಶ್ರಮವನ್ನಾದರೂ ಏರ್ಪಾಡು ಮಾಡಿದ್ದರೆ ದೇಶಕ್ಕೆ ಎಷ್ಟೋ ಉಪಕಾರವಾಗುತ್ತಿತ್ತು. ಅಂಥಾ ದ್ದಕ್ಕೆ ಇದ್ದ ಅವಕಾಶವನ್ನು ತಪ್ಪಿಸಿ ಈ ದಿವಸ ಬಹಳ ಅನಾನುಕೂಲ ಮಾಡಿದ್ದಾರೆ.

ಇನ್ನು ಮಲೆನಾಡಿನ ಕಾಡಿನಲ್ಲಿ ಹೇರಳವಾಗಿ ದೊರೆಯುವ ಸಾಫ್ಟ್ ವುಡ್ (ಮೃದುವಾದ ಮರ) ಇದೆ. ಅಂಥ ಮರಗಳನ್ನು ಹೀಗೆ ಸೌದೆಗಾಗಿ ಉಪಯೋಗಿಸುವುದರ ಬದಲು ಉತ್ತರ ಇಂಡಿಯಾದ ಶಿವಕಾಶಿ, ವಿಷ್ಣುಕಾಶಿಗಳಲ್ಲಿ ಗೃಹಕೈಗಾರಿಕೆಗಳನ್ನು ಸ್ಥಾಪಿಸಿರುವಂತೆ ಅಲ್ಲೊಂದು ಕೈಗಾರಿಕೆಯನ್ನು ತಂದಿದ್ದರೆ, ಆ ಪ್ರದೇಶದ ಹಳ್ಳಿಯ ಜನರು ತಮ್ಮ ಸ್ವಕಾರ್ಯಗಳನ್ನು ಮಾಡಿಕೊಂಡು ತಮಗೆ ವಿರಾಮವಿದ್ದ ಕಾಲದಲ್ಲಿ ಅವರೂ ಮತ್ತು ಅಲ್ಲಿನ ಸ್ತ್ರೀ ವರ್ಗದವರೂ ಕೆಲಸಮಾಡುವಂತೆ ಒಂದು ಕೈಗಾರಿಕಾ ಏರ್ಪಾಡನ್ನು ಮಾಡಿದ್ದರೆ, ಅದರಿಂದ ಬಡಹೆಂಗಸರಿಗೆ ದಿನಕ್ಕೆ ಒಂದು ರೂಪಾಯಿ ಕೂಲಿಯಾದರೂ ಸಿಕ್ಕಿ ಅವರು ಸುಖವಾಗಿ ಜೀವನಮಾಡಲು ಅನುಕೂಲವಾಗುತ್ತಿತ್ತು, ಹಿಂದುಳಿದ ಪ್ರದೇಶದಲ್ಲಿರತಕ್ಕವರಿಗೊಂದು ಉತ್ತೇಜನ ಸಿಕ್ಕಿದಂತಾಗುತ್ತಿತ್ತು, ದೇಶಕ್ಕೂ ಒಂದು ಉಪಕಾರವಾಗುತ್ತಿತ್ತು. ಆದರೆ ತಾವು ಹಾಗೆ ಯಾವುದನ್ನೂ ಮಾಡದೆ ಇದೇ ರೀತಿ ಆ ಮಲೆನಾಡಿನ ಕಾಡುಗಳನ್ನು ದಿನೇ ದಿನೇ ಕಡಿಯುತ್ತಿದ್ದರೆ ಇನ್ನು ಕೆಲವು ಕಾಲದಲ್ಲೇ ನಾವೂ ಕೆಟ್ಟು ಹೋಗಿ ನಮ್ಮ ದೇಶವೂ ಹೀನಸ್ಥಿತಿಗೆ ಬರುತ್ತದೆಂದು ನಾನು ಸಾರಿ ಹೇಳುತ್ತೇನೆ. ಆದುದರಿಂದ ತಾವು ಕಾಡಿಗೆ ಕೂಡಲೆ ರಕ್ಷಣೆಯನ್ನು ನೀಡಿ ಅದನ್ನು ಅಭಿವೃದ್ಧಿಪಡಿಸಲು ಎಲ್ಲ ಪ್ರಯತ್ನಗಳನ್ನೂ ಕೈಕೊಳ್ಳಬೇಕೆಂದು ಸೂಚಿಸುತ್ತೇನೆ. ತಾವು ಈ ಮುಖ್ಯ ಅಂಶವನ್ನು ತಮ್ಮ ಗಮನಕ್ಕೆ ಹಾಕಿಕೊಳ್ಳದೆ ಈ ಕಾಡುಗಳ ರಕ್ಷಣೆಗೆ ಒಂದು ತಕ್ಕ ವ್ಯವಸ್ಥೆಮಾಡದೆ ಹೋದರೆ ಈ ದಿವಸ ಕೋಲಾರ ಜಿಲ್ಲೆಗೆ ಏನು ರೋಗ ಪ್ರಾಪ್ತಿಯಾಗಿದೆಯೋ ಆ ಕ್ಷಾಮ ರೋಗದ ಸೋಂಕು ನಮಗೂ ಅಂಟೀತು. ಆದಕಾರಣ ಇಂಥ ಭಯಂಕರ ಪರಿಸ್ಥಿತಿಯನ್ನು ತಡೆಗಟ್ಟಲು ಈ ಕಾಡುಗಳನ್ನು ತಾವು ರಕ್ಷಣೆ ಮಾಡುವುದಲ್ಲದೆ ಅವುಗಳನ್ನು ಇನ್ನೂ ಹೆಚ್ಚು ಹೆಚ್ಚು ಬೆಳೆಸುವಂತೆ ಮಾಡಬೇಕೆಂದೂ, ಅದಕ್ಕೆ ತಕ್ಕ ಪ್ರೋತ್ಸಾಹವನ್ನು ಜನರಿಗೆ ಕೊಡಬೇಕೆಂದೂ ಹೇಳಿ ನಾನು ಈ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಟಿ. ನಾಗಪ್ಪನವರು (ತರೀಕೆರೆ).—ಕಾಡು ಕಿಚ್ಚು ಜಾಸ್ತಿಯಾಗಿ ಬೀಳುವುದನ್ನು ತಪ್ಪಿಸಿದರೆ ಅನುಕೂಲವಾಗುತ್ತದೆಯೆಂದು ತಿಳಿಸುತ್ತೇನೆ.

Sri T. CHANNIAH.—Sir, there is no difference of opinion between the mover

of the cut motion and the Government in regard to the preservation of the forest and afforestation. The forest produces materials for some of the most vital needs of mankind and for which no complete substitutes have been found out. They yield in return materials and money. Consequently they constitute wealth and property. The Mysore Forest Act serves this purpose well. It lays down the procedure to be followed for constituting reserve forests, for enquiring into the rights and privileges, outlining the legislative management of Forests and measures for protection of forest products in transit and imposing penalties on persons who infringe the rules. The total area of the forest is only 15 per cent of the total land area, which is below the international standard of 25 per cent. Any move for reservation of more areas is being met with stout opposition by the raiyats and in view of the encroachment made under the Grow More Food Scheme it has not been possible to extend the area. On the other hand there has been a persistent demand from the public to extend and to release for cultivation large tracts of State Forest, particularly in the Maidan area. Consistent with the long range policy of the Government, such representations are always liberally considered. The Forests are mostly worked under sanctioned working plans which provide for the extraction of the maximum quantity of forest produce consistent with the permanent maintenance of the area as a forest and for further development of the area. More than 2,000 square miles of the forest are worked under the working plans and the rest under the provisional scheme. The policy of afforestation is steadily pursued. Apart from the need for replacing the quantities extracted annually, large areas are actually raised by plantations. Both under the Post-war Scheme of afforestation and regular departmental operation nearly 4,000 acres are stocked with forest growing specimens and nearly 6,000 acres are annually planted with teak. The standard of All India policy in regard to afforestation is to form an acre of plantation for every 1,200 cubic feet extracted. Compared with this standard Mysore ranks amongst the foremost of the progressive countries, in that plantations form an average of one acre for every 400 cubic feet extracted. Moreover Wood Preservation Plant is in operation for anti-septical treatment of railway sleepers and electric transmission poles. Materials treated at the plant are sleepers, transmission poles, balgi poles and timber. The plant has an annual capacity of treating 1,25,000 feet. Two saw mills are run by the Department to make use of the inferior quality timber which could not otherwise find a sale in the market. The quantity of sawn materials from these two mills is nearly 1,50,000 cubic feet per year. In order to make use of the varieties of timber which were otherwise going to waste, and to lessen the strain on superior timber particularly teak, a Wood Working Factory has been established at Tumkur which at present is catering to the needs of the educational institutions in the State. Large areas of hard forests are now being systematically worked for supply of soft wood and forwarding them to match factories and so on.

Sri K. PUTTASWAMY.—That is exploitation of forest. The Hon'ble Member is only pointing out how forest is being exploited.

Sri T. CHANNIAH.—That is how we are getting wealth from the forest. That is my explanation. Also we are undertaking to a great extent the plantation of these trees every year regularly at a cost of nearly 2 lakhs of rupees or so. The mover has said that the preservation of forest wealth and afforestation have to be maintained by the Department very scrupulously. We have been doing and implementing what my Hon'ble friend has said. I hope my friend will, in the light of the information I have furnished just now, withdraw his cut motion.

Sri K. PUTTASWAMY.—I seek the leave of the House to withdraw the cut motion.

The cut motion was, by leave, withdrawn.

ಶ್ರೀ ಟಿ. ಎಸ್. ಮೂಡಲಗಿರಿಗೌಡರು (ಕುಣಿಗಲು).— ಸ್ವಾಮಿ,......................

Janab J. MOHAMED IMAM.—On a point of information. ಡೆಪ್ಯುಟಿ ಸ್ಪೀಕರ್ ಚುನಾವಣೆಯಾದರೆ ಅಭಿನಂದನೆ ಗಳನ್ನರ್ಪಿಸುವುದಕ್ಕೆ ಅವಕಾಶಕೊಡಬೇಕು.

Mr. SPEAKER.—This is the last cut motion under Forest. Let this be over.

Working of the Central Wood working and furniture workshop at Tumkur.

ಶ್ರೀ ಟಿ. ಎಸ್. ಮೂಡಲಗಿರಿಗೌಡರು (ಕುಣಿಗಲು).—ಸ್ವಾಮಿ, ನನ್ನ ಖೋತಾ ನಿರ್ಣಯವು ಈ ರೀತಿಯಿದೆ –

> "That the demand under the head '10. Forest' for Rs. 25,12,000 be reduced by Rs. 100 (to raise a debate on the unsatisfactory working of Central Wood Working and Furniture Workshop at Tumkur)"

ಈ ಫ್ಯಾಕ್ಟರಿಯನ್ನು ಯಾವ ಉದ್ದೇಶದ ಮೇಲೆ ಅಲ್ಲಿ ತೆರೆಯಲಾಯಿತು ಅಂದರೆ, ನನಗೆ ತಿಳಿದಮಟ್ಟಿಗೆ, ತುಮಕೂರು ಜಿಲ್ಲೆಯಲ್ಲಿ ಯಾವ ಒಂದು ಕೈಗಾರಿಕೆ ಕ್ಷೇತ್ರವೂ ಕೂಡ ಇಲ್ಲ, ಆ ಜಿಲ್ಲೆಯನ್ನು ಕೈಗಾರಿಕಾ ಕ್ಷೇತ್ರದಿಂದ ದೂರಮಾಡಿಟ್ಟಿದೆ ಎಂಬ ವಾದ ಬಹಳ ದಿವಸಗಳಿಂದ ಇದ್ದುದರಿಂದ ಅಲ್ಲಿ ಸದ್ಯಕ್ಕೆ ಈ ಒಂದು ಫ್ಯಾಕ್ಟರಿಯನ್ನು ತೆರೆದು ಜನರನ್ನು ತೃಪ್ತಿಪಡಿಸೋಣ ವೆಂದು ಮೂರು ವರ್ಷಗಳ ಹಿಂದೆ ಈ ಕೈಗಾರಿಕಾ ಕ್ಷೇತ್ರವನ್ನು ತೆರೆದರು. ಅದಕ್ಕೆ ಕಟ್ಟಡ ಇತ್ಯಾದಿ ಎಲ್ಲಾ ಖರ್ಚುಗಳಿಗೆ ಇದುವರೆಗೆ ಲಕ್ಷಾಂತರ ರೂಪಾಯಿ ಗಳನ್ನು ಖರ್ಚುಮಾಡಿದೆ. ಹಾಗೆ ಲಕ್ಷಾಂತರ ರೂಪಾ ಯಿಗಳನ್ನು ಖರ್ಚುಮಾಡುವಾಗ ಜನರು ನಿರೀಕ್ಷೆಮಾಡಿ ದ್ದುದು ತುಮಕೂರು ಜಿಲ್ಲೆಯಲ್ಲಿರುವ ರೈತಾಪಿ ಜನ ರಿಗೆ ಬೇಕಾದಂಥ ಮರಮುಟ್ಟುಗಳು ಇತ್ಯಾದಿ ಎಲ್ಲಾ ಸಾಮಗ್ರಿಗಳೂ ಕೂಡ ಇದರಿಂದ ತಮಗೆ ಸುಲಭ ದರ ದಲ್ಲಿ ಮತ್ತು ಅಪೇಕ್ಷಿಸಿದ ಕಾಲದಲ್ಲಿ ದೊರೆಯುತ್ತದೆ ಎಂದು. ಆ ನಿರೀಕ್ಷೆಯು ನಮ್ಮ ಜಿಲ್ಲೆಯ ಎಲ್ಲಾ ಜನ ಗಳಲ್ಲೂ ಮೂಡಿತ್ತು.

4-30 P.M.

ಆ ಕೈಗಾರಿಕಾ ಫ್ಯಾಕ್ಟರಿಯನ್ನು ಯಾವ ಉದ್ದೇ ಶಕ್ಕಾಗಿ ಸ್ಥಾಪಿಸಿದ್ದಾರೆ ಎಂಬುದು ಜನಗಳಿಗೆ ಗೊತ್ತಾಗುತ್ತಾ ಇಲ್ಲ. ಅಷ್ಟು ಹಣವನ್ನು ಖರ್ಚು ಮಾಡಿದ್ದರೂ ಕೂಡ ಅಲ್ಲಿಗೆ ಯಾವ ಮೆಷಿನರಿ ಒದಗಿಸ ಬೇಕಾಗಿತ್ತೋ ಅವುಗಳನ್ನು ಇದುವರೆಗೂ ಒದಗಿಸಿಲ್ಲ. ಮೂರು ವರ್ಷಗಳಿಂದಲೂ ಮೆಷಿನರಿ ಸಾಮಾನು ಬರುವ ನಿರೀಕ್ಷಣೆಯಲ್ಲದೆ. ಅಲ್ಲದೆ ಆ ಫ್ಯಾಕ್ಟರಿಯ ವೈಶಿಷ್ಟ್ಯ ಏನು, ಅಲ್ಲಿ ಎಂತಹ ಸಾಮಾನು ತಯಾರಾ ಗುತ್ತಾ ಇದೆ ಎಂದರೆ, ಬರೀ ಬೆಂಚುಗಳು ಮತ್ತು ಸ್ಟೂಲುಗಳು, ಇವೆರಡನ್ನು ಬಿಟ್ಟರೆ ಇನ್ನಾವ ಸಾಮಾನೂ ಆ ಫ್ಯಾಕ್ಟರಿಯಲ್ಲಿ ತಯಾರಾಗುತ್ತಾ ಇಲ್ಲ. ಸ್ವಾಮಿ, ಅಮಿಲಿಯೋರೇಷನ್ ಫಂಡು ಎಂಬುದು ನಮ್ಮ ಜಿಲ್ಲೆಗೆ ಸಾಧಾರಣವಾಗಿ ನಾನು ಕಂಡ ಹಾಗೆ 1½, 2 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಬರುತ್ತಾ ಇದೆ. ಆ ಹಣದಲ್ಲಿ ನಾವು ಏನು ಕಾರ್ಯಕ್ರಮವನ್ನು ಹಾಕಿ ಕೊಂಡು ಕೆಲಸಮಾಡಿಕೊಂಡು ಬಂದಿದ್ದೇವೆ ಎಂದರೆ ಅದರಿಂದ ಬಡ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊ ಡುವ ಉದ್ಯಮ ನಡೆದಿದೆ. ಆ ಮನೆಗಳಿಗೆ ಕಿಟಕಿ ಬಾಗಿಲುಗಳನ್ನು ಒದಗಿಸತಕ್ಕ ಜವಾಬ್ದಾರಿ ಸರ್ಕಾರದ ಹಣದಿಂದ ಆಗುತ್ತಾ ಇದೆ. ಅದಕ್ಕೆ ಬೇಕಾಗುವ ಕಿಟಕಿ, ಬಾಗಿಲುಗಳನ್ನು ಒದಗಿಸಬೇಕೆಂದು ಆ ಫ್ಯಾಕ್ಟ ರಿಯವರನ್ನು ಕೇಳಿದರೆ ಅವರು ಅದನ್ನು ಒದಗಿಸುವ ಪರಿಸ್ಥಿತಿಯಲ್ಲಿಲ್ಲ. ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ ರವರಿಗೆ ಹೋಗಿ ಅವರಿಂದ ಒಪ್ಪಿಗೆ ಪಡೆದು ಬಂದರೆ, ಅವರು ಯಾವ ದರದಲ್ಲಿ ಕೊಡುತ್ತೇವೆ ಎಂದು ಹೇಳು ತ್ತಾರೋ ಆ ದರದಲ್ಲಿ ತೆಗೆದುಕೊಳ್ಳುವುದಕ್ಕೆ ಒಪ್ಪಿದರೆ ಮಾತ್ರ ಒದಗಿಸಲಾಗುತ್ತದೆ, ಇಲ್ಲದೇ ಇದ್ದರೆ ಇಲ್ಲ ಎಂಬ ಉತ್ತರ ಬಂತು. ಆದರೂ ಸಹ ಪ್ರಯತ್ನವಾದರೂ ಕೂಡ ಮಾಡುತ್ತಾರೆಯೋ ಎಂದರೆ ಅದೂ ಮಾಡುವ ನಿರೀಕ್ಷಣೆ ಇಲ್ಲ. ಈ ಫ್ಯಾಕ್ಟರಿಯನ್ನು ತೆರೆದಂಥಾ ಉದ್ದೇಶವೇನು, ಜನಗಳಿಗೆ ಸಮಾಧಾನವನ್ನುಂಟು ಮಾಡುವುದಕ್ಕೆ ಫ್ಯಾಕ್ಟರಿಯನ್ನು ತೆರೆಯಲಾಯಿತೇ ಅಥವಾ ಜನಗಳಿಗೆ ಪ್ರಯೋಜನವಾಗಬೇಕು ಎಂಬ ನಿರೀಕ್ಷಣೆಯಿಂದ ತೆರೆಯಲಾಯಿತೇ ಎಂದರೆ, ಖಂಡಿತವಾ ಗಿಯೂ ಕೂಡ ಇಂದಿನ ದಿವಸ ಯಾವ ಪ್ರಯೋಜನವೂ ಕಂಡುಬರುತ್ತಾ ಇಲ್ಲ. ಅಲ್ಲಿ ಸಿಬ್ಬಂದಿಗೆ ಖರ್ಚಾಗು ತ್ತಾ ಇರತಕ್ಕ ಹಣ ಸುಮಾರು ¾ ಲಕ್ಷ ರೂಪಾಯಿ ಆಗಿದೆ. ಫಾರೆಸ್ಟ್ ಆಫೀಸರು ಅಥವಾ ಕೈಕೆಳಗಿರತಕ್ಕ ಗುಮಾಸ್ತರು ಇತ್ಯಾದಿ ಜನಗಳಿಗೆ ಕೊಡತಕ್ಕ ಈ ¾ ಲಕ್ಷ ರೂಪಾಯಿಗಳ ಹಣವನ್ನು ಖರ್ಚುಮಾಡುವುದಕ್ಕೆ ಆ ಫ್ಯಾಕ್ಟರಿ ತೆರೆದ ಹಾಗೆ ಕಾಣುತ್ತಾ ಇದೆಯೇ ಹೊರತು ಬೇರೆ ಪ್ರಯೋಜನ ಇಲ್ಲ. ಜನಗಳಿಗೆ ಮನೆ ಕಟ್ಟಿಕೊಳ್ಳಲು ಸಾಧಾರಣವಾಗಿ ಏನು ಒಂದು ಕಿಟಕಿ, ಬಾಗಿಲು ಮುಂತಾದುವುಗಳು ಬೇಕಾಗುತ್ತವೆಯೋ ಆ ಸಾಮಾನುಗಳು ಬೇಕಾಗಿದ್ದರೆ ಅವರು ಸಾಧಾರಣ ವಾಗಿ ಒಂದಕ್ಕೆ ಎರಡರಷ್ಟು ಬೆಲೆಯನ್ನು ಕೊಟ್ಟು ತಂದು ಮನೆಗಳನ್ನು ಕಟ್ಟಬೇಕು. ಫಾರೆಸ್ಟ್ ಇದ್ದರೂ ಫಾರೆಸ್ಟ್‌ನಲ್ಲಿ ಇರತಕ್ಕ ಮರಗಳನ್ನು ಇವೊತ್ತು ಪಟ್ಟಣ ಗಳಿಗೆ ಸೌದೆಗೆ ಉಪಯೋಗಿಸತಕ್ಕ ಒಂದು ಉದ್ಯಮ ದಲ್ಲಿ ತೊಡಗಿದ್ದೇವೆಯೇ ಹೊರತು ಆ ಮರಗಳಿಂದ ಉಪಯುಕ್ತವಾದ ಸಾಮಾನುಗಳನ್ನು ಇಂಥಾ ಫ್ಯಾಕ್ಟ ರಿಯ ಮೂಲಕ ಮಾಡಿಸಿ ಅವನ್ನು ಜನಗಳು ಉಪಯೋ ಗಿಸಿ ಒಳ್ಳೆಯ ಮನೆಗಳನ್ನು ಕಟ್ಟಿಕೊಂಡು ವಾಸಮಾ ಡಲು ಅನುಕೂಲವನ್ನು ಕಲ್ಪಿಸಿಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಬಂಡವಾಳವನ್ನು ಏತಕ್ಕಾಗಿ ಹಾಕಿ, ಅದರಿಂದ ಏನು ನಿರೀಕ್ಷಣೆ ಮಾಡಿದ್ದೀರಿ? ಈ ಸಾರಿ ಬಡ್ಜೆಟ್‌ನಲ್ಲಿ 65 ಸಾವಿರ ರೂಪಾಯಿ receipt side ತೋರಿಸಿದ್ದೀರಿ. ಮರವನ್ನು ಫಾರೆಸ್ಟ್ ಇಲಾಖೆಯವರು ಸಪ್ಲೈಮಾಡಿದರು ಎಂಬ ಭಾವನೆ ಬರುತ್ತದೆಯೇ ಹೊರತು, ಲಾಭ ಏನು ಎಂಬುದು ಗೊತ್ತಾಗುತ್ತಾ ಇಲ್ಲ. ಆದ್ದರಿಂದ ಲಾಭ ದೃಷ್ಟಿಯಲ್ಲಿಲ್ಲ ಎಂದು ನನಗೆ ಗೋಚರವಾಗುತ್ತಾ ಇದೆ. ಹೀಗೆ ಯಾವ ಒಂದು ಕೈಗಾರಿಕೆಯನ್ನು ತೆರೆದರೂ ಕೂಡ ಅದು ಲಾಭದಾ ಯಕವಾಗಿದೆಯೇ, ಅದರಿಂದ ಸಾಮಾನ್ಯ ಜನಗಳಿಗೆ ಎಷ್ಟುಮಟ್ಟಿಗೆ ಪ್ರಯೋಜನವಾಗಿದೆ ಎಂಬುದನ್ನು ನೋಡಬೇಕಾದುದು ನ್ಯಾಯ. ಈ ಫ್ಯಾಕ್ಟರಿಯಿಂದ ಯಾವ ಲಾಭ ನಿರೀಕ್ಷಣೆಯೂ ಇಲ್ಲ. ಮತ್ತು ಅದರಿಂದ ಸಾಮಾನ್ಯ ಜನಗಳಿಗೆ ಪ್ರಯೋಜನವೂ ಇಲ್ಲ. ಬಂಡ

ವಾಳ ಹಾಕಿರತಕ್ಕ ಈ ಫ್ಯಾಕ್ಟರಿಯನ್ನು ಜಾಗ್ರತೆ ಉತ್ತಮಪಡಿಸತಕ್ಕ ಮಾರ್ಗಕ್ಕೆ ಇವೊತ್ತಿನವರೆಗೂ ಕೈಹಾಕಿಲ್ಲ. ನಾನು ಹೇಳುವುದು ಬಂಡವಾಳವನ್ನು ಹಾಕಿದ್ದಾಗಿದೆ; ಫ್ಯಾಕ್ಟರಿಯನ್ನು ತೆರೆದದ್ದಾಗಿದೆ. ಉದ್ದೇಶ ಮುಚ್ಚಬೇಕೆಂದಲ್ಲ. ಆದಷ್ಟು ಜಾಗ್ರತೆ ಆ ಫ್ಯಾಕ್ಟರಿಯಿಂದ ಸಾಮಾನ್ಯ ಜನಗಳಿಗೆ ಉತ್ತಮವಾದ ಪ್ರಯೋಜನ ಸಿಕ್ಕಬೇಕು. ಈ ಒಂದು ದೃಷ್ಟಿಯಿಂದ ಈ ಕತ್ತರಿ ನಿರ್ಣಯವನ್ನು ತಂದಿದ್ದೇನೆ. ಈ ಫ್ಯಾಕ್ಟರಿಯಲ್ಲಿ ಸುಲಭವಾಗಿ ಯಾವ ದಿವಸ, ಯಾವ ಕಾಲದಲ್ಲಿ ಹೋದರೂ ಸಾಮಾನುಗಳು ಸಿಕ್ಕುತ್ತವೆ, ಎಂಬ ನಿರೀಕ್ಷಣೆ ಜನಗಳಿಗೆ ಇರಬೇಕು. ಇಷ್ಟಾಗಿ ತುಮಕೂರು ಜಿಲ್ಲೆಯ ಜನಗಳಿಗೆ ಅನುಕೂಲ ದೊರೆಯಲಿ ಎಂಬ ಉದ್ದೇಶದಿಂದ ಕತ್ತರಿ ನಿರ್ಣಯವನ್ನು ತಂದಿದ್ದೇನೆ. ಹೆಚ್ಚು ಮಾತನಾಡಬೇಕಾದ ಆವಶ್ಯಕತೆ ಕಂಡು ಬರುವುದಿಲ್ಲ. ಇದಕ್ಕೆ ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿನವರ ಸಲಹೆ ತೆಗೆದುಕೊಂಡಿದ್ದಾರೆಯೇ ಎಂಬುದು ಗೊತ್ತಿಲ್ಲ. ಫಾರೆಸ್ಟ್ ಇಲಾಖೆಯವರು ಫ್ಯಾಕ್ಟರಿ ತೆಗೆದಿದ್ದಾರೆ. ನಿಪುಣರ ಒಂದು ಸಲಹೆಯನ್ನು ತೆಗೆದುಕೊಂಡು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ತರಿಸತಕ್ಕ ಮರವನ್ನು ಯಾವ ರೀತಿ ಉತ್ತಮಪಡಿಸಬೇಕು, ಯಾವ್ಯಾವ ಸಾಮಾನುಗಳನ್ನು ಮಾಡಿದರೆ ಆ ಜಿಲ್ಲೆಯಲ್ಲಿ ಖರ್ಚಾಗುತ್ತದೆ ಮತ್ತು ಜನಗಳಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕೆಲವು ಕಾಲದ ಹಿಂದೆ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೆ ಕೆಲವು ಬೆಂಚುಗಳಿಗಾಗಿ ಆ ಫ್ಯಾಕ್ಟರಿಗೆ ಆರ್ಡರ್ ಕೊಟ್ಟಿದ್ದರು. ಆ ಮರ ಸಿಕ್ಕುವುದಿಲ್ಲ. ಆದ್ದರಿಂದ ಆ ಸಾಮಾನು ಮಾಡುವುದಕ್ಕಾಗುವುದಿಲ್ಲ ಎಂದು ಉತ್ತರ ಬಂತು. ಯಾವ ಸಾಮಾನು ಬೇಕು ಎಂದು ಕೇಳುತ್ತೇವೆಯೋ ಆ ಸಾಮಾನು ಸಿಕ್ಕುವುದಿಲ್ಲ. ಯಾವ ಸಾಮಾನು ಮಾಡುತ್ತಾ ಇದ್ದಾರೆಯೋ ಅದು ಮಾರ್ಕೆಟ್ಟಿನಲ್ಲಿರತಕ್ಕ ಇತರ ಸಾಮಾನುಗಳಿಗಿಂತ ಕನಿಷ್ಠ ದರ್ಜೆಯಲ್ಲಿದೆ. ಸೊಟ್ಟಪಟ್ಟ ಬೆಂಚುಗಳನ್ನು ತಯಾರುಮಾಡುತ್ತಾರೆ; ಆದರೆ ಬೆಲೆ ಮಾರ್ಕೆಟ್ಟಿಗಿಂತ ಹೆಚ್ಚಾಗಿದೆ! ಈ ರೀತಿ ಆದರೆ ಪ್ರಯೋಜನವೇನು ಎಂದು ಜನಗಳಿಗೆ ಎನ್ನಿಸುತ್ತದೆ. ಸರ್ಕಾರದವರು ಯಾರಿಗೋ ಕೆಲವರಿಗೆ ಸಂಬಳಕೊಡುವ ಉದ್ದೇಶದಿಂದ ಈ ಫ್ಯಾಕ್ಟರಿ ಇಟ್ಟುಕೊಂಡಿದ್ದಾರೆಯೆ ಅಥವಾ ಇನ್ನಾವುದಾದರೂ ಉಪಯೋಗಕ್ಕಾಗಿ ಇಟ್ಟುಕೊಂಡಿದ್ದಾರೆಯೆ ಎಂಬುದು ಸಾಮಾನ್ಯಪ್ರಜೆಗೂ ಗೊತ್ತಾಗತಕ್ಕ ವಿಷಯ. ಆದ್ದರಿಂದ ಸರ್ಕಾರದವರು ಯಾವ ಒಂದು ಉದ್ಯಮವನ್ನು ತೆಗೆದರೂ ಕೂಡ ಅದನ್ನು ಬಹಳ ಹುಷಾರಾಗಿ, ಬಂದೋಬಸ್ತಾಗಿ ಬಂಡವಾಳ ವ್ಯಯವಾಗದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗತಕ್ಕ ಮಾರ್ಗವನ್ನು ಯೋಚನೆ ಮಾಡಬೇಕು. ಆದಷ್ಟು ಜಾಗ್ರತೆ ಮೆಷಿನರಿ ತರಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಈ ಕೈಗಾರಿಕೆಯನ್ನು ಉತ್ತಮರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರದೇ ಆಗಲಿ ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನವರದೇ ಆಗಲಿ ಫಾರೆಸ್ಟ್ ಹೆಂಡ್ಲಿಂಗ್‌ನಲ್ಲಿರುವ ಕೈಗಾರಿಕೆ ಯಾವುದೇ ಆದರೂ ಅದಕ್ಕೆ ಮರವನ್ನು ಒದಗಿಸತಕ್ಕ ಜವಾಬ್ದಾರಿ ಅವರ ಮೇಲಿದೆ. ಈ ಫ್ಯಾಕ್ಟರಿಯನ್ನು ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿನವರು ತೆಗೆದುಕೊಂಡು ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಮರವನ್ನು ತರಿಸಿಕೊಂಡು ಉತ್ತಮವಾಗಿ ಏಕೆ ನಡೆಸಬಾರದು ಎಂಬ ಸಲಹೆಯನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ. ಆದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ಬಹಳ ತೀವ್ರವಾಗಿ ಆಲೋಚನೆಮಾಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯ ಪಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಸ್ವಾಮಿ ಈ ಖೋತಾ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಶ್ರೀಮಾನ್ ಮೂಡಲಗಿರಿಗೌಡರು ಈ ಕಾರ್ಖಾನೆಯ ವಿಚಾರದಲ್ಲಿ ಅಂಶಗಳನ್ನು ವಿಶದಪಡಿಸಿದ್ದಾರೆ. ಅರಣ್ಯ ಶಾಖೆಯ ಸಚಿವರು ಹೇಳಿದರು—ಇದರಿಂದ ವಿದ್ಯಾಭ್ಯಾಸ ಇಲಾಖೆಗೆ ಬೇಕಾದಷ್ಟು ಉಪಕರಣಗಳು ಫರ್ನಿಚರ್‌ಗಳು ಸರಬರಾಯಿಯಾಗುತ್ತಿದೆಯೆಂದು. ನಾನು ತುಮಕೂರಿನಲ್ಲೇ ಇದ್ದವನಾಗಿ ಅದು ಎಷ್ಟರಮಟ್ಟಿಗೆ ಕೆಲಸಮಾಡುತ್ತಿದೆಯೆಂದು ಖುದ್ದಾಗಿ ನೋಡಿದ್ದೇನೆ. ಆ ಕಾರ್ಖಾನೆಯಲ್ಲಿ ಒಬ್ಬ ಕೂಲಿಯವನಾಗಲಿ ಇದ್ದಾನೆಯೇ, ಒಬ್ಬನಾದರೂ ಕೆಲಸ ಮಾಡುವವನಿದ್ದಾನೆಯೇ ಎಂಬುದನ್ನು ಹೇಳಲಿ, ನೋಡೋಣ. ಅಲ್ಲಿನ ವಾಸ್ತವ ವಿದ್ಯಮಾನ ಇದು. ಮೊದಲು ಇದನ್ನು ಪ್ರಾರಂಭ ಮಾಡುವಾಗ ಬೇಕಾದಷ್ಟು ಉಪಹಾರಗಳು ಇಲ್ಲಿ ನಡೆದವು. ವನಮಹೋತ್ಸವಗಳಿಗೆ ಹೋದಂಥ ನಮಗೆಲ್ಲಾ ಚೆನ್ನಾಗಿ ತಿಂಡಿ ತೀರ್ಥ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಬೇಕಾದಷ್ಟು ಭಾಷಣಗಳು ನಡೆದದ್ದನ್ನೂ ಕೇಳಿದ್ದೇವೆ. ಅಷ್ಟೇ ವಿನಾ ಅಲ್ಲೇನೂ ಬೇರೆ ಕೆಲಸ ನಡೆಯುತ್ತಿಲ್ಲ. ಅದನ್ನು ನೋಡಿರುವವರೆಲ್ಲರೂ ಇದನ್ನು ಒಪ್ಪುತ್ತಾರೆಂದು ನಂಬಿದ್ದೇನೆ. ಪ್ರಾರಂಭದಲ್ಲಿ ನಾವೂ ಇದು ರೈತರಿಗೆ ಬೇಕಾದ ಮರ ಮುಟ್ಟುಗಳನ್ನೂ ಗಾಡಿ ಸಾಮಾನುಗಳನ್ನೂ ತಯಾರು ಮಾಡಿ ಒದಗಿಸುವುದಕ್ಕೆ ಅನುಕೂಲವಾಗುತ್ತದೆಂದು ಭಾವಿಸಿದ್ದೆವು. ಸಾಮಾನ್ಯವಾಗಿ ಎಲ್ಲರೂ ಮಲೆನಾಡಿಗೆ ಅಷ್ಟುದೂರ ಹೋಗಿ ಸಾಮಾನುಗಳನ್ನು ತರುವುದಕ್ಕಾಗುವುದಿಲ್ಲ. ಅಂಥವರಿಗಾಗಿ ಹೀಗೆ ಸಹಾಯ ಮಾಡಿದಂತಾಗುತ್ತದೆಂದು ತಿಳಿದಿದ್ದೆವು. ಅವರೂ ಕೂಡಾ ಇದನ್ನೇ ಹೇಳುತ್ತಿದ್ದರು. ಜೊತೆಗೆ ಫರ್ನಿಚರ್ ಕಾರ್ಖಾನೆಯೆಂದಮೇಲೆ ಸರ್ಕಾರದವರಿಗೆ ಬೇಕಾದ ಎಲ್ಲಾ ಫರ್ನಿಚರ್‌ಗಳನ್ನೂ ಇಲ್ಲಿಯೇ ತಯಾರಿಸುತ್ತಾರೆ, ಬೇರೆ ಯಾರಿಗೂ ಕಂಟ್ರಾಕ್ಟ್ ಕೊಡುವುದಿಲ್ಲವೆಂದು ನಾವು ನಂಬಿದ್ದೆವು. ಆದರೆ, ಈಗ ಏನಾಗಿದೆಯೆಂದರೆ, ಅಲ್ಲಿ ತೇಗದ ಮರಗಳನ್ನು ತರಿಸುವುದೇ ಇಲ್ಲ. ಬರೀ ಕಾಡುಮರಗಳನ್ನು ತರಿಸಿ ಅದನ್ನೂ ಕಂಟ್ರಾಕ್ಟ್ ಮೇಲೆ ಊರಿನವರಿಗೆ ಸಾಮಾನುಗಳನ್ನು ಮಾಡುವುದಕ್ಕೆ ಕೊಡುತ್ತಾರೆ. ಅವರು ಮಾಡುವುದೂ ಬೆಂಚು, ಸ್ಟೂಲು ಎರಡೇ. ಸ್ಟೂಲಿಗೆ ಒಂದೂವರೆ ರೂಪಾಯಿನಂತೆಯೂ, ಬೆಂಚಿಗೆ, ಅದೂ ಸೊಟ್ಟಾ ಪಟ್ಟೆ ಇರುವುದಕ್ಕೆ, 5—6 ರೂಪಾಯಿಗಳಂತೆಯೂ ಛಾರ್ಜ್ ಮಾಡಿ ಇಲಾಖೆಯವರಿಗೆ ಒದಗಿಸುತ್ತಾರೆ; ಅಷ್ಟೆ. ಈ ಫ್ಯಾಕ್ಟರಿಯಲ್ಲಿ ಮಾಡಿದ ಬೆಂಚನ್ನೂ ನೋಡಲಿ, ಹೊರಗಡೆ ಮಾಡಿದ್ದನ್ನೂ ನೋಡಲಿ; ಯಾರೇ ಆಗಲಿ ಅದಕ್ಕೆ ಸರಿಯಾದ ಬೆಲೆ ಕೊಡಬಹುದು ಎನ್ನುತ್ತಾರೆಯೇ? ಏನೆಂದರೆ ವಿದ್ಯಾಭ್ಯಾಸ ಇಲಾಖೆಯವರ ಮಾರೀಫತ್ತು ನಡೆಯುತ್ತಿದೆ. ಅವರು ಕೊಳ್ಳಬೇಕೇ ಹೊರತು ಬೇರೆ competitive market ನಲ್ಲಿ ಯಾರೂ ಅದನ್ನು ಮುಟ್ಟುವುದಿಲ್ಲ. ಬೇಕಾದರೆ ಇವೊತ್ತು ಪರೀಕ್ಷೆಮಾಡಿ; ಅವುಗಳಲ್ಲಿ ಒಂದು ಸಾಮಾನೂ ಸರಿಯಾದ ಸ್ಥಿತಿಯಲ್ಲಿಲ್ಲ. ತಾವು ಯಾವುದೇ ಒಂದು ಕೆಲಸವನ್ನು ಮಾಡಿದರೂ ಅದನ್ನು perfect ಆಗಿ ನಡೆಸಬೇಕು. ಇಲ್ಲದಿದ್ದರೆ ಇಲ್ಲಿ ತಯಾರಾದ ಸಾಮಾನುಗಳು ಇಂಥ ಸ್ಥಿತಿಯಲ್ಲಿವೆಯೆಂದು ಯಾರಾದರೂ

(ಶ್ರೀ ಬಿ. ಹುಚ್ಚೇಗೌಡರು).

ನೋಡಿದರೆ, ಇನ್ನು ಸರ್ಕಾರಿ ಕೆಲಸಕಾರ್ಯಗಳ ವಿಚಾರದಲ್ಲಿ ಅವರ ಕಾರ್ಯ ದಕ್ಷತೆ, ಲೋಪದೋಷ ಏನಿರಬಹುದೆಂದು ಬೇಜಾರು ಪಟ್ಟುಕೊಳ್ಳುತ್ತಾರೆ. ಮಾಡುವುದಕ್ಕೆ ಒಂದು ವೇಳೆ ಕೈಯಲ್ಲಿ ಸಾಧ್ಯವಿಲ್ಲದಿದ್ದರೆ ಅದನ್ನು ಮುಚ್ಚಿಬಿಡಿ. ಆ ಕಾರ್ಖಾನೆಗೆ ಬೇರೆ ಒಬ್ಬ ದೊಡ್ಡ ಅಧಿಕಾರಿಗಳನ್ನು ನೇಮಿಸಿದ್ದೀರಿ. ಅದಕ್ಕೆ ಬೇರೆ ಕಟ್ಟಡಗಳು; ಸಾವಿರಾರು ರೂಪಾಯಿ ಕೊಟ್ಟು ಜಮೀನುಗಳನ್ನು ಅಕ್ವೈರ್‌ಮಾಡಿ ಕೊಟ್ಟಿದ್ದೀರಿ. ಇಷ್ಟೆಲ್ಲಾ ಖರ್ಚಿಟ್ಟು ನಡೆಸುತ್ತಿರುವ ಕಾಲದಲ್ಲಿ ಬೆಟ್ಟ ಅಗೆದು ಇಲಿಯನ್ನು ಹಿಡಿದು ಹಾಕಿದ ಹಾಗೆ ಒಂದು ಸ್ಟೂಲು, ಒಂದು ಅವಲಕ್ಷಣವಾದ ಬೆಂಚು ಇವನ್ನು ತಯಾರಿಸಿದರೆ ಜನರಿಗೆ ಎಷ್ಟು ಬೇಸರವಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ನಿಜವಾಗಿಯೂ ಮೊದಲು ಅದನ್ನು ತೆರೆದ ಉದ್ದೇಶವೇನಿತ್ತು? ಏಕೆ ಆ ಕಾರ್ಖಾನೆಯನ್ನು ತೆಗೆದರು? ಈಗೇನಾದರೂ ಅದರಿಂದ ಪ್ರಯೋಜನವಾಗುತ್ತದೆಯೇ ಜನರಿಗಾಗಿಯಾಗಲಿ ಸರ್ಕಾರದವರಿಗೇ ಆಗಲಿ ಅವರ ಆವಶ್ಯಕತೆಗೆ ಬೇಕಾದ ಫರ್ನಿಚರ್‌ನ್ನಾಗಲಿ ಇಲ್ಲವೇ ರೈತರಿಗೆ ಬೇಕಾದ ಗಾಡಿ ಸಾಮಾನು ಮರಮುಟ್ಟುಗಳನ್ನಾಗಲಿ ಒದಗಿಸುವುದಕ್ಕೆ ಅನುಕೂಲವಾಗಿದೆಯೇ ಎಂದರೆ ಇದಾವ ಅಂಶಗಳನ್ನೂ ಅದು satisfy ಮಾಡುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಜನಗಳಿಗೆ ನಿಮ್ಮ ಲೋಪದೋಷ ಹೆಚ್ಚಿಗೆ ಪ್ರಚಾರವಾಗದಿರಲಿ, ತಮ್ಮ ಗೌರವ ಉಳಿಯಲಿ ಎಂಬ ಉದ್ದೇಶದಿಂದ ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಹೇಳುತ್ತೇನೆ.

Sri T. CHANNIAH.—Sir, it is not correct to say that the working of the factory is unsatisfactory. Though the Hon'ble Member Sri B. Hutche Gowda is residing at Tumkur Town from a very long time, I think he has perhaps not visited and seen the working of the factory. I have myself visited the factory a few weeks back and know the truth about the working of the factory to some extent. The factory, Sir, started working only from 1st April 1950. During the first year of its working, *i.e.*, up to March 1951, it yielded a revenue of Rs. 3,277-13-0, after deducting the depreciation on the capital cost of the building, namely, Rs. 797 on 15,938 adjusted to the end of March 1951. No depreciation on machinery has been deducted as the machines have not been fully installed and put into operation. So, this result was achieved in spite of several difficulties, particularly, non-availability of machinery. The wood working machinery was not available. Still by the end of 31st March 1952, 2,025 benches, 1,043 stools and 200 black-boards were supplied to the several educational institutions on their indents.

Sri B. HUTCHE GOWDA.—By force.

Sri T. CHANNIAH.—Not by force, but on their request they have been supplied. The selling price was fixed to provide profit of one rupee for a bench, annas 4 for a stool and Rs. 2-7-6 for a black-board, after providing for depreciation and payment of value of the wood and proportionate establishment and other incidental charges. The supply of sitting planks to Educational institutions has also been taken up. The machinery costing Rs. 18,788 is already supplied for the further extension of the factory during the year. After the factory is fully equipped, its activities are bound to yield substantial revenue. My friends have expressed the doubt that it is not yielding profit to the extent of their expectations. Perhaps, they are not aware that the machineries that have already been installed are not working at present. When they are fully installed and allowed to work, then only we can expect the maximum revenue that we can expect.

Apart from the revenue from the factory, the indirect benefit accrued is the utilization of the species of timber which is otherwise going to waste, namely, hard wood like teak the stock of which is depleting. So, it is for the consideration of the Members who spoke just now, Sir, to fully realise that the money we have spent, that we are going to spend hereafter, will be of immense use not only to the public but also to the many institutions of Government.

My friend Sri Mudalagiri Gowda said that Government have spent nearly $\frac{3}{4}$ lakh of rupees on this factory. It is not correct. We have not spent so much money. As I have already said, we are going to get machineries costing not $\frac{3}{4}$ lakh but Rs. 30,000. When all these are installed, we are going to get the full benefits out of this factory.

I assure the Hon'ble Member Sri T. N. Mudalagiri Gowda and Sri B. Hutche Gowda that this factory is going to become a fully equipped factory and after that it will yield the

maximum revenue to the factory and to the Department.

In the light of this explanation, I request the Hon'ble mover of the cut motion to withdraw the cut motion.

Sri T. N. MUDALAGIRI GOWDA.—I seek the leave of the House to withdraw my cut motion.

The cut motion was, by leave, withdrawn.

Mr. SPEAKER.—Any debate on the main demand?

(**Sri B. HUTCHE GOWDA** *rose*).

Mr. SPEAKER.—One fact I may bring to the notice of Hon'ble Members. It looks as though some Members are anxious, and naturally too, to speak on the election of the Deputy Speaker and congratulate the successful candidate. We have not much time. It is for the House to consider.

Sri B. HUTCHE GOWDA (Turuvekere).—You can allow some more time, Sir.

ಸ್ವಾಮಿ ಈ ಇಲಾಖೆಯಲ್ಲಿ ರಿಸರ್ಚ್ ಕೆಲಸ ನಡೆಯುತ್ತಿದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ನಿಜವಾಗಿ ನಮ್ಮ ಮೈಸೂರು ದೇಶದಲ್ಲಿ ರಿಸರ್ಚ್ ಕೆಲಸಕ್ಕೆ ಇಷ್ಟು ಅಗತ್ಯವಿದೆಯೆಂದು ನಾನು ಭಾವಿಸುವುದಿಲ್ಲ. ಈಗ ಅಖಿಲ ಭಾರತಕ್ಕೆ ಸಂಬಂಧಪಟ್ಟಂತೆ ಈ ಕಾರ್ಯಕ್ಕಾಗಿ ಡೆಹರಾಡೂನಿನಲ್ಲಿ ಒಂದು ಸಂಸ್ಥೆಯಿದೆ, ಒಂದು ರಿಸರ್ಚ್ ಇನ್‌ಸ್ಟಿಟ್ಯೂಟ್ ಇದೆ, ಒಂದು ಫಾರೆಸ್ಟ್ ಕಾಲೇಜಿದೆ. ಅದರ ಉಪಯೋಗವನ್ನು ನಮ್ಮ ದೇಶದವರೂ ಪಡೆಯುವುದಕ್ಕೆ ಅವಕಾಶವಿದೆ. ಕೇಂದ್ರ ಸರ್ಕಾರದವರ ಆಡಳಿತದಲ್ಲಿ ಅಲ್ಲಿ ರಿಸರ್ಚ್ ಕೆಲಸ ನಡೆಯುತ್ತಿದೆ. ಅಲ್ಲಿ ನಮ್ಮ ದೇಶದವರು ಶಿಕ್ಷಣ ಪಡೆದು ಅನುಭವ ಪಡೆಯಲು ಅವಕಾಶವಿದೆ. ಇನ್ನು ದಕ್ಷಿಣಇಂಡಿಯಾದಲ್ಲಿ ಮದರಾಸಿನಲ್ಲಿ ಒಂದು ಫಾರೆಸ್ಟ್ ಸ್ಕೂಲಿದೆ. ಅಲ್ಲಿಯೂ ಕೂಡ ರಿಸರ್ಚ್ ನಡೆಸುತ್ತಾರೆ. ಇದರ ಫಲವನ್ನೂ ನಾವು ಉಪಯೋಗಿಸಿಕೊಳ್ಳಬಹುದು. ಈಗ ಇಂಡಿಯಾದೇಶವೆಲ್ಲಾ ಒಂದೇ ಯೂನಿಟ್ ಆಗಿರುವಾಗ ನಮಗೆ ಯಾವ ತಾಪತ್ರಯವೂ ಇಲ್ಲ. ತಿರುವಾಂಕೂರಿನಲ್ಲಿ ಅರಣ್ಯಗಳಿಂದ ಒಂದೂವರೆ ಕೋಟಿ ರೂಪಾಯಿ ಉತ್ಪತ್ತಿ ಇದೆ. ಮೈಸೂರಿನಲ್ಲಿ ಯಾವಪರಿಸ್ಥಿತಿ ಇದೆ ಎಂಬುದನ್ನು ಯೋಚನೆ ಮಾಡಿದರೆ ಇಲ್ಲಿ ಇಷ್ಟು ಖರ್ಚು ಮಾಡುವ ಅಗತ್ಯವಿಲ್ಲ. ಆದಕಾರಣ ಇದನ್ನು ಪೂರ್ತಿ ತೆಗೆದು ಹಾಕುವುದು ಅನುಕೂಲವೆಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

ಇನ್ನು ಬೆಂಗಳೂರಿಗೆ ಸೌದೆ ಸರಬರಾಯಿ ವಿಚಾರ ಹೇಳಿದರು. ಈ ಸೌದೆ ಯಾವರೀತಿ ಇರಬೇಕು? ಮರ ಮುಟ್ಟು ವಗೈರೆ ಸಾಮಾನುಗಳಾಗುವ ಮರಗಳು ಸೌದೆಗಾಗಿ ಹೋಗುತ್ತಿವೆ. ಇಂಥಾದ್ದನ್ನು ತಪ್ಪಿಸಬೇಕಾದುದು ಅವಶ್ಯಕ. ವಿವೇಚನೆಯಿಲ್ಲದೆ ಮರಗಳನ್ನು ಕಡಿಯುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಇದರಲ್ಲಿ ಸರ್ಕಾರಕ್ಕೆ ಸರಿಯಾದ ಆದಾಯ ಸಲ್ಲುತ್ತಿಲ್ಲ. ಇನ್ನೊಂದು ವಿಷಯ. ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ನಾನು ಮೂವತ್ತು ವರ್ಷಗಳಿಂದ ನೋಡುತ್ತಿರುವಹಾಗೆ ಸೌದೆ ಉಪಯೋಗಿಸುತ್ತಿದ್ದಾರೆ. ಅಲ್ಲಿ ಈಗಲೂ ಕೂಡಾ ನೋಡಿದರೆ ಬೇಕಾದಷ್ಟು ತೇಗದ ತುಂಡುಗಳು ಬೆಂಕಿಗೆ ಬಿದ್ದು ಭಸ್ಮವಾಗುತ್ತಿವೆ. ಹಿಂದೆ ತೇಗದ ಮರಕ್ಕೆ ಅಷ್ಟು ಧಾರಣೆ ಇರಲಿಲ್ಲ. ಈಗ ಅದರ ಬೆಲೆ ಹೆಚ್ಚಿರುವಾಗ ಅದಕ್ಕೆ ಹೆಚ್ಚು ನಿಗಾ ಕೊಡಬೇಕು. ಮುಖ್ಯವಾಗಿ ಕೆಲಸಕ್ಕೆ ಬೇಕಾದ ಮರಗಳೆಲ್ಲ ಸೌದೆಗೆ ಹೋಗುತ್ತಿರುವುದು ನಿತ್ಯದ ಕೆಲಸವಾಗಿದೆ. ಇದನ್ನು ತಪ್ಪಿಸಬೇಕು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ತೇಗದ ಮರವನ್ನು ಸೌದೆಗೆ ಉಪಯೋಗಿಸುತ್ತಾರೆಂದು ಶ್ರೀಮಾನ್ ಹುಚ್ಚೇಗೌಡರು ಹೇಳಿರುವುದನ್ನು refute ಮಾಡುತ್ತೇನೆ. ಒಂದು ವೇಳೆ ಹಾಗೇನಾದರೂ ಇದ್ದರೆ ಅದನ್ನು ಸರಿಯಾಗಿ ಗಮನಕ್ಕೆ ತಂದರೆ, ಸರಿಪಡಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು.—ಮಲೆನಾಡಿನಿಂದ ಬಂದಿರುವ ಸದಸ್ಯರನ್ನು ಕೇಳಲಿ, ಹೇಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ನಾನೂ ಮಲೆನಾಡಿನಿಂದ ಬಂದವನು; ತೇಗದ ಮರವನ್ನು ಬೆಂಕಿಗೆ ಉಪಯೋಗಿಸುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇದು ಎಲ್ಲರೂ ನೋಡಿರುವ ವಿಚಾರ. ಭದ್ರಾವತಿಯಲ್ಲಿ ಈ ಹೊತ್ತು ಇದು ಹೊಸದಾಗಿ ನಡೆಯುತ್ತಿಲ್ಲ. ಮೂವತ್ತು ವರ್ಷಗಳಿಂದ ನಡೆಯುತ್ತಿದೆ. ಕಬ್ಬಿಣದ ಕಾರ್ಖಾನೆಯಲ್ಲಿ ಬೇಕಾದರೆ ಈಗಲೂಕೂಡಾ ಖುದ್ದಾಗಿ ಹೋಗಿ ಮಂತ್ರಿಗಳು ನೋಡಬಹುದು. ಅವರು ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ.

ಇನ್ನೊಂದು ವಿಷಯವೇನೆಂದರೆ, ಅಫಾರೆಸ್ಟೇಷನ್ ಈ ವಿಚಾರ ಬಹಳ ಹೇಳಿದರು. ಇದು ಗಿಡಗಳನ್ನು ನೆಡುವುದಕ್ಕೆ ಸಂಬಂಧಿಸಿದ್ದು. ನಮ್ಮ ಡಿಸ್ಟ್ರಿಕ್ಟಿನಲ್ಲಿ, ನಾವು ಹೇಳುವುದಾದರೆ ಅನೇಕ ಅರಣ್ಯಗಳಿವೆ; ಒಂದು ಗಿಡವೂ ಅಲ್ಲಿಲ್ಲ. ಇದೆಯೆಂದು ಬೇಕಾದರೆ ರೆವಿನ್ಯೂ ಮಂತ್ರಿಗಳು contradict ಮಾಡಲಿ. ಅದರಲ್ಲಿ ಯಾವ ಮರವೂ ಇಲ್ಲ. ಆ ಜಮೀನನ್ನು ರೈತರಿಗೆ ಸಾಗುವಳಿಗೂ ಕೊಡುವುದಿಲ್ಲ. ಅಥವಾ ಸರ್ಕಾರದವರು ಅಲ್ಲಿ ಮರಗಳನ್ನೂ ಬೆಳೆಸುವುದಿಲ್ಲ. ಹೀಗಾದರೆ ಅರಣ್ಯ ಹೇಗೆ ಹೆಚ್ಚಬೇಕು? ದೇಶದ ಜಮೀನಿನಲ್ಲಿ ಶೇಕಡ 25 ರಷ್ಟು ಅರಣ್ಯವಿರಬೇಕೆಂಬುದು ನಿಜ. ಆದರೆ ಸರ್ಕಾರದವರು ಮರಗಳನ್ನು ಬೆಳೆಸದೇ ಇರುವಾಗ ಬೇರೆ ಖಾಸಗೀ ಜನರು ತೆಗೆದುಕೊಂಡು ಮರಗಳನ್ನು ಬೆಳೆಸುವುದಾದರೆ ಏಕೆ ಕೊಡಬಾರದು? ಅಲ್ಲಿ ಒಂದು ರೂಪಾಯಿ ಬಾಳುವ ಒಂದು ಗಿಡ ಕೂಡಾ ಇಲ್ಲ. ಅದನ್ನು ಫಾರೆಸ್ಟ್ ಎಂದು ಹೇಳುವುದರಲ್ಲಿ ಏನು ಅರ್ಥ? ಸುಮ್ಮನೆ ಸಿಬ್ಬಂದಿಗೆ ಖರ್ಚು. ಪರೀಕ್ಷಾರ್ಥವಾಗಿಯಾದರೂ ರೈತರಿಗೆ ಕೆಲವು ಜಮೀನನ್ನು ಕೊಡಲಿ. ಈಗೇನೋ ರೈತರಿಗೆ ಕೆಲವುಕಡೆ ಜಮೀನು ಕೊಟ್ಟಿದ್ದಾರೆ. ಆದರೆ ಹಂಗಾಮಿ ವ್ಯವಸಾಯಕ್ಕೆ ಕೊಟ್ಟಿದ್ದಾರೆ; ಅನೇಕ ವರ್ಷಗಳಿಂದ ಹೀಗೆಯೇ ನಡೆಯುತ್ತಿದೆ. ಹೀಗಾದರೆ ಅವರು ಜಮೀನು ತಮ್ಮದು ಎಂದು ಭಾವಿಸಿ ಸಾಗುಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ತಪ್ಪಿಸಿ ಎಲ್ಲಿ ಫಾರೆಸ್ಟ್ ಮಾಡಿ ಗಿಡಗಳನ್ನು ಬೆಳೆಸುವುದಕ್ಕೆ ಅನುಕೂಲವಿದೆಯೋ ಅಲ್ಲಿ

(ಶ್ರೀ ಬಿ. ಹುಚ್ಚೇಗೌಡರು)

ಬೆಳೆಸಲಿ; ಇಲ್ಲದಿದ್ದಲ್ಲಿ ರೈತರಿಗೆ ಕೊಡಲಿ. ದೇಶಕ್ಕೆ ಹೆಚ್ಚು ಆದಾಯ ಬರುವ ರೀತಿ ಮಾಡಲಿ.

5 P.M.

Mr. SPEAKER.—It is now Five of the Clock. I will put the rest of the demands. The question is—

"That the respective sums not exceeding the amounts shown in the list of demands circulated to Members be granted to Government to complete the sums necessary to defray the charges which will come in course of payment during the year ending 31st day of March 1953, in respect of Demands Nos. 4, 5, 13 and 36".

The motion was adopted.

[As directed by the Speaker, the motions for Demands for Grants which were adopted by the House are reproduced below.]

DEMAND No. 4.—FOREST.

10. FOREST.

"That a sum not exceeding Rs. 25,12,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Forest'."

DEMAND No. 5—REGISTRATION.

11. REGISTRATION.

"That a sum not exceeding Rs. 3,23,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Registration'."

DEMAND No. 13—GENERAL ADMINISTRATION.

(District Administration).

25. GENERAL ADMINISTRATION (F. DISTRICT ADMINISTRATION).

"That a sum not exceeding Rs. 22,76,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'General Administration (F. District Administration)'."

DEMAND No. 36—WORKING EXPENSES.

(Forest).

X. FOREST—3. (1) WOOD PRESERVATION PLANT—WORKING EXPENSES AND SEIGNIORAGE.

"That a sum not exceeding Rs. 2,00,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'X. Forest—3 (1) Wood Preservation Plant—Working Expenses and Seigniorage'."

Request for more time for considering Demands.

Janab J. MOHAMED IMAM.—I made a submission this morning to increase the number of days and reduce the number of Demands on each day in view of the fact that on the first day alone we have not been able to cover up all Demands. I think the Minister said that they would.........

Sri Kadidal MANJAPPA (Minister for Revenue and Public Works).—Except Demands under 'General Administration' they have covered all the Demands.]